ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 4 ಭಾನುವಾರ 2022

ಸಂಪುಟ: 43 | ಸಂಚಿಕೆ: 139 | ಪುಟಗಳು: 10


₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com



ಇಂದು ಜಗವ ಸುತ್ತುವ ಮಾಯೆ ಪುಸ್ತಕ ಬಿಡುಗಡೆ ಸಮಾರಂಭ



ಮೈಸೂರು,ಸೆ.3–ಮೈಸೂರಿನ ಕವಿತಾ ಪ್ರಕಾಶನ ಹೊರತಂದಿರುವ ಸುಚಿತ್ರ ಹೆಗ್ಡೆಯವರು ಬರೆದಿರುವ 'ಜಗವ ಸುತ್ತುವ ಮಾಯೆ' ಪ್ರವಾಸ ಕಥನವನ್ನು ನಾಳೆ (ಸೆ.4) ಬೆಳಗ್ಗೆ 11 ಗಂಟೆಗೆ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಗುವುದು. ಬರಹಗಾರ ಮತ್ತು ಪತ್ರಕರ್ತ ಜೋಗಿ ಪುಸ್ತಕ ಬಿಡುಗಡೆ ಮಾಡುವರು. ಪತ್ರಕರ್ತ ಮತ್ತು ಪ್ರಕಾಶಕ ಜಿ.ಎನ್.ಮೋಹನ್ ಪುಸ್ತಕ ಕುರಿತು ಮಾತನಾಡುವರು. ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆಯಲ್ಲಿ ಕವಿತಾ ಪ್ರಕಾಶನದ ಗಣೇಶ್ ಅಮೀನ್‌ಗಢ ತಿಳಿಸಿದ್ದಾರೆ.

ಹಬ್ಬದ ರಿಯಾಯಿತಿ ಮಾರಾಟ: ಇಂದು ಅಂತ್ಯ

ಮೈಸೂರು,ಸೆ.3–ಮೈಸೂರಿನ ಹೋಟೆಲ್ ಸದರನ್ ಸ್ಟಾರ್ (ಹೋಟೆಲ್ ರಿಗಾಲಿಸ್)ನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬ್ರ್ಯಾಂಡೆಡ್ ರೆಡಿಮೇಡ್ ಬಟ್ಟೆಗಳ ಮೇಲೆ ಭಾರೀ ರಿಯಾಯಿತಿ ಮಾರಾಟ ಇಂದು (ಸೆ.4) ಅಂತ್ಯಗೊಳ್ಳಲಿದೆ. ಇಂದು ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಮಾತ್ರ ಮಾರಾಟವಿರುತ್ತದೆ. ಮಹಿಳೆಯರು, ಪುರುಷರು ಮತ್ತು ಮಕ್ಕಳ ಶರ್ಟ್, ಪ್ಯಾಂಟ್ಸ್, ಟೀ ಶರ್ಟ್,



ಬ್ಲೇಜರ್, ಬರ್ಮುಡಾ, ಕುರ್ತಾಸ್, ಟಾಪ್ಸ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಡ್ರೆಸಸ್, ಜಾಕೆಟ್ಸ್, ಪೈಜಾಮ್‌ಗಳ ಭಾರೀ ಮಾರಾಟವಿದೆ. ವಿವಿಧ ರೀತಿಯ ಪ್ಯಾಂಟಿ ಮತ್ತು ಬ್ರಾಗಳು ಲಭ್ಯವಿದೆ. ಬೆಡ್‌ಶೀಟ್ಸ್, ದಿವಾನ್‌ಸೆಟ್, ಸೋಫಾ ಸೆಟ್, ಸೋಫಾ ಕವರ್ಸ್ ಮತ್ತು ಟೇಬಲ್ ಕ್ಲಾತ್ಸ್ ಕೂಡ ರಿಯಾಯಿತಿ ದರಕ್ಕೆ ಲಭ್ಯವಿದೆ.

ಸೆ.6ರಂದು ರಾಜ್ಯ ಸರ್ಕಾರಿ ನೌಕರರ ದಿನಾಚರಣೆ

ಬೆಂಗಳೂರು, ಸೆ. 3(ಕೆಎಂಶಿ)– ಸೆಪ್ಟೆಂಬರ್ 6ರಂದು ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನು ಆಯೋಜಿಸಲಾಗಿದೆ. ಅಂತೆಯೇ, ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಲಾಗಿರುವ ಈ ಕಾರ್ಯಕ್ರಮದ ಜೊತೆಗೆ ರಾಜ್ಯ ಸರ್ಕಾರಿ ಸೇವೆಯಲ್ಲಿ ಅನುಪಮ ಸೇವೆ ಸಲ್ಲಿಸಿ ಗಮನಾರ್ಹ ಸಾಧನೆ ಮಾಡಿರುವ 30 ಸರ್ಕಾರಿ ಅಧಿಕಾರಿ ಮತ್ತು ನೌಕರರಿಗೆ ಇದೇ ಸಂದರ್ಭದಲ್ಲಿ 2022ನೇ ಸಾಲಿನ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆಡಳಿತ ಸುಧಾರಣಾ ವಿಭಾಗದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀವತ್ಸ ಕೃಷ್ಣ ಅವರು ಪ್ರಕಟಿಸಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆಯೋಜಿಸಿರುವ ಈ ಎರಡೂ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಅಲ್ಲದೆ, ಈಗಾಗಲೇ ಆಯ್ಕೆಯಾಗಿರುವ ಸರ್ಕಾರಿ ಅಧಿಕಾರಿ ಮತ್ತು ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಚಿವರು, ಸಂಸದರು, ಶಾಸಕರು, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರನ್ನು ಒಳಗೊಂಡಂತೆ ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಪಿ.ಷಡಕ್ಷರಿಸ್ವಾಮಿ ಸೇರಿದಂತೆ ಸಂಘದ ಪದಾಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಸೆ.6ರಂದು ಬೆಳಗ್ಗೆ 11ಕ್ಕೆ ಬೆಂಗಳೂರಿನ ವಿಧಾನ ಸೌಧದ ಔತಣ ಸಭಾಂಗಣದಲ್ಲಿ ನಡೆಯಲಿದೆ. ಸರ್ಕಾರಿ ನೌಕರರಿಗೆ ಅರ್ಧ ದಿನದ ವಿಶೇಷ ಸಾಂದರ್ಭಿಕ ರಜೆ ಸೌಲಭ್ಯವನ್ನೂ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ವಿವಿಧೆಡೆ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ

ಮೈಸೂರು,ಸೆ.3–ವಿವಿ ಮೊಹಲ್ಲಾ ವ್ಯಾಪ್ತಿಯ ಆರ್.ಕೆ.ನಗರ ಇ ಅಂಡ್ ಎಫ್ ಬ್ಲಾಕ್, ಹೆಚ್–ಬ್ಲಾಕ್, ವಿವೇಕಾನಂದ ಸರ್ಕಲ್, ನಿಮಿಷಾಂಬ ಲೇಔಟ್, ಮಧುವನ ಲೇಔಟ್, ಬೆಮೆಲ್ ಲೇಔಟ್, ಶ್ರೀರಾಂಪುರ, ದೇವಯ್ಯನಹುಂಡಿ, ಪ್ರೀತಿ ಲೇಔಟ್, ಸರಸ್ವತಿಪುರಂ, ಗಂಗೋತ್ರಿ, ಕುವೆಂಪುನಗರ, ಜನತಾನಗರ, ಶಾರದಾದೇವಿನಗರ, ಅರವಿಂದನಗರ, ಚಿಕ್ಕಹರದನಹಳ್ಳಿ, ಕುವೆಂಪುನಗರ ಕಾಂಪ್ಲೆಕ್ಸ್, ಅಕ್ಷಯ ಭಂಡಾರ್, ಕೆ.ಜಿ.ಕೊಪ್ಪಲ್, ಡಿವಿಜಿ ಲೇಔಟ್, ಟಿ.ಕೆ. ಲೇಔಟ್, ಗಂಗೋತ್ರಿ ಲೇಔಟ್, ಕೃಷ್ಣಮೂರ್ತಿ ಲೇಔಟ್ ಸುತ್ತಮುತ್ತ ಹಾಗೂ ತುರಗನೂರು, ಯಾಚೇನಹಳ್ಳಿ, ದೊಡ್ಡಮುಲಗೂಡು, ಮೇಣಸಿಕ್ಯಾತನಹಳ್ಳಿ, ಗುಡ್ಡದಕೊಪ್ಪಲು, ಕರಿಹುರುಳಿ ಕೊಪ್ಪಲು, ಅಂಕನಹಳ್ಳಿ, ಕಾಡುಕೊತ್ತನಹಳ್ಳಿ ಪ್ರದೇಶಗಳಲ್ಲಿ ಸೆ.5ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ನಿವೃತ್ತ ಮಹಿಳಾ ಉದ್ಯೋಗಿ ಸರ ಕಿತ್ತುಕೊಂಡು ಪರಾರಿಯಾದ ಖದೀಮರು

ಮೈಸೂರು,ಸೆ.3–ಪತಿ ಜೊತೆ ಹೋಗುತ್ತಿದ್ದ ಜಿಲ್ಲಾ ಖಜಾನೆಯ ನಿವೃತ್ತ ಎಫ್‌ಡಿಎ ಮಹಿಳಾ ಉದ್ಯೋಗಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಟಿ.ಕೆ.ಲೇಔಟ್‌ನಲ್ಲಿ ನಡೆದಿದೆ. ಮೈಸೂರಿನ ಕುವೆಂಪುನಗರ ಪಡುವಣ ರಸ್ತೆ ನಿವಾಸಿ ಪಿ.ಕೆ.ಸಾವಿತ್ರಿ(65) ಸರ ಕಳೆದುಕೊಂಡವರಾಗಿದ್ದು, ಇವರು ಪತಿ ಬಿ.ಆರ್.ಚಂದ್ರಶೇಖರ್ ಜೊತೆ ಸೆ.1ರಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ಟಿ.ಕೆ.ಲೇಔಟ್ 13ನೇ ಕ್ರಾಸ್‌ನ ಬಿಎಸ್‌ಎನ್‌ಎಲ್ ಕಚೇರಿ ಬಳಿ ಹೋಗುತ್ತಿದ್ದಾಗ ಕಪ್ಪು ಬಣ್ಣದ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಇವರ 60 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಗೂಡ್ಸ್ ಆಟೋ ಡಿಕ್ಕಿ: ಬೈಕ್ ಸವಾರ ಸಾವು

ಮೈಸೂರು, ಸೆ.3–ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರು–ಬನ್ನೂರು ಮುಖ್ಯ ರಸ್ತೆಯ ಭುಗತಗಳ್ಳಿ ಬಳಿ ನಡೆದಿದೆ.

ಮೂಲತಃ ನಂಜನಗೂಡು ತಾಲೂಕು ಕೆಂಪಿಸಿದ್ದನಹುಂಡಿ ನಿವಾಸಿಯಾಗಿದ್ದು, ಹಾಲಿ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಕುಮಾರ(28) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತ ಸೆ.1ರಂದು ಸಂಜೆ 4.45ರ ಸುಮಾರಿನಲ್ಲಿ ಸುಜುಕಿ ಆಕ್ಸಿಸ್ ಸ್ಕೂಟರ್ (ಕೆಎ–55 ಇಬಿ 6071)ನಲ್ಲಿ ಬನ್ನೂರು ರಸ್ತೆಯಲ್ಲಿ ತೆರಳುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಗೂಡ್ಸ್ ಆಟೋ (ಕೆಎ–11 ಬಿ 5043) ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕುಮಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಮೈಸೂರು ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಡಿಕ್ಕಿ: ಪಾದಚಾರಿ ಸಾವು

ಕೊಳ್ಳೇಗಾಲ, ಸೆ.3–ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸಾವನ್ನಪ್ಪಿದ ಘಟನೆ ಕೊಳ್ಳೇಗಾಲ ತಾಲೂಕು ಉತ್ತಂಬಳ್ಳಿ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಬಿ.ಮಹದೇವಪ್ಪ(55) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಸೆ.1ರಂದು ಮುಂಜಾನೆ 5.45ರ ವೇಳೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕೊಳ್ಳೇಗಾಲ ತಾಲೂಕು ಆಲಹಳ್ಳಿ ಗ್ರಾಮದ ಎಂ.ಜಗದೀಶ್(45) ಎಂಬಾತ ಚಾಲನೆ ಮಾಡಿಕೊಂಡು ಬಂದ ಹೀರೋ ಹೋಂಡಾ ಸ್ಪ್ಲೆಂಡರ್ (ಕೆಎ–10 ಕೆ 6979) ಇವರಿಗೆ ಡಿಕ್ಕಿ ಹೊಡೆದಿದ್ದು, ತೀವ್ರವಾಗಿ ಗಾಯಗೊಂಡ ಮಹದೇವಪ್ಪ ಅವರಿಗೆ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಂದು ಬೆಳಗ್ಗೆ 10.45ರ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಸಂಬಂಧ ಮಾಂಬಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಹೆಚ್.ಎಂ.ಮಲ್ಲಿಕಾರ್ಜುನ



ಮೈಸೂರು, ಸೆ.3– ಚಾಮರಾಜನಗರ ತಾಲೂಕಿನ ಹೆಬ್ಬಸೂರು ಗ್ರಾಮದ ನಿವಾಸಿ ಹೆಚ್.ಎಂ.ಮಲ್ಲಿಕಾರ್ಜುನ (70) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. ಇವರು ಪತ್ನಿ ಸುಮಾ, ಪುತ್ರರಾದ ವಿಜಯವಾಣಿ ಪತ್ರಿಕೆ ಉಪಸಂಪಾದಕ ಹೆಚ್.ಎಂ.ಅಭಿನಯ್, ಹೆಚ್.ಎಂ.ಅಭಿಲಾಷ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಸೆ.4) ಮಧ್ಯಾಹ್ನ 1 ಗಂಟೆಗೆ ಹೆಬ್ಬಸೂರಿನ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಪಿ.ಷಣ್ಮುಗಂ



ಮೈಸೂರಿನ ಜೆಪಿನಗರ ನಿವಾಸಿ ಬಿ.ಪಿ.ಷಣ್ಮುಗಂ (62) ಅವರು ಶನಿವಾರ ನಿಧನರಾದರು. ಇವರು ಪತ್ನಿ ಕೋಮಲ, ಪುತ್ರ ಭರತ್, ಪುತ್ರಿ ಮೋನಿಕಾ ಸೇರಿದಂತೆ ಅಪಾರ ಬಂಧುಗಳು ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಟ್ಯಾಲಿ ತಂತ್ರಾಂಶ ಕುರಿತು ಸಂವಾದ



ಮೈಸೂರು, ಸೆ.3(ಎಂಕೆ)– ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ವತಿಯಿಂದ 'ಟ್ಯಾಲಿ ತಂತ್ರಾಂಶ' ಕುರಿತು ಸಂವಾದ ಸಭೆ ನಡೆಸಲಾಯಿತು.

ಸಭೆ ಉದ್ಘಾಟಿಸಿದ ಚಳ್ಳಕೆರೆ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಎನ್.ಸತೀಶ್ ಮಾತನಾಡಿ, ವ್ಯಾಪಾರ–ವಹಿವಾಟಿಗೆ ಅತ್ಯುಪಯುಕ್ತವಾದ 'ಟ್ಯಾಲಿ ತಂತ್ರಾಂಶ' ಬಳಕೆ ಮೂಲಕ ಜಿಎಸ್‌ಟಿ ಅರಿವು ಮೂಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ತಂತ್ರಾಂಶವನ್ನು ಎಲ್ಲಾ ರೀತಿಯ ವ್ಯವಹಾರಗಳಲ್ಲಿಯೂ ಬಳಸಲಾಗುವುದು. ಬಿ.ಕಾಂ, ಎಂ.ಕಾಂ, ಎಂಬಿಎ ಇನ್ನಿತರೆ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ 'ಟ್ಯಾಲಿ ತಂತ್ರಾಂಶ'ದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ ಎಂದರು.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ರೈತರ ಬೆಳೆದ ಆಹಾರ ಪದಾರ್ಥಗಳನ್ನು ಖರೀದಿಸಿ ಇತರೆ ಸ್ಥಳಗಳಿಗೆ ಪೂರೈಕೆ ಮಾಡುವ ಕಾರ್ಯದಲ್ಲಿ ತೊಡಗಿಕೊಂಡಿದ್ದೆವು. ಒಂದು ಕಾಲದಲ್ಲಿ ಆಯಿಲ್ (ಅಡುಗೆ ಎಣ್ಣೆ) ರಫ್ತು ದೇಶವಾಗಿದ್ದ ಭಾರತ ಇಂದು ಆಮದು ಮಾಡಿಕೊಳ್ಳುವ ರಾಷ್ಟ್ರವಾಗುತ್ತಿದೆ. ಪೆಟ್ರೋಲ್, ಚಿನ್ನ, ಎಲೆಕ್ಟ್ರಾನಿಕ್ ವಸ್ತುಗಳ ನಂತರದ ಸ್ಥಾನದಲ್ಲಿ ಆಯಿಲ್ ಆಮದು ಮಾಡಿಕೊಳ್ಳಲಾಗುತ್ತಿದೆ. ಹಾಗೆಯೇ ಕೊರೊನಾ ನಂತರ ಆಹಾರ ಪದಾರ್ಥಗಳ ಕೊರತೆ ಉಂಟಾಗುತ್ತಿದ್ದು, ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನದ ಅಳವಡಿಕೆ ಹಾಗೂ ಉತ್ತಮ ಬಿತ್ತನೆ ಬೀಜಗಳ ಬಳಕೆ ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಮಹಿಳಾ ಉದ್ಯಮಿಗಳ ವೇದಿಕೆ (ಎಫ್‌ಓಡಬ್ಲ್ಯೂಇ) ಅಧ್ಯಕ್ಷೆ ರೂಪರಾಣಿ ಮಾತನಾಡಿ, ಸಾಕಷ್ಟು ಜನರಿಗೆ 'ಟ್ಯಾಲಿ ತಂತ್ರಾಂಶ'ದ ಬಗ್ಗೆ ಗೊತ್ತಿಲ್ಲ. ಆದ್ದರಿಂದ ಎಲ್ಲಾ ನಗರಗಳಲ್ಲಿಯೂ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಮೂಲಕ ಯುವಕರನ್ನು, ಮಹಿಳೆಯರನ್ನು ನವ ಉದ್ಯಮಿಗಳನ್ನಾಗಿ ರೂಪಿಸುವುದಾಗಿದೆ ಎಂದರು.

ಬಳಿಕ ಉದ್ಯಮಿ ಸಿ.ಜಿ.ಷಣ್ಮುಖ ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಎಸ್.ಅಚ್ಯುತ, 'ಟ್ಯಾಲಿ ತಂತ್ರಾಂಶ, ಡಿಜಿಟಲ್ ಹಣಕಾಸು ವ್ಯವಹಾರ, ಜಿಎಸ್‌ಟಿ ತೆರಿಗೆ ಹಾಗೂ ಪ್ರಸ್ತುತ ತೆರಿಗೆ ಪದ್ಧತಿಯಲ್ಲಿನ ಬದಲಾವಣೆ ಕುರಿತು ತಿಳಿಸಿಕೊಟ್ಟರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಭಾರತಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ಅದಮ್ಯ ಚೇತನ ಪ್ರಶಸ್ತಿ ಪ್ರದಾನ

ಮೈಸೂರು, ಸೆ.3– ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜಿನ 'ಅದಮ್ಯ ರಂಗ ಶಾಲೆ'ಯಲ್ಲಿ ಸೆ.4ರಂದು ಸಂಜೆ 6.30ಕ್ಕೆ 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಹಾಗೂ 'ಯಮಲೋಕ' ಮಕ್ಕಳ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಗಣ್ಯರು ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯದರ್ಶಿಗಳಾದ ಎನ್.ಕಾವ್ಯ, ಎನ್.ಎ.ಜೀವನ್, ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿಕಾಂ ವಿದ್ಯಾರ್ಥಿನಿ ಕೆ.ಟಿ.ಯಮುನಾ ಅವರಿಗೆ ಪ್ರಸಕ್ತ ಸಾಲಿನ 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ ಎಂದು ರಂಗಶಾಲೆಯ ಅದಮ್ಯ ಚಂದ್ರು ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆ: ಬೆಳ್ಳಿ ಪದಕ



ಮೈಸೂರು, ಸೆ.3(ಎಂಕೆ)– ಮೈಸೂರಿನ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯ ಪ್ರಥಮ ವರ್ಷದ ಫಿಜಿಯೋಥೆರಪಿ ವಿದ್ಯಾರ್ಥಿ ಪ್ರಥಮ್ ಎಸ್.ರಾಜ್ ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಮೂಲತಃ ಮಂಗಳೂರಿನವರಾದ ಇತ್ತೀಚೆಗೆ ರಾಜಸ್ಥಾನದ ಜೋದ್‌ಪುರದಲ್ಲಿ ರೋಲರ್ ಸ್ಕೇಟಿಂಗ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಿದ್ದ '3ನೇ ಶ್ರೇಯಾಂಕದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್–2022'(3RD RANKING ROLLER SKATING CHAMPIONSHIP-2022)ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕಳೆದ ವರ್ಷ ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಗೆದ್ದಿದ್ದ ಪ್ರಥಮ್, ಅ.15ರಂದು ಬೆಂಗಳೂರಲ್ಲಿ ನಡೆಯುವ ರಾಜ್ಯಮಟ್ಟದ ಹಾಗೂ ಡಿಸೆಂಬರ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಪೂರ್ವ ತಯಾರಿ ನಡೆಸುತ್ತಿದ್ದಾರೆ.



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಏರ್ಪಡಿಸಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದ ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಮಕ್ಕಳಾದ ರಚನಾಶ್ರೀ, ಗಿರೀಶ್, ಸಿಂಚನಾ, ಉತ್ತಮ್‌ಚಂದ್ ಜೈನ್ ಹಾಗೂ ಹಿರಿಯ ಪತ್ರಿಕಾ ವಿತರಕರಾದ ಜವರಪ್ಪ ಅವರನ್ನು ಗೌರವಿಸಲಾಯಿತು. ಈ ವೇಳೆ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ, ಜಿಲ್ಲಾಧ್ಯಕ್ಷ ಹೋಮದೇವ ಜೆ.ಎಸ್., ಪದಾಧಿಕಾರಿಗಳಾದ ಸಿ.ಶಿವಣ್ಣ, ಸಿ.ಡಿ.ಹರೀಶ್, ಶ್ರೀಕಾಂತ್, ಬಂಡಿಪಾಳ್ಯ ಶಿವಣ್ಣ, ಎಂ.ಎನ್.ಆರ್.ಸ್ವಾಮಿ, ಹರಿರಾವ್, ರಾಜು, ಈಶ್ವರಪ್ರಸಾದ್, ಗೋವಿಂದ ಶೆಟ್ಟಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಒಡನಾಡಿ ಸಂಸ್ಥೆ, ಅದರ ಮುಖ್ಯಸ್ಥರಿಗೆ ಬೆದರಿಕೆ

ರಕ್ಷಣೆ ಕೋರಿ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಮನವಿ

ಮೈಸೂರು, ಸೆ.3– ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಹಾಗೂ ಮುಖ್ಯಸ್ಥರ ಕುಟುಂಬಕ್ಕೆ ರಕ್ಷಣೆ ಕೋರಿ ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.


ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದಾರೆನ್ನಲಾದ ಬಾಲಕಿಯರ ನೆರವಿಗೆ ನಿಂತಿರುವ ಒಡನಾಡಿ ಸಂಸ್ಥೆಯ ನಿರ್ದೇಶಕರಾದ ಕೆ.ವಿ.ಸ್ಟ್ಯಾನ್ಲಿ ಹಾಗೂ ಎಂ.ಎಲ್.ಪರಶುರಾಮ್‌ಗೆ ಪ್ರಾಣ ಬೆದರಿಕೆ ಕರೆಗಳು ಬರುತ್ತಿವೆ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ರಕ್ಷಣೆ ನೀಡುವಂತೆ ಕೋರಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರಿಗೆ ಶನಿವಾರ ಲಿಖಿತ ಮನವಿ ನೀಡಲಾಗಿದೆ.

ಮುರುಘಾ ಶರಣರ ಅನುಯಾಯಿಗಳು ಹಾಗೂ ಮಠದ ಪರವಾಗಿರುವ ಕೆಲ ಹಿತಾಸಕ್ತಿಗಳು ಪ್ರಾಣ ಬೆದರಿಕೆ ಒಡ್ಡುತ್ತಿದ್ದಾರೆ. ಹಾಗಾಗಿ ನಮಗೆ ಹಾಗೂ ನಮ್ಮ ಕುಟುಂಬಕ್ಕೆ ರಕ್ಷಣೆ ಹಾಗೂ ಗನ್‌ಮ್ಯಾನ್ ವ್ಯವಸ್ಥೆ ಕಲ್ಪಿಸಿಕೊಡಬೇಕು. ಜೊತೆಗೆ ಹೆಣ್ಣು ಮಕ್ಕಳ ಪುನರ್ವಸತಿ ಕೇಂದ್ರವಾಗಿರುವ ನಮ್ಮ ಒಡನಾಡಿ ಮಡಿಲು ಸಂಸ್ಥೆಗೂ ಅಗತ್ಯ ರಕ್ಷಣೆ ನೀಡಬೇಕೆಂದು ಸ್ಟ್ಯಾನ್ಲಿ ಹಾಗೂ ಪರಶುರಾಮ್ ಕೋರಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸ್ಟ್ಯಾನ್ಲಿ, ಎಫ್‌ಐಆರ್ ದಾಖಲಾದ ಆರಂಭದಲ್ಲಿ ಅನಾಮಧೇಯರು ವಾಟ್ಸಾಪ್ ಕಾಲ್ ಮೂಲಕ ಬೆದರಿಕೆ ಹಾಕಿದ್ದರು. ಆದರೆ ಅದನ್ನು ನಾವು ನಿರ್ಲಕ್ಷ್ಯ ಮಾಡಿದ್ದೆವು. ಆದರೆ ನಮ್ಮ ಸಂಸ್ಥೆಯ ಹಿತೈಷಿಗಳು ಈ ಬಗ್ಗೆ ಪೊಲೀಸರ ಗಮನಕ್ಕೆ ತಂದು ರಕ್ಷಣೆ ಪಡೆಯುವಂತೆ ತಿಳಿಸಿದ್ದರಿಂದ ಪೊಲೀಸ್ ಆಯುಕ್ತರಿಗೆ ಮನವಿ ನೀಡಲಾಗಿದೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸಂಬಂಧಪಟ್ಟ ಪೊಲೀಸ್ ಠಾಣೆ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಹೇಳಿದ್ದಾರೆಂದು ತಿಳಿಸಿದ್ದಾರೆ. ಅಪ್ರಾಪ್ತ ಹೆಣ್ಣು ಮಕ್ಕಳು ನೀಡಿದ ಲೈಂಗಿಕ ಕಿರುಕುಳದ ದೂರಿನ ಮೇರೆಗೆ ಶ್ರೀ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ಆ.26ರಂದು ಪೋಕ್ಸೋ ಪ್ರಕರಣ ದಾಖಲಾಗಿದ್ದು, ನಂತರ ಚಿತ್ರದುರ್ಗ ಠಾಣೆಗೆ ಪ್ರಕರಣ ವರ್ಗಾವಣೆಯಾಗಿದೆ. ಅಲ್ಲಿನ ಪೊಲೀಸರು ಸೆ.2ರಂದು ಮುರುಘಾ ಶರಣರು ಹಾಗೂ ಹಾಸ್ಟೆಲ್ ವಾರ್ಡನ್ ರಶ್ಮಿಯನ್ನು ಬಂಧಿಸಿ, ತನಿಖೆ ಮುಂದುವರೆಸಿದ್ದಾರೆ.

ಕಾನೂನು ವಿವಿ ಕುಲಪತಿಯಾಗಿ ಪ್ರೊ.ಸಿ.ಬಸವರಾಜು ಅಧಿಕಾರ ಸ್ವೀಕಾರ

ಮೈಸೂರು, ಸೆ.3(ಆರ್‌ಕೆ)–ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ಮೈಸೂರು ವಿಶ್ವವಿದ್ಯಾನಿಲಯದ ಕಾನೂನು ನಿಕಾಯದ ಮುಖ್ಯಸ್ಥ ಪ್ರೊ. ಸಿ. ಬಸವರಾಜು ಅವರನ್ನು ನೇಮಕ ಮಾಡಲಾಗಿದೆ.



ನಾಲ್ಕು ವರ್ಷಗಳ ಅವಧಿಗೆ ಪ್ರೊ. ಬಸವರಾಜು ಅವರನ್ನು ಕಾನೂನು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ನೇಮಿಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಶುಕ್ರವಾರ ಆದೇಶಿಸಿದ್ದಾರೆ. ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಪ್ರೊ.ಬಸವರಾಜು, ಹಂಗಾಮಿ ಕುಲಪತಿಯಾಗಿದ್ದ ಪ್ರೊ.ರತ್ನ ಬರಂ ಗೌಡರ್ ಅವರಿಂದ ಅಧಿಕಾರ ವಹಿಸಿಕೊಂಡರು.

ತಾಲೂಕು ಮಟ್ಟದ ಪ್ರೌಢಶಾಲಾ ವಿಭಾಗ ಕ್ರೀಡಾಕೂಟಕ್ಕೆ ಚಾಲನೆ

ಶಾಲಾ ಹಂತದಲ್ಲೇ ಕ್ರೀಡೆಗೆ ಪ್ರೋತ್ಸಾಹ ಅವಶ್ಯ: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ

ಮೈಸೂರು, ಸೆ.3(ಎಸ್‌ಪಿಎನ್)– ಮೈಸೂರಿನ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ತಾಲೂಕು ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟಕ್ಕೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ಕ್ರೀಡೆಯನ್ನು ಮಕ್ಕಳಿಗೆ ಶಾಲಾ ಹಂತದಲ್ಲೇ ಪ್ರೋತ್ಸಾಹಿಸಿದರೆ ಕರ್ನಾಟಕ ಮತ್ತು ಮೈಸೂರಿನ ಕೀರ್ತಿ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗಲಿದೆ. ಹಾಗಾಗಿ ದೈಹಿಕ ಶಿಕ್ಷಕರು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಶಿಕ್ಷಣ ಇಲಾಖೆಯಿಂದ ಆಯೋಜಿಸಿರುವ ಹೋಬಳಿ, ತಾಲೂಕು ಹಾಗೂ ಜಿಲ್ಲಾ ಹಂತದಲ್ಲಿ ಪ್ರತಿಭೆಗಳನ್ನು ಗುರುತಿಸುವಲ್ಲಿ ಇಂತಹ ಕ್ರೀಡಾಕೂಟಗಳು ಸಹಕಾರಿಯಾಗಲಿದೆ. ಅದರಲ್ಲೂ ಗ್ರಾಮೀಣ ಪ್ರತಿಭೆಗಳ ರಾಷ್ಟ್ರ ಮಟ್ಟದಲ್ಲಿ ಗುರುತಿಸುವ ಕಾರ್ಯ ಮಹತ್ವದ್ದು ಎಂದರು.

ನಂತರ ಅಂತರರಾಷ್ಟ್ರೀಯ ಕ್ರೀಡಾಪಟು ಬಿ.ಜಿ. ಹೇಮಲತಾ ಮಾತನಾಡಿ, ಕ್ರೀಡೆಯನ್ನು ವಿದ್ಯಾರ್ಥಿ ಜೀವನದಲ್ಲಿ ಎಷ್ಟು ಪ್ರೀತಿಸುತ್ತೇವೋ ಅಷ್ಟೇ ಮುಂದಿನ ಬದುಕು ಸದೃಢವಾಗಿರುತ್ತದೆ. ಹಾಗಾಗಿ ದೈಹಿಕ ಶಿಕ್ಷಣ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಲಾ ಹಂತದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ವಿದ್ಯಾರ್ಥಿ ದಿಸೆಯಲ್ಲಿ ಓದಿನ ಜೊತೆಗೆ ಕ್ರೀಡೆಗೂ ಹೆಚ್ಚಿನ ಆದ್ಯತೆ ನೀಡಬೇಕು. ಇದರಿಂದ ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಸ್ಥಾನ ಸಮಾಜದಲ್ಲಿ ದೊರಕಲಿದೆ ಎಂದ ಅವರು, ಪ್ರಸ್ತುತ ದಿನಮಾನಗಳಲ್ಲಿ ಪ್ರತಿಯೊಬ್ಬರು ಒತ್ತಡದ ಬದುಕಿನ ಶೈಲಿ ರೂಢಿಸಿಕೊಂಡು ಒಂದಿಲ್ಲೊಂದು ಕಾಯಿಲೆಯಿಂದ ಬಳಲುತ್ತಿದ್ದಾರೆ. ಇದರಿಂದ ಹೊರ ಬರಬೇಕಾದರೆ, ಶಾಲಾ ಹಂತದಿಂದಲೇ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಮೈಸೂರು ತಾಲೂಕು ಬಿಇಓ ಮಲ್ಲೇಶ್ವರಿ, ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಸಂಗೀತ ಭಟ್, ತಾಲೂಕು ದೈಹಿಕ ಪರಿವೀಕ್ಷಕ ಡಾ.ಗಣೇಶ್‌ಕುಮಾರ್, ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಪ್ರದೀಪ್, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಮುರುಳಿ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.09.2022 ಭಾನುವಾರ, ಮಳೆ ನಕ್ಷತ್ರ : ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ
ತಿಥಿ: ಅಷ್ಟಮಿ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ :** ಶತಮಾನೋತ್ಸವ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, 'ಶತದೀಪ್ತಿ' ಸ್ಮರಣ ಸಂಚಿಕೆ ಬಿಡುಗಡೆ : ಸಂಸದ ವಿ. ಶ್ರೀನಿವಾಸ ಪ್ರಸಾದ್, ಶಿಲಾಫಲಕ ಅನಾವರಣ : ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್, ಅಧ್ಯಕ್ಷತೆ : ಸೊಸೈಟಿ ಅಧ್ಯಕ್ಷ ಎನ್. ಶ್ರೀನಿವಾಸ್, ಮುಖ್ಯ ಅತಿಥಿಗಳು : ಮೇಯರ್ ಸುನಂದ ಪಾಲನೇತ್ರ, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಸ್ಥಳ: ಆಲಮ್ಮನ ಛತ್ರ, ಕುಂಚಿಟಿಗರ ಸಂಘ, ಶಿವರಾಂಪೇಟೆ, ಬೆಳಗ್ಗೆ 10ಕ್ಕೆ.

■ **ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಪಾರ್ಥಸಾರಥಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ:** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 107ನೇ ಜಯಂತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಹಾಗೂ ದತ್ತಿ ಕಾರ್ಯಕ್ರಮ, ಸಮ್ಮುಖ: ಡಾ.ಶ್ರೀಶರತ್‌ಚಂದ್ರಸ್ವಾಮಿ, ಉದ್ಘಾಟನೆ: ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಉಪನ್ಯಾಸ: ಪ್ರೊ. ಡಿ.ಎಸ್.ಸದಾಶಿವಮೂರ್ತಿ ಅವರಿಂದ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಉಪಸ್ಥಿತರು: ಜೆಎಸ್‌ಎಸ್ ಪಿಯು ಕಾಲೇಜು ಪ್ರಿನ್ಸಿಪಾಲರಾದ ಹೆಚ್.ಟಿ. ನಿರ್ಮಲಾ, ಎಂ.ಎ.ನೀಲಾಂಬಿಕಾ, ಸ್ಥಳ: ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಜೆ.ಪಿ.ನಗರ, ಬೆಳಗ್ಗೆ 11ಕ್ಕೆ.

■ **ಗೋಲ್ಡನ್ ಕ್ರೇಷರ್ ಎಂಟರ್‌ಪ್ರೈಸಸ್ :** ಜ್ಯುವೆಲ್ಲರಿ ಶೋ, ಸ್ಥಳ : ರ್ಯಾಡಿಸನ್ ಬ್ಲೂ ಪ್ಲಾಜಾ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ದತ್ತಸ್ವಾಮಿಗೆ ತೈಲಾಭಿಷೇಕ, ಶ್ರೀ ದತ್ತ ಸತ್ಯನಾರಾಯಣ ಸ್ವಾಮಿ ಕಲ್ಯಾಣ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ಗಣೇಶ ಉತ್ಸವ ಸಮಿತಿ:** ಗಣೇಶ ಉತ್ಸವ, ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನೆ, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 4ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಸತ್ಯ ಸುಂದರ ಪಿ, 6.20 ಗೀತಾರಾಧನ, 6.35 ಬದುಕು ಬದಲಿಸಿದ ಶೋಧ, ಲೇಖನ ಮತ್ತು ಪ್ರಸ್ತುತಿ– ಸುರೇಂದ್ರನಾಥ್ ಸಾತ್ವಿಕ್, 6.40 ಭಾವಗೀತೆ–ಕೆ.ಎಸ್. ಸುರೇಖಾ, 6.45 ರೈತರಿಗೆ ಸಲಹೆ, 6.50 ವನಮಹೋತ್ಸವ–ಅರಣ್ಯ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ "ಸುಸ್ಥಿರ ಆರೋಗ್ಯಕ್ಕಾಗಿ ಆಹಾರ" ಕುರಿತು ಡಾ. ಡಾ.ಟಿ. ಶಿವಕುಮಾರ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಚಾಮರಾಜನಗರ ಜಿಲ್ಲೆ ಆದರ್ಶ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ–ಶಿಕ್ಷಕರ ದಿನಾಚರಣೆಯ ಹಿನ್ನೆಲೆಯಲ್ಲಿ ಶಿಕ್ಷಕಿಯಾಗಿ ತಮ್ಮ ಅನುಭವ–ಈ ಕುರಿತು ಲಿಟಲ್ ಫ್ಲವರ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಡಾ.ಗಾಯತ್ರಿ ದೇವಿ ಅವರೊಂದಿಗೆ ಸಂದರ್ಶನ, 12.30 ದೇವರನಾಮ–ಬಿ.ಆರ್. ಛಾಯಾ, ಡಾ.ರಾಜ್‌ಕುಮಾರ್, 12.45 ಜನಪದಗೀತೆ– ಮಹದೇವಯ್ಯ ಮತ್ತು ತಂಡ, 1.20 ಭಾವಗೀತೆ–ಎನ್.ಗಾಯಿತ್ರಿ, 3.00 ಅಮೃತ ಸ್ವಾತಂತ್ರ್ಯ ಮಾಲಿಕೆ ಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣಿ "ಸ್ವರಾಜ್" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಗುರುದಕ್ಷಿಣೆ, ಪ್ರಸ್ತುತಿ– ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 7.00 ಏಷಿಯಾ ಕಪ್ 2022 ಕ್ರಿಕೆಟ್ ಪಂದ್ಯದ ಅಂಗವಾಗಿ ಯು.ಎ.ಇ ನಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ನಡೆಯಲಿರುವ ಪಂದ್ಯದ ವೀಕ್ಷಕ ವಿವರಣೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ, ಸಂಜೆ 7 ರಿಂದ ನಂದಿನಿ ನೃತ್ಯಾಲಯ ಮಕ್ಕಳಿಂದ ಭರತನಾಟ್ಯ, ಸ್ಥಳ: ಗಣಪತಿ ದೇವಸ್ಥಾನ ಟ್ರಸ್ಟ್, ಕೆ.ಆರ್. ಮೊಹಲ್ಲಾ, ತ್ಯಾಗರಾಜ ವೃತ್ತ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ವಿದ್ವಾನ್ ಖಾಸೀಂ ಮಲ್ಲಿಗೆ ಮಡುವು, ಮೊರಬದ ಮಲ್ಲಿಕಾರ್ಜುನ ಅವರಿಂದ ಅರ್ಧ ನಾರೀಶ್ವರ ಲೀಲೆ ಕುರಿತು ಕಾವ್ಯವಾಚನ, ಸಂಜೆ 6.45 ರಿಂದ ವಿದ್ವಾನ್ ಅನಿಲ್ ಶ್ರೀನಿವಾಸನ್ ಅವರಿಂದ ಪಿಯಾನೋ, ಪಂಡಿತ್ ಪ್ರವೀಣ್ ಗೋಡ್ಖಿಂಡಿ –ಬಾನ್ಸುರಿ, ವಿದ್ವಾನ್ ಅನಂತ್ ಆರ್. ಕೃಷ್ಣನ್–ಮೃದಂಗ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಕಟ್ಟೆ ಬಳಗ :** ಗಣೇಶೋತ್ಸವ ಪ್ರತಿಷ್ಠಾಪನೆ, ಕ್ರೀಡಾ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಕೃಷ್ಣಮೂರ್ತಿಪುರಂನ 1ನೇ ಮುಖ್ಯರಸ್ತೆ, ಸಂಜೆ 6.30ಕ್ಕೆ.

■ **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ನವೋದಯ ರೆಪರ್ಟರಿ ತಂಡದಿಂದ 'ಒಳಶುಂಠಿ' ನಗೆನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗನಿರ್ದೇಶಕ ಪ್ರಸನ್ನ, ಸಂಗೀತ : ಅನುಷ್ ಶೆಟ್ಟಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

■ **ರಂಗಾಯಣ:** ಹಲಗಲಿ ಸಮರ ನಾಟಕ ಪ್ರದರ್ಶನ, ನಿರ್ದೇಶನ: ಅಡ್ಡಂಡ ಸಿ.ಕಾರ್ಯಪ್ಪ, ಸಂಗೀತ: ಧನಂಜಯ ಆರ್.ಸಿ., ಸುಬ್ರಹ್ಮಣ್ಯ, ಸ್ಥಳ: ಭೂಮಿಗೀತ, ರಂಗ ಮಂದಿರ, ಸಂಜೆ 6.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 4 ಭಾನುವಾರ 2022

ಸಂಪುಟ: 43 | ಸಂಚಿಕೆ: 139 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ 800 ಕೋಟಿ ಹಗರಣ: ಜೆಡಿಎಸ್ ಆರೋಪ

ಸಿಬಿಐ ತನಿಖೆಗೆ ಆಗ್ರಹ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಶಾಸಕರ ನಿಯೋಗದಿಂದ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಭೇಟಿ ನಿರ್ಧಾರ; ಸೆ.7ಕ್ಕೆ ಸಮಯ ನಿಗದಿ: ಅಂದು ದಾಖಲೆ ಸಹಿತ ದೂರು ಸಲ್ಲಿಕೆ





ಬೆಂಗಳೂರು, ಸೆ. 3(ಕೆಎಂಶಿ)–ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ 800 ಕೋಟಿ ರೂ. ಅವ್ಯವಹಾರ ನಡೆದಿದ್ದು, ಈ ಹಗರಣ ಸಂಬಂಧ ಸಿಬಿಐ ಯಿಂದ ತನಿಖೆ ನಡೆಸುವಂತೆ ಜೆಡಿಎಸ್ ಒತ್ತಾಯಿಸಿದೆ.

ಈ ಸಂಬಂಧ ದಾಖಲೆಗಳ ಸಮೇತ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಶಾಸಕರ ನಿಯೋಗ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ದೂರು ಸಲ್ಲಿಸಲು ನಿರ್ಧರಿಸಿದೆ. ಗಡ್ಕರಿ ಅವರು ಸೆಪ್ಟೆಂಬರ್ 7ರಂದು ಈ ನಿಯೋಗಕ್ಕೆ ಸಮಯ ನೀಡಿದ್ದು, ಈ ಸಂಬಂಧ ಗಡ್ಕರಿ ಅವರಿಗೆ ದಾಖಲೆಗಳನ್ನು ಸಲ್ಲಿಸಲು ಮತ್ತು ಅದಕ್ಕೂ ಮುನ್ನ ಇತರ ನಾಯಕರಿಗೂ ದೂರು ಸಲ್ಲಿಸಲು ಕುಮಾರಸ್ವಾಮಿ, ನಾಳೆಯೇ ದೆಹಲಿಗೆ ತೆರಳುತ್ತಿದ್ದಾರೆ. 800 ಕೋಟಿ ರೂ. ಲೂಟಿಯಲ್ಲಿ ಯೋಜನಾ ನಿರ್ದೇಶಕ ಶ್ರೀಧರ್, ಸಂಸದ ಪ್ರತಾಪ್ ಸಿಂಹ ಅವರಿಗೂ ಪಾಲು ನೀಡಿರಬಹುದು. ಅದಕ್ಕೆ ಅವರ ಪರವಾಗಿ ಸಂಸದರು ನಿಂತಿದ್ದಾರೆ ಎಂದು ಆರೋಪ ಮಾಡಲಾಗಿದೆ.


ರಾಮದೇವರ ಬೆಟ್ಟ ಇವತ್ತು ಆಗಿರೋದಾ?

ರಾಮದೇವರ ಬೆಟ್ಟದಿಂದ ನೀರು ಬಂದಿದೆ ಅಂತೀರಾ, ರಾಮದೇವರ ಬೆಟ್ಟ ಇವತ್ತು ಆಗಿರೋದಾ? ಎಷ್ಟು ಮೆಟ್ರಿಕ್ ಟನ್ ಕಲ್ಲು ಹೊಡೆದಿದ್ದೀರಾ. ಇದು ನಿಮ್ಮ ನಮ್ಮ ಮನೆ ಹಣ ಅಲ್ಲ. ಸಾರ್ವಜನಿಕರ ತೆರಿಗೆ ಹಣ ಅನ್ನೋದು ನೆನಪಿರಲಿ. 1300 ಕೋಟಿ ರೂ. ತಂದಿದ್ದೇವೆ ಅಂತೀರಲ್ಲ, ಇದು ಆನ್ ಗೋಯಿಂಗ್ ಪ್ರಾಜೆಕ್ಟ್, ನಿಮಗೆ ನಾಚಿಕೆ ಆಗಲ್ವೇ? ದುಡ್ಡು ನೀವು ತಂದು ಮಾಡಿರುವ ರೀತಿ ಹೇಳುತ್ತೀರಾ, ಹತ್ತು ತಿಂಗಳಲ್ಲಿ ರಸ್ತೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ, ಎಲ್ಲಿ ಇನ್ನೂ ರಸ್ತೆ ಅಭಿವೃದ್ಧಿಯೇ ಆಗಿಲ್ಲ. ಈ ಹೆದ್ದಾರಿ ಯೋಜನೆಗೆ ನೀವ್ಯಾರು, ಇದರಿಂದ ಲಾಭವೇನು? ಇದರ ಬಗ್ಗೆ ನೀವು ತಿಳಿಸಬೇಕು. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ. – ಎ.ಮಂಜುನಾಥ್

ಈ ಸಂಬಂಧ ಪತ್ರಿಕಾಗೋಷ್ಠಿಯಲ್ಲಿ ಒಂದಷ್ಟು ಮಾಹಿತಿ ಮತ್ತು ದಾಖಲೆಗಳನ್ನು ಬಿಡುಗಡೆ ಮಾಡಿದ ಮಾಗಡಿಯ ಜೆಡಿಎಸ್ ಶಾಸಕ ಎ.ಮಂಜುನಾಥ್, ▶ 7ನೇ ಪುಟಕ್ಕೆ

ಇನ್ನು ರಾಜ್ಯ ಬಿಜೆಪಿಯಲ್ಲಿ ಯಡಿಯೂರಪ್ಪ ಪಾರುಪತ್ಯ

ಶಿವಮೊಗ್ಗದಲ್ಲಿ ಪ್ರಧಾನಿ ಮೋದಿ ಸಮ್ಮುಖದಲ್ಲಿ ಬೃಹತ್ ಸಮಾವೇಶಕ್ಕೆ ಸಿದ್ಧತೆ



ಬೆಂಗಳೂರು, ಸೆ. 3(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಂತರ ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಈಗ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡಿಕೊಂಡರೂ, ರಾಜ್ಯ ಬಿಜೆಪಿಯಲ್ಲಿ ನನ್ನದೇ ಪಾರುಪತ್ಯ ಎಂದು ಬಿಂಬಿಸಲು ಯಡಿಯೂರಪ್ಪ ತಮ್ಮ ತವರು ಜಿಲ್ಲೆಯಲ್ಲಿ ಬೃಹತ್ ಸಮಾವೇಶ ನಡೆಸಲು ಮುಂದಾಗಿದ್ದಾರೆ.

ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್‌ಷಾ ತಮಗೆ ಪಕ್ಷದಲ್ಲಿ ನೀಡುತ್ತಿರುವ ಆದ್ಯತೆಯಿಂದ ಬೀಗಿರುವ ಅವರು ಶಕ್ತಿ ಪ್ರದರ್ಶನದ ಮೂಲಕ ತಮ್ಮನ್ನು ವಿರೋಧಿಸುವ ರಾಜ್ಯ ಬಿಜೆಪಿಯ ಒಂದು ವರ್ಗಕ್ಕೂ ಚಾಟಿ ಬೀಸಲು ಹೊರಟಿದ್ದಾರೆ. ಈ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಲಿದ್ದಾರೆ. ಗುರುವಾರ ಮಂಗಳೂರಿನಲ್ಲಿ ಮೋದಿ ಅವರ ಸಮ್ಮುಖದಲ್ಲಿ ನಡೆದ ಬಿಜೆಪಿ ಮುಖಂಡರ ಸಭೆಯಲ್ಲೇ ಯಡಿಯೂರಪ್ಪ, ಪ್ರಧಾನಿಗೆ ಆಹ್ವಾನ ನೀಡಿದರು. ಇದಕ್ಕೆ ತಕ್ಷಣ ಸ್ಪಂದಿಸಿದ ಪ್ರಧಾನಿಯವರು ಅಕ್ಟೋಬರ್ ತಿಂಗಳಲ್ಲಿ ಮತ್ತೆ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ತಮ್ಮ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದಾರೆ. ಸಂಸದೀಯ ಮಂಡಳಿಯಲ್ಲಿ ತಮಗೆ ಸ್ಥಾನಮಾನ ಕಲ್ಪಿಸಿರುವುದಕ್ಕೆ ಪ್ರಧಾನಿಯವರನ್ನು ಕಾರ್ಯಕರ್ತರ ಸಮ್ಮುಖದಲ್ಲೇ ಸನ್ಮಾನಿಸಲು ಯಡಿಯೂರಪ್ಪ ನಿರ್ಧರಿಸಿದ್ದಾರೆ. ಪಕ್ಷ ತಮಗೆ ನೀಡಿರುವ ಗೌರವಕ್ಕೆ ಪ್ರತಿ ಗೌರವ ಸಲ್ಲಿಸುತ್ತಿದ್ದಾರೆ. ಸಾರ್ವಜನಿಕರ ಸಭೆಯಲ್ಲೇ ಪಕ್ಷವನ್ನು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ತರುವ ಭರವಸೆಯನ್ನು ಪ್ರಧಾನಿಯವರಿಗೆ ನೀಡಲಿದ್ದಾರಂತೆ.

ಮಂಗಳೂರಿನಲ್ಲಿ ನಡೆದ ಮುಖಂಡರ ಸಭೆಯಲ್ಲಿ ಪ್ರಧಾನಿಯವರು, ಯಡಿಯೂರಪ್ಪನವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಅತ್ಯಂತ ಉಲ್ಲಾಸದಲ್ಲಿರುವ ಅವರು, ಪಕ್ಷವನ್ನು ಅಧಿಕಾರಕ್ಕೆ ತರುವುದಾಗಿ ಭರವಸೆ ನೀಡಿದ್ದಾರೆ. ಪ್ರಧಾನಿಯವರು ನಿನ್ನೆಯ ಸಭೆಯಲ್ಲಿ ಜನರ ನಾಡಿಮಿಡಿತ ಹಿಡಿಯುವಲ್ಲಿ ವಿಫಲರಾಗಿದ್ದೀರಿ ಎಂಬುದನ್ನು ರಾಜ್ಯ ನಾಯಕರಿಗೆ ತಿಳಿಸಿದ್ದಲ್ಲದೆ, ಕರ್ನಾಟಕದ ಮತದಾರರು ಬಿಜೆಪಿ ಪರ ಇದ್ದಾರೆ ಎನ್ನುವುದಕ್ಕೆ ಇಂದಿನ ಸಮಾವೇಶವೇ ಸಾಕ್ಷಿ. ನೀವು ಇದನ್ನು ಅರಿತು ಸರ್ಕಾರ ಕಾರ್ಯಕ್ರಮಗಳನ್ನು ನೀಡಬೇಕು, ಅವು ಜನರ ಮನೆಬಾಗಿಲಿಗೆ ತಲುಪುವಂತಾಗಬೇಕು ಎಂದು ತಿಳಿಸಿದ್ದಾರೆ.

ಏಷ್ಯಾಕಪ್‌ನಲ್ಲಿ ಇಂದು ಮತ್ತೆ ಭಾರತ–ಪಾಕ್ ಸೆಣಸಾಟ



ದುಬೈ, ಸೆ.3– ಸಾಂಪ್ರದಾಯಿಕ ಹಾಗೂ ಬದ್ಧ ವೈರಿಗಳ ಕಾದಾಟಕ್ಕೆ ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ವೇದಿಕೆ ಸಿದ್ಧವಾಗಿದ್ದು, (ಸೆ.4) ಇಂದು ಏಷ್ಯಾಕಪ್ ಟಿ20 ಟೂರ್ನಿಯ 'ಸೂಪರ್ 4' ಹಂತದಲ್ಲಿ ಭಾರತ–ಪಾಕಿಸ್ತಾನ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ. ಏಷ್ಯಾಕಪ್‌ನಲ್ಲಿ 2ನೇ ಬಾರಿ ▶ 8ನೇ ಪುಟಕ್ಕೆ

ಪ್ರಧಾನಿ ಮೋದಿ ಹೆದ್ದಾರಿಯಾದ್ದರಿಂದ ನಾನೇ ಇದರ ಬ್ರಾಂಡ್ ಅಂಬಾಸಡರ್

ಹೆದ್ದಾರಿ ಕಾಮಗಾರಿ ಕಳಪೆ ಸಂಬಂಧ ಮಾಜಿ ಸಿಎಂ ಕುಮಾರಸ್ವಾಮಿ, ರೇವಣ್ಣ ಒಳಗೊಂಡಂತೆ ಮಂಜುನಾಥ್ ನೇತೃತ್ವದಲ್ಲಿ ಸಮಿತಿ ರಚನೆಗೆ ನಾನೇ ಮುಖ್ಯಮಂತ್ರಿ ಬೊಮ್ಮಾಯಿ, ಕೇಂದ್ರ ಸಚಿವ ಗಡ್ಕರಿ ಅವರಿಗೆ ಮನವಿ ಮಾಡ್ತೇನೆ: ಸಂಸದ ಪ್ರತಾಪ್ ಸಿಂಹ ಲೇವಡಿ

ಮೈಸೂರು, ಸೆ.3–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಕಾಮಗಾರಿ ಅವೈಜ್ಞಾನಿಕವಾಗಿದೆಯೇ, ಕಳಪೆ ಕಾಮಗಾರಿ ನಡೆದಿದೆಯೇ ಎಂಬುದರ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಲು ಮಾಗಡಿ ಶಾಸಕ ಮಂಜುನಾಥ್ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಲೋಕೋಪಯೋಗಿ ಇಲಾಖೆಯ ಮಾಜಿ ಸಚಿವ ರೇವಣ್ಣ



ಒಳಗೊಂಡ ಸಮಿತಿ ರಚಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೇಂದ್ರ ಭೂ ಸಾರಿಗೆ, ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡುತ್ತಿದ್ದೇನೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಆರೋಪಗಳ ಸುರಿಮಳೆಗೈದು, ಮಾಗಡಿ ಶಾಸಕ ಮಂಜುನಾಥ್ ನಡೆಸಿದ ಪತ್ರಿಕಾಗೋಷ್ಠಿಗೆ ಪ್ರತಿಕ್ರಿಯಿಸಿದ ▶ 7ನೇ ಪುಟಕ್ಕೆ

ಮುರುಘಾ ಶ್ರೀಗಳಿಗೆ ಪುರುಷತ್ವ ಪರೀಕ್ಷೆ


ಚಿತ್ರದುರ್ಗ, ಸೆ. 3– ಅಪ್ರಾಪ್ತ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಸ್ವಾಮೀಜಿಗಳಿಗೆ ಶನಿವಾರ ಬೆಳಗ್ಗೆ ಪುರುಷತ್ವ ಪರೀಕ್ಷೆ ನಡೆಸಲಾಗಿದೆ.



ಪೊಲೀಸರು ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ಶ್ರೀಗಳನ್ನು ಇಂದು ಬೆಳಗ್ಗೆ ಕರೆದೊಯ್ದಿದ್ದರು. ಅಲ್ಲಿ ವೈದ್ಯರಾದ ಡಾ. ವೇಣು ನೇತೃತ್ವದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು, ಶರಣರ ರಕ್ತ, ಮೂತ್ರ, ಕೂದಲು ಸೇರಿದಂತೆ ಹಲವು ಸ್ಯಾಂಪಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಪಡೆದಿದ್ದು ಅದರ ಪರೀಕ್ಷೆ ವರದಿ ಬರಬೇಕಿದೆ. ನಂತರ ಚಿತ್ರದುರ್ಗ ಡಿವೈಎಸ್‌ಪಿ ಅನಿಲ್‌ಕುಮಾರ್ ನೇತೃತ್ವದಲ್ಲಿ ಮುರುಘಾ ಶ್ರೀಗಳನ್ನು ವಿಚಾರಣೆ ನಡೆಸಲಾಗಿದೆ. ಈ ವೇಳೆ ಪೊಲೀಸರು ಕೇಳಿದ ಕೆಲ ಪ್ರಶ್ನೆಗಳಿಗೆ ಶ್ರೀಗಳು ಉತ್ತರ ನೀಡಿದ್ದಾರೆ. ಆದರೆ ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಹಿಂದೇಟು ಹಾಕಿದ್ದಾರೆ ▶ 8ನೇ ಪುಟಕ್ಕೆ

ಮುರುಘಾ ಶರಣರ ಈ ಸ್ಥಿತಿಗೆ ಪ್ರಗತಿಪರರ ಸಹವಾಸವೇ ಕಾರಣ!

ಮೈಸೂರು, ಸೆ.3– ಮುರುಘಾ ಶರಣರ ಈ ಸ್ಥಿತಿಗೆ ಪ್ರಗತಿಪರರ ಸಹವಾಸವೇ ಕಾರಣ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ. ವಿಜಯಪುರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಪ್ರಗತಿಪರರೇ ಮುರುಘಾ ಶರಣರನ್ನು ಹಾಳು ಮಾಡಿದ್ದು. ಬುದ್ಧಿ ಜೀವಿಗಳು ಹಾಗೂ ಪ್ರಗತಿಪರರು



ಎಂದು ಕೊಂಡವರೇ ಈ ದೇಶ ಹಾಳು ಮಾಡಿದವರು. ಅವರೇ ಇಂತಹವರನ್ನು ಸೃಷ್ಟಿ ಮಾಡಿದರು. ಈಗ ಅವರೊಳಗೆ ಬೆಂಕಿ ಹೊತ್ತಿದೆ. ಆದರೆ ಯಾರ ಪರವಾಗಿ ಯಾರೂ ನಿಲ್ಲುವುದಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹೇಳಿಲ್ಲವೇ? ಎಂದು ವ್ಯಂಗ್ಯವಾಡಿದರು. ಮುರುಘಾ ಶರಣರು ಹಿಂದೂ ಧರ್ಮದ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದರು. ಟಿಪ್ಪು ಸುಲ್ತಾನನ ▶ 8ನೇ ಪುಟಕ್ಕೆ

ಬೆಂಗಳೂರಿನ IT-BTಗಳು ವಲಸೆ ಎಚ್ಚರಿಕೆ


ಬೆಂಗಳೂರು, ಸೆ.3– ಕಳೆದ ವಾರ ಸುರಿದ ಮಳೆಯಿಂದ 'ಬ್ರ್ಯಾಂಡ್ ಬೆಂಗಳೂರು' ಹೆಸರು ಸಹ ನೀರಿನಲ್ಲಿ ಕೊಚ್ಚಿ ಹೋಗ್ತಿದೆ. ಐಟಿ–ಬಿಟಿ ಸಿಟಿ ಎಂದೇ ಹೆಸರಾದ ಬೆಂಗಳೂರಿಗೆ ಐಟಿ ಕಂಪನಿಗಳು ವಲಸೆ ಎಚ್ಚರಿಕೆ ನೀಡಿ ಶಾಕ್ ಕೊಟ್ಟಿವೆ. ಬೆಂಗಳೂರು ಅಂದರೆ ಐಟಿ–ಬಿಟಿ ಹಬ್ ಎಂದೇ ಖ್ಯಾತಿ. ಆದರೀಗ ಒಂದು ದಿನದ ಮಳೆಗೆ ಬ್ರಾಂಡ್ ಬೆಂಗಳೂರು ಹೆಸರೇ ಬರ್ಬಾದ್ ಆಗ್ತಿದ್ದು, ಬೆಂಗಳೂರಿನಿಂದ ಐಟಿ ಕಂಪನಿಗಳು ವಲಸೆ ಹೋಗುವ ಎಚ್ಚರಿಕೆ ನೀಡಿವೆ. ಹೊರ ವರ್ತುಲ ರಸ್ತೆ ಕಂಪನಿಗಳ ಅಸೋಸಿಯೇಷನ್ ಖುದ್ದು ಈ ಬಗ್ಗೆ ಸಿಎಂಗೆ ಪತ್ರ ಬರೆದಿದೆ. ಕಳೆದ ವಾರ ಸತತ ನಾಲ್ಕು ದಿನ ಸುರಿದ ಮಹಾಮಳೆಗೆ ಐಟಿ ಕಂಪನಿಗಳು ಭಾರೀ ನಷ್ಟ ಅನುಭವಿಸಿವೆ. ಅದರಲ್ಲೂ ಆ.30ರಂದು ಸುರಿದ ಮಳೆಯಿಂದಾಗಿ 5 ಗಂಟೆ ಹೊರ ವರ್ತುಲ ರಸ್ತೆಯಲ್ಲಿ ಟೆಕ್ಕಿಗಳು ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಐಟಿ ಕಂಪನಿಗಳಿಗೆ ನೀರು ನುಗ್ಗಿತ್ತು. ಇವೆಲ್ಲದರ ಪರಿಣಾಮ 255 ಕೋಟಿ ರೂ ನಷ್ಟವಾಗಿದೆ.

'ದಸರಾ ಕಾವ್ಯ ಸಂಭ್ರಮ' ಶೀರ್ಷಿಕೆಯಡಿ ಸೆ.28ರಿಂದ ಅ.3ರವರೆಗೆ ದಸರಾ ಕವಿಗೋಷ್ಠಿ

ಅಕ್ಟೋಬರ್ 3ರಂದು ಪ್ರಧಾನ ಕವಿಗೋಷ್ಠಿ; ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರರಿಂದ ಚಾಲನೆ



ಮೈಸೂರು,ಸೆ.3(ಪಿಎಂ)– ದಸರಾ ಮಹೋತ್ಸವದ ಅಂಗವಾಗಿ ಈ ಬಾರಿಯ ದಸರಾ ಕವಿಗೋಷ್ಠಿ 'ದಸರಾ ಕಾವ್ಯ ಸಂಭ್ರಮ' ಶೀರ್ಷಿಕೆಯಡಿ ಸೆ.28ರಿಂದ ಅ.3ರವರೆಗೆ ನಡೆಯಲಿದ್ದು, ದಸರಾ ಕವಿಗೋಷ್ಠಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರೆ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅ.3ರಂದು ನಡೆಯುವ ಪ್ರಧಾನ ಕವಿಗೋಷ್ಠಿ ಉದ್ಘಾಟಿಸಲಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಸರಾ ಕವಿಗೋಷ್ಠಿ ಉಪಸಮಿತಿ ಉಪ ವಿಶೇಷಾಧಿಕಾರಿಯೂ ಆದ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಕಂದಾಯ) ಡಾ.ಎಂ.ದಾಸೇಗೌಡ, ಸೆ.28ರಂದು ಕಲಾಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ದಸರಾ ಕಾವ್ಯ ಸಂಭ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಖ್ಯಾತ ಕವಿ ಡಾ.ದೊಡ್ಡರಂಗೇಗೌಡ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಮಧ್ಯಾಹ್ನ 12ಕ್ಕೆ 'ಹಾಸ್ಯ ಕವಿಗೋಷ್ಠಿ' ಹಮ್ಮಿಕೊಳ್ಳಲಾಗಿದೆ. ಇದಕ್ಕೆ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಚಾಲನೆ ನೀಡಲಿದ್ದು, ಬಿ.ಆರ್.ಲಕ್ಷ್ಮಣರಾವ್, ದುಂಡಿರಾಜ್ ಹಾಗೂ ಈರಪ್ಪ ಕಂಬಳಿ ಸೇರಿದಂತೆ 20 ಮಂದಿ ಹಾಸ್ಯ ಕವಿಗಳು ಭಾಗವಹಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ನಡೆಯುವ 'ಜನಪದ ಕಾವ್ಯ ಸಂಭ್ರಮ'ದಲ್ಲಿ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್, ಜಾನಪದ ಕಲಾವಿದ ಡಾ.ಮಳವಳ್ಳಿ ಮಹದೇವಸ್ವಾಮಿ ಮತ್ತು ಅವರ ತಂಡದವರಿಂದ ಕಾರ್ಯಕ್ರಮ ನಡೆಯಲಿವೆ ಎಂದರು.

ಯುವ ಕವಿಗೋಷ್ಠಿ: ಸೆ.30ರಂದು ಮೈಸೂರು ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ 'ಯುವ ಕವಿಗೋಷ್ಠಿ' ಆಯೋಜಿಸಲಾಗಿದೆ. ಇದರಲ್ಲಿ ಮುಖ್ಯ ಅತಿಥಿಗಳಾಗಿ ಡಾ.ದೊಡ್ಡರಂಗೇಗೌಡ ಪಾಲ್ಗೊಳ್ಳಲಿದ್ದಾರೆ. ಉದ್ಘಾಟಕರು ಹಾಗೂ ಅಧ್ಯಕ್ಷತೆ ವಹಿಸುವವರ ಸಂಬಂಧ ಚಿಂತನೆಯಲ್ಲಿದ್ದು, ▶ 8ನೇ ಪುಟಕ್ಕೆ

ಚಿಗುರು ಕವಿಗೋಷ್ಠಿ, ಯುವ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು ಸ್ವವಿವರ ಒಳಗೊಂಡ ಅರ್ಜಿಯೊಂದಿಗೆ ಕವಿತೆ ಸಲ್ಲಿಸಬಹುದು

ಮೈಸೂರು:ಚಿಗುರು ಕವಿಗೋಷ್ಠಿ ಮತ್ತು ಯುವ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲಿಚ್ಛಿಸುವ ಉದಯೋನ್ಮುಖ ಪ್ರತಿಭಾವಂತರು ಸ್ವವಿವರ ಒಳಗೊಂಡ ಅರ್ಜಿಯೊಂದಿಗೆ 2ರಿಂದ 3 ಕವಿತೆಗಳನ್ನು ಸಮಿತಿಗೆ ಸಲ್ಲಿಸಿದರೆ, ಪ್ರತಿಭೆಯ ಮಾನದಂಡದಲ್ಲಿ ಆಯ್ಕೆ ಮಾಡಲಾಗುವುದು ಎಂದು ಜಯಲಕ್ಷ್ಮೀ ವಿಲಾಸ ಜಾನಪದ ವಸ್ತು ಸಂಗ್ರಹಾಲಯದ ನಿರ್ದೇಶಕರೂ ಆದ ದಸರಾ ಕವಿಗೋಷ್ಠಿ ಉಪಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್ ತಿಳಿಸಿದರು. ಪ್ರಧಾನ ಕವಿಗೋಷ್ಠಿ ಹಾಗೂ ದಸರಾ ಕಾವ್ಯ ಸಂಭ್ರಮ ಕಾರ್ಯಕ್ರಮಗಳಿಗೆ ದಸರಾ ಕವಿಗೋಷ್ಠಿ ಉಪಸಮಿತಿಯೇ ಪ್ರಸಿದ್ಧ ಕವಿಗಳನ್ನು ಆಹ್ವಾನಿಸಲಿದೆ. ಯುವ ಕವಿಗೋಷ್ಠಿ ಹಾಗೂ ಚಿಗುರು ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳುವವರ ಆಯ್ಕೆ ಸಂಬಂಧ ಈಗಾಗಲೇ ಪ್ರಕಟಣೆ ಹೊರಡಿಸಲಾಗಿತ್ತು. ಅಲ್ಲದೆ, ಶಾಲಾ–ಕಾಲೇಜುಗಳ ಸಂಪರ್ಕ ಮಾಡಲಾಗಿತ್ತು. ಒಂದಿಷ್ಟು ಮಂದಿ ಹೆಸರುಗಳು ಪಟ್ಟಿಯಾಗಿವೆ. ಈಗಲೂ ಪಾಲ್ಗೊಳ್ಳಲಿಚ್ಛಿಸುವವರಿಗೆ ಅವಕಾಶವಿದೆ ಎಂದರು. ಈ ಎರಡು ಕವಿಗೋಷ್ಠಿಯಲ್ಲಿ 40ಕ್ಕೂ ಹೆಚ್ಚು ಮಂದಿಗೂ ಅವಕಾಶ ಕಲ್ಪಿಸುವ ಚಿಂತನೆ ಇದೆ. ಆಸಕ್ತರು ಅವರ ಅತ್ಯುತ್ತಮ ಕವಿತೆಗಳನ್ನು ಅರ್ಜಿಯೊಂದಿಗೆ ಕಳುಹಿಸಬಹುದು. ಉಪ ಆಯುಕ್ತರು (ಕಂದಾಯ), ಮೈಸೂರು ಮಹಾನಗರ ಪಾಲಿಕೆ ಅಥವಾ ನಿರ್ದೇಶಕರು, ಜಯಲಕ್ಷ್ಮೀ ವಿಲಾಸ ವಸ್ತು ಸಂಗ್ರಹಾಲಯ, ಮಾನಸ ಗಂಗೋತ್ರಿ ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪಿಸಬಹುದು ಎಂದು ಹೇಳಿದರು.

ಮೈಸೂರಲ್ಲೂ ಮಳೆ ಅವಾಂತರ ತಡೆಗೆ ಮುನ್ನೆಚ್ಚರಿಕಾ ಕ್ರಮ

ಐತಿಹಾಸಿಕ ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವಿಗೆ ಜಿಲ್ಲಾಡಳಿತ ಕ್ರಮ

- ಎಂಜಿಪಿ ಸದಸ್ಯರ ಮನವಿ ಆಲಿಸಿದ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್
- ಕೂಡಲೇ ನಾಲೆ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳುವಂತೆ ಜಿಪಂ ಸಿಇಓಗೆ ಸೂಚನೆ




ಶನಿವಾರ ಎಂಜಿಪಿ ಸದಸ್ಯರು, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರೊಂದಿಗೆ ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಉಂಟಾಗಿರುವ ಅಡೆತಡೆಗಳ ಸಂಬಂಧ ಚರ್ಚಿಸಿದರು.

ಮೈಸೂರು, ಸೆ.3(ಆರ್‌ಕೆ)–ಮಳೆ ನೀರು ಸರಾಗವಾಗಿ ಹರಿದು ಹೋಗಲು ಅನುವಾಗುವಂತೆ ಐತಿಹಾಸಿಕ ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಈ ಸಂಬಂಧ ತಿಳಿಸಿದ್ದಾರೆ. ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸದಸ್ಯರು ಜಿಲ್ಲಾಧಿಕಾರಿಗಳನ್ನು ಇಂದು ಅವರ ಕಚೇರಿಯಲ್ಲಿ ಭೇಟಿ ಮಾಡಿ, ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ನಂತರ ಮಾತನಾಡಿದ ಡಿಸಿ ಅವರು, ಬೋಗಾದಿ ಮತ್ತು ಸುತ್ತಮುತ್ತಲಿನ ಕೆರೆಗಳಿಂದ ಹೆಚ್ಚುವರಿ ಮಳೆ ನೀರು ಹರಿಯಲು ಹಾಗೂ ಕುಕ್ಕರಹಳ್ಳಿ ಕೆರೆಗೆ ಶುದ್ಧ ನೀರು ತಲುಪಲು ಅನುವಾಗುವಂತೆ ನಿರ್ಮಿಸಿರುವ ಪೂರ್ಣಯ್ಯ ಕಾಲುವೆ (ರಾಜಕಾಲುವೆ) ಒತ್ತುವರಿಯಾಗಿರುವುದರಿಂದ, ಭಾರೀ ಮಳೆ ಬಂದಾಗ ಕೆರೆಗಳು ತುಂಬಿ, ಕೋಡಿ ಬಿದ್ದು, ನೀರು ಸರಾಗವಾಗಿ ಹರಿದು ಹೋಗಲು ಅಡೆತಡೆ ಉಂಟಾಗಿರುವುದರಿಂದ ಸುತ್ತಲಿನ ವಸತಿ ಬಡಾವಣೆಗಳು ಜಲಾವೃತಗೊಳ್ಳುತ್ತಿವೆ.

ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಹುಯಿಲಾಳು ಬಳಿಯ ಎರಡು ಕೆರೆಗಳು ಕೋಡಿ ಬಿದ್ದು ಕೆ. ಹೆಮ್ಮನಹಳ್ಳಿ ಬಳಿಯ ವಸತಿ ಬಡಾವಣೆ ಜಲಾವೃತಗೊಂಡಿತ್ತು. ಇಲ್ಲಿರುವ ಮೇಜರ್ ಜನರಲ್ (ನಿವೃತ್ತ) ಸಿ.ಕೆ.ಕರುಂಬಯ್ಯ ಅವರ ತೋಟದ ಮನೆ ಸೇರಿದಂತೆ ಸುತ್ತಲಿನ ಪ್ರದೇಶವೂ ಜಲಮಯವಾಗಿ ತೀವ್ರ ತೊಂದರೆ ಉಂಟಾಗಿತ್ತು ಎಂಬುದನ್ನು ಎಂಜಿಪಿ ಸದಸ್ಯರು ಇದೇ ವೇಳೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಡಾ.ಬಗಾದಿ ಗೌತಮ್, ▶ 8ನೇ ಪುಟಕ್ಕೆ

ಕಾನೂನಿಗಿಂತ ಯಾರೂ ದೊಡ್ಡವರಲ್ಲ

ಅಮೇರಿಕಾದಿಂದ 'ಮೈಸೂರು ಮಿತ್ರ'ನಿಗೆ ಸಂದೇಶ ರವಾನಿಸಿರುವ ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ, ಬೆಂಗಳೂರಲ್ಲಿ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ತಿಳಿಸಿರುವ ಸುದ್ದಿ ಓದಿ ಸಂತೋಷವಾಗಿದೆ ಎಂದು ತಿಳಿಸಿದ್ದಾರೆ.




ಭಾಮಿ ವಿ.ಶೆಣೈ

ಅದೇ ರೀತಿ ಮೈಸೂರಲ್ಲೂ ಐತಿಹಾಸಿಕ ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡರೆ ಒತ್ತುವರಿ ಮಾಡಿರುವವರಿಗೆ ಅಸಮಾಧಾನವಾಗಬಹುದು. ಆದರೆ ಮೈಸೂರಿನ ಜನರು ಜಿಲ್ಲಾಧಿಕಾರಿಗಳ ▶ 8ನೇ ಪುಟಕ್ಕೆ



ಇತ್ತೀಚೆಗೆ ಕೆ.ಹೆಮ್ಮನಹಳ್ಳಿ ಬಳಿ ಮಳೆ ನೀರಿನಿಂದ ಉಂಟಾದ ಅವಾಂತರದ ದೃಶ್ಯ.



ಜಮೀನು ಮಾರಾಟಕ್ಕಿದೆ

ಹೆಚ್.ಡಿ.ಕೋಟೆ ಮುಖ್ಯ ರಸ್ತೆಯಿಂದ ಕಂಚಮಳ್ಳಿ ಮುಖ್ಯರಸ್ತೆಯಲ್ಲಿ 19 ಗುಂಟೆ ಜಮೀನು ಮಾರಾಟಕ್ಕಿದೆ ಪೂರ್ಣ ಅಭಿವೃದ್ಧಿಪಡಿಸಲಾಗಿದೆ. ಸಂಪರ್ಕಿಸಿ: 9945661696, 9845211818

ನಕ್ಕರೆ ಅದೇ ಸ್ವರ್ಗ

ಆತ : ಯಾಕೆ ಬಾಳೆಹಣ್ಣು ಜೊತೆ ಅದರ ಸಿಪ್ಪೇನೂ ಸೇರಿಸಿಕೊಂಡು ತಿನ್ನುತ್ತಿದ್ದೀರಲ್ಲಾ?

ಈತ : ಸಮಾಜ ಸೇವೆ... ಸಿಪ್ಪೆ ಕೆಳಗೆ ಹಾಕಿದರೆ ಜನ ಅದರ ಮೇಲೆ ನಡೆದು ಜಾರಿ ಬಿದ್ದು ಬಿಟ್ಟರೆ ! ಅದಕ್ಕೋಸ್ಕರ.

ಮೈಸೂರು ಮಿತ್ರ

ಭಾನುವಾರ, 4 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಬಯಸಿದ್ದನ್ನು ಬೆವರು ಸುರಿಸಿ ಪಡೆದುಕೊಳ್ಳುವವನೇ ನಿಜವಾದ ಸಾಧಕ

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಭತ್ತ ತಿನ್ನೋನಿಗೆ ಅಕ್ಕಿ ಯಾವ ಲೆಕ್ಕ

ನಿಮ್ಮ ಪತ್ರಗಳು

ಬಳ್ಳೂರು ಹುಂಡಿ ಗ್ರಾಮದ ರಸ್ತೆ ಸರಿಪಡಿಸಿ



ಮಾನ್ಯರೆ,

ನಂಜನಗೂಡು ತಾಲೂಕಿನ ಬಳ್ಳೂರು ಹುಂಡಿ ಗ್ರಾಮಕ್ಕೆ ಹೋಗುವ ರಸ್ತೆ ತೀರಾ ಹದಗೆಟ್ಟಿದೆ. ರಸ್ತೆಯು ಗುಂಡಿಯಂತಾಗಿ ನೀರು ತುಂಬಿ ನಿಂತಿದೆ. ಪಕ್ಕದಲ್ಲೇ ಗ್ರಾಮದ ಕೆರೆ ಇದ್ದು, ಈ ಹದಗೆಟ್ಟ ರಸ್ತೆಯಲ್ಲಿ ಚಲಿಸುವಾಗ ಅಪಾಯ ಸಂಭವಿಸುವ ಸಾಧ್ಯತೆ ಇದೆ ಹಾಗೂ ಪಕ್ಕದಲ್ಲೇ ಸರ್ಕಾರಿ ಶಾಲೆ ಇದ್ದು ಶಾಲೆಗೆ ಹೋಗಲು ಮಕ್ಕಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಲ್ಲೂ ಈ ಮಳೆಗಾಲದಲ್ಲಂತೂ ಗ್ರಾಮಸ್ಥರು ತುಂಬಾ ಪರಿತಪಿಸಿಬಿಟ್ಟಿದ್ದಾರೆ. ದಯವಿಟ್ಟು ಕ್ಷೇತ್ರದ ಶಾಸಕರು ಈ ಬಗ್ಗೆ ಗಮನಹರಿಸಿ ರಸ್ತೆಯನ್ನು ಸರಿಪಡಿಸಬೇಕೆಂದು ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ಯಾರಿಗೆ, ಎಲ್ಲಿಗೆ ಬಂತು ಸ್ವಾತಂತ್ರ್ಯ

ಮಾನ್ಯರೆ,

ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಈ 75ನೇ ವರ್ಷಗಳಲ್ಲಿ ನಾವು ಏನು ಸಾಧಿಸಿದ್ದೇವೆ ಎಂದು ಹಿಂದೆ ತಿರುಗಿ ನೋಡಿದರೆ ನಿರಾಸೆಯಾಗುತ್ತದೆ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ವಿಶ್ವದ ಪ್ರಸಿದ್ಧ ಕಂಪನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ ನಿಜ. ಆದರೆ ಭಾರತ ಅದ್ಭುತ ಪ್ರಗತಿ ಸಾಧಿಸಿದೆ ಎನ್ನುವುದು ಅರ್ಧ ಮಾತ್ರ ಸತ್ಯ. ವಾಸ್ತವವಾಗಿ ದೇಶದ ಬಹುಭಾಗ ಹಿಂದುಳಿದ ಜನರು ಅಕ್ಷರದ ಬೆಳಕಿಲ್ಲದೆ ಅಂಧರಾಗಿಯೇ ಇದ್ದಾರೆ. ಬಡತನದಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಒಂದು ಹೊತ್ತಿನ ಕೂಳಿಗೂ ಗತಿ ಇಲ್ಲದಂತಹ ಸ್ಥಿತಿಯಲ್ಲಿ ಕೋಟ್ಯಂತರ ಭಾರತೀಯರು ದಿನ ನೂಕುತ್ತಿದ್ದಾರೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದರೆ, ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಕೆಲವೇ ಕೆಲವರು ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ನಿಜವಾಗಿ ಸ್ವಾತಂತ್ರ ಬಂದಿದ್ದು ಎಲ್ಲಿ? ಎಲ್ಲಾ ಜನಕ್ಕೋ ಅಥವಾ ಕೆಲವೇ ಮಂದಿಗೋ ಎಂಬ ಪ್ರಶ್ನೆ ಉದ್ಭವಿಸುತ್ತದೆ.

–ಕೀರ್ತಿ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ಪೋಷಕಾಂಶ ಸಪ್ತಾಹ ಆಚರಣೆ ಅರ್ಥಪೂರ್ಣವಾಗಲಿ

ಮಾನ್ಯರೆ,

ನಮ್ಮ ದೇಶದಲ್ಲಿ ಅಪೌಷ್ಟಿಕತೆ ಸಮಸ್ಯೆಯಿಂದ ದಿನಕ್ಕೆ ಸಾವಿರಾರು ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಇದರಲ್ಲಿ ಮುಖ್ಯವಾಗಿ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಮಕ್ಕಳ ಸಾವಿನ ಸಂಖ್ಯೆ ಹೆಚ್ಚಿದೆ. ಪ್ರತಿ ವರ್ಷ ನಮ್ಮ ದೇಶದಲ್ಲಿ ಸೆಪ್ಟೆಂಬರ್ 1 ರಿಂದ 7 ರವರೆಗೆ ಪೋಷಕಾಂಶ ಸಪ್ತಾಹವನ್ನು ಆಚರಿಸಲಾಗುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ (ಆರೋಗ್ಯಕರ ಸದೃಢ ದೇಹ ಮತ್ತು ಮನಸ್ಸಿಗೆ ಎರಡಕ್ಕೂ) ಪೌಷ್ಟಿಕಾಂಶಯುತ ಆಹಾರ ಅತ್ಯಗತ್ಯ. ಈ ನಿಟ್ಟಿನಲ್ಲಿ ಆಚರಣೆ ನೆಪ ಮಾತ್ರಕ್ಕೆ ಆಗದೆ ಜನರಲ್ಲಿ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಆರೋಗ್ಯಕರ ಜೀವನ ಶೈಲಿಯನ್ನು ನಡೆಸಲು ಆರೋಗ್ಯಕರ ಆಹಾರ ಪದ್ಧತಿ ಮತ್ತು ಸರಿಯಾದ ಪೋಷಣೆಯ ಮೌಲ್ಯದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮಹತ್ವದ ಕಾರ್ಯ ಬರೀ ಕೇಂದ್ರ ಸರಕಾರವಲ್ಲದೆ ರಾಜ್ಯ ಸರಕಾರ ಕೂಡಾ ಇದರ ಬಗ್ಗೆ ಗಂಭೀರ ಚಿಂತನೆ ನಡೆಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ವಾರ ಪೂರ್ತಿ ಪೌಷ್ಟಿಕಾಂಶದ ಜಾಗೃತಿಯನ್ನು ಉತ್ತೇಜಿಸಲು ಸರ್ಕಾರವು ಕಾರ್ಯಕ್ರಮಗಳನ್ನು ಬಹುತೇಕ ಹಳ್ಳಿಗಳಲ್ಲಿ ಹಮ್ಮಿಕೊಳ್ಳಬೇಕು. ಇಲ್ಲವಾದಲ್ಲಿ ಈ ಆಚರಣೆಯಿಂದ ಏನನ್ನು ನಿರೀಕ್ಷಿಸಲಾಗದು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ನಾಮಫಲಕ ಅಳವಡಿಸಿ

ಮಾನ್ಯರೆ,

ಮೈಸೂರು ನಗರದ ಆಯಾಯ ಪ್ರದೇಶದ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲು ಏಳು ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳಲ್ಲಿ ಜಾತಿ ಮತ್ತು ಆದಾಯ ದೃಢೀಕರಣ ಪತ್ರ, ವೃದ್ಧಾಪ್ಯ, ವಿಧವಾ, ಅಂಗವಿಕಲರ ವೇತನ, ವಂಶವೃಕ್ಷ, ಸಂಧ್ಯಾ ಸುರಕ್ಷಾ ವೇತನ, ಕೃಷಿ ದೃಢೀಕರಣ ಪತ್ರ, ವಾಸದ ದೃಢೀಕರಣ ಹಾಗೂ ಇನ್ನಿತರ ದೃಢೀಕರಣ ಪತ್ರಗಳನ್ನು ನೀಡುತ್ತಿರುವುದು ಸರಿಯಾಗಿದೆ. ಪಿಟಿಎಸ್ ವೃತ್ತ, ವಲಯ ಕಚೇರಿ–7 ರಲ್ಲಿರುವ ಕೇಂದ್ರಕ್ಕೆ ಹೋದರೆ ಅಲ್ಲಿ ಕಂದಾಯ ಶಾಖೆ, ಇಂಜಿನಿಯರಿಂಗ್ ಶಾಖೆ ಮತ್ತಿತರ ಶಾಖೆಗಳಿವೆ. ಆದರೆ ಇಲ್ಲಿ ಅಟಲ್‌ಜೀ ಜನ ಸ್ನೇಹಿ ಕೇಂದ್ರ ಎಂದು ನಾಮಫಲಕ ಹಾಕಿರುವುದಿಲ್ಲ. ಸಾರ್ವಜನಿಕರು ತಮ್ಮ ದೈನಂದಿನ ಕೆಲಸಗಳನ್ನು ಬಿಟ್ಟು ಅಲೆದಾಡುವ ಪರಿಸ್ಥಿತಿಯಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ವಲಯ ಕಚೇರಿ–7ರಲ್ಲಿರುವ ಕೇಂದ್ರಕ್ಕೆ ಅಟಲ್‌ಜೀ ಜನಸ್ನೇಹಿ ಕೇಂದ್ರ ಎಂದು ನಾಮಫಲಕ ಹಾಕಬೇಕಾಗಿ ಮನವಿ.

–ಟಿ. ರವೀಂದ್ರ ರಾಜಣ್ಣ, ಅಶೋಕಪುರಂ, ಮೈಸೂರು.

ಬುದ್ಧಿ ಭ್ರಮಣೆ?

ಮಾನ್ಯರೆ,

ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಇದು ಪ್ರೊ. ಕಾ(ಕೊ)ಳೇಗೌಡ ನಾಗವಾರ ಉವಾಚ: "ಕುವೆಂಪು ಅವರು ಅಪಾರ ಜ್ಞಾನಿಗಳು... ಆದರೆ ಅವರ ಶಿಷ್ಯಂದಿರು ಅವಿವೇಕಿಗಳು, ಪಾತಕಿಗಳು" (ಮೈ.ಮಿತ್ರ, ಆ. 29).

ಕುವೆಂಪು ಶಿಷ್ಯರು ಯಾರೂ ಈಗ ಬದುಕಿಲ್ಲವಲ್ಲ! ಎಂದ ಮೇಲೆ, 'ಕಾಗೌ' ಯಾರನ್ನು ಕುರಿತು ಆ ಮಾತನ್ನಾಡಿದ್ದಾರೆ? ಅವರಿಗೆ ಬುದ್ಧಿ ಭ್ರಮಣೆಯಿದ್ದೀತು!

–ಸಿಪಿಕೆ, ಸಾಹಿತಿಗಳು, ಆಸ್ಥಾನ ವಿದ್ವಾನ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಗಟ್ಟಿಗೊಳ್ಳಬೇಕಾಗಿದೆ ಸಂಬಂಧಗಳು

ನಮಗೆ ಇಂದು ಬಹಳವಾಗಿ ಬೇಕಾಗಿರುವುದು ನೆಮ್ಮದಿಯ ಜೀವನ. ಇಂದು ಬಹುತೇಕ ಶ್ರೀಮಂತರು ಕೇಳಿಕೊಳ್ಳುವುದು ಆರೋಗ್ಯ ಹಾಗೂ ನೆಮ್ಮದಿಯನ್ನು. ಹಣ ಸೇರಿದಂತೆ ಇವೆರಡೂ ಸಾಮಾನ್ಯವಾಗಿ ನಮ್ಮಿಂದ ದೂರವಾಗುತ್ತವೆ. ಹಣ ಸಂಪಾದನೆಗಾಗಿ ಆರೋಗ್ಯದತ್ತ ಗಮನ ಕೊಡಲಿಲ್ಲ, ಹಣ ಸೇರಿದ ನಂತರ ಆರೋಗ್ಯ ಹದಗೆಟ್ಟು ಅದನ್ನು ಸರಿಪಡಿಸಿಕೊಳ್ಳಲು ಸಂಪಾದಿಸಿದ ಹಣವನ್ನು ಕಳೆದುಕೊಳ್ಳುವಂತಹ ಎಂಬಂತಹ ಸ್ಥಿತಿ ನಮ್ಮದಾಗಿದೆ. ಹಣ ದೊರಕಿದಾಗ ಆಗುವ ಸಂತೋಷ ಕ್ಷಣಿಕ, ಅದು ಕೆಲ ಸಮಯದವರೆಗೆ ಮಾತ್ರ. ಅದೇನಾದರೂ ಮತ್ತಷ್ಟು, ಮಗದಷ್ಟು ಎಂಬ ಸ್ಥಿತಿ ತಲುಪಿದರೆ ನೆಮ್ಮದಿ ಎಂಬುದು ಕನಸಾಗುತ್ತಲೇ ಹೋಗುತ್ತದೆ. ನಮಗೆ ಹಣ ಕೈಸೇರುತ್ತಿದ್ದಂತೆಯೇ ನಮ್ಮವರೊಡಗಿನ ಸಂಪರ್ಕ ಕ್ರಮೇಣ ಸಡಿಲವಾಗುತ್ತಾ ಸಾಗುತ್ತದೆ. ನಮಗೆ ಅಂತಸ್ತಿನಲ್ಲಿ ಸರಿಸಮಾನರು ಅಥವಾ ಮೇಲ್ಮಟ್ಟದವರು ಎನ್ನುವವರೊಡನೆ ಮಾತ್ರ ನಮ್ಮ ಸಂಬಂಧ. ಸಂಬಂಧಿಕರಲ್ಲಿ ಬಡವರಿದ್ದರೆ ಕ್ರಮೇಣ ಅವರಿಂದ ದೂರವಾಗುತ್ತೇವೆ. ಅವರು ಎಲ್ಲಿ ಬಂದು ಸಹಾಯ ಕೇಳುವರೋ!! ಎಂಬ ಹೆದರಿಕೆಯಿಂದ ಅಂತಹವರನ್ನು ವಿನಾಕಾರಣ ದೂರ ಮಾಡಲಾಗುತ್ತದೆ. ಇದರ ಪರಿಣಾಮವನ್ನು ಮುಂದೆ ಎದುರಿಸಬೇಕಾಗುತ್ತದೆ. ತಾವೂ ಈ ಹಿಂದೆ ಅಂತಹ ಸ್ಥಿತಿಯಲ್ಲಿ ಇದ್ದೆವು ಎಂಬುದು ಮರೆತುಹೋಗುತ್ತದೆ.

ನನಗೆ ಪರಿಚಯವಿರುವ ಒಂದು ಕುಟುಂಬವಿದೆ. ಅದರಲ್ಲಿ ದುಡಿಯುವ ತಂದೆ ಅಕಾಲ ಮರಣಕ್ಕೆ ತುತ್ತಾದರು. ಅವರಿಗೆ ಅನಕ್ಷರಸ್ತ ಮಡದಿ ಹಾಗೂ ನಾಲ್ಕು ಮಕ್ಕಳು. ತಂದೆ ಇರುವವರೆಗೆ ಕುಟುಂಬ ಹೇಗೋ ನಡೆಯುತ್ತಿತ್ತು. ನೆಂಟರಿಷ್ಟರೂ ಬಂದು ಹೋಗುತ್ತಿದ್ದರು. ಆದರೆ ತಂದೆಯ ನಿಧನದ ನಂತರ ಅವರು ಕ್ರಮೇಣ ಸಂಬಂಧ ಕಡಿದುಕೊಂಡರು. ಅಲ್ಪಸ್ವಲ್ಪ ಸ್ಥಿತಿವಂತರೂ ಇವರೊಡನೆ ಸಂಬಂಧ ಬೇಡವೆಂದುಕೊಂಡರು. ಕಾರಣ ಅವರು ಬಂದು ಸಹಾಯ ಕೇಳಿದರೆ? ಭಯ. ಆ ಸಂಸಾರವೋ ಕಷ್ಟ ಕೊಟಲೆ ಅನುಭವಿಸುತ್ತಾ ಜೀವನ ನಡೆಸಿತು. ನೆಂಟರಿಂದ ಸಹಾಯವಿಲ್ಲ ಎಂಬುದನ್ನು ಅರಿತ ಕುಟುಂಬ ಇದ್ದುದರಲ್ಲೇ ಜೀವನ ಎಂಬ ಸಿದ್ಧಾಂತ ಅನುಸರಿಸಿದರು. ಬಡತನದಲ್ಲೇ ಬೆಳೆದ ಮಕ್ಕಳು ಬಡತನ ಅರಿತೇ ಜೀವನ ರೂಪಿಸಿಕೊಂಡರು. ತಮಗೆ ವಿದ್ಯೆಯೇ ಪರಮೇಶ್ವರ ಎಂದರಿತು ವಿದ್ಯೆಯ ಆರಾಧನೆ ಮಾಡಿದರು. (ಕಷ್ಟದಲ್ಲಿರುವವರಿಗೆ ವಿದ್ಯೆ ಚೆನ್ನಾಗಿ ಒಲಿಯುತ್ತದೆ ಎಂಬ ಮಾತಿದೆ) ಕೆಲವು ವರ್ಷಗಳ ನಂತರ ಹಿರಿಯ ಮಗಳಿಗೆ ಕೆಲಸ ಸಿಕ್ಕಿತು, ಜೀವನಕ್ಕೆ ಒಂದಷ್ಟು ಆಸರೆಯಾಯಿತು. ನಂತರ ಉಳಿದವರೂ ಓದು ಮುಗಿಸಿ ಸಣ್ಣಪುಟ್ಟ ಕೆಲಸ ಹುಡುಕಿಕೊಂಡರು. ಜೀವನ ಒಂದು ಹದಕ್ಕೆ ಬಂದಿತು. ಕಷ್ಟದ ಅರಿವಿದ್ದುದರಿಂದ ಹಣ ಜೋಪಾನ ಮಾಡುತ್ತಾ ಹೋದರು. ಅವಶ್ಯಕತೆಗಾಗಿ ಮಾತ್ರ ಹಣದ ಖರ್ಚು. ಈ ಕುಟುಂಬ ಕ್ರಮೇಣ ಸದೃಢವಾಯಿತು. ಇವರನ್ನು ದೂರ ಇರಿಸಿದ್ದವರು ಕ್ರಮೇಣ ಸಂಕಷ್ಟಕ್ಕೆ ಸಿಲುಕಿದರು. ಕೊನೆಗೆ ಅವರಿಗೆ ಈ ಕುಟುಂಬದ ಆಶ್ರಯ ಬೇಕಾಯಿತು. ಆಗ ಕಣ್ಣೀರು ಸುರಿಸುತ್ತಾ ಇವರಲ್ಲಿ ಸಹಾಯ ಯಾಚಿಸಿದರು. ಇದು ಸಂಬಂಧವನ್ನು ಕಡಿತಗೊಳಿಸಿಕೊಂಡಿದ್ದರಿಂದ ಆಯಿತು ಎಂದು ಕ್ರಮೇಣ ಅವರಿಗೆ ಅನ್ನಿಸಿತು. ಕಾಲ ನಿಲ್ಲುವುದಿಲ್ಲ. ಅದು ಚಕ್ರ. ಸುತ್ತುತ್ತಲೇ ಇರುತ್ತದೆ. ಕೆಳಗಿದ್ದ ಚಕ್ರದ ಭಾಗ ಮೇಲೆ ಬರಲೇಬೇಕು. ಹಾಗೆಯೇ ಚಕ್ರದ ಮೇಲಿದ್ದ ಭಾಗ ಕೆಳಗೆ ಹೋಗಲೇಬೇಕು. ಇದು ಒಂದು ರೀತಿಯ ಪ್ರಕೃತಿ ನಿಯಮವೂ ಹೌದು. ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮಗೆ ಸಹಾಯ ಮಾಡಲು ಸಾಧ್ಯವಾಗದಿದ್ದರೆ ಅದನ್ನು ಸಂಬಂಧಿಸಿದವರಿಗೆ ಮನವರಿಕೆ ಮಾಡಿಕೊಡಬೇಕೇ ವಿನಃ ಸಂಬಂಧಗಳನ್ನು ಕಡಿದುಕೊಳ್ಳಬಾರದು. ಮುಂದೆ ನಾವು ಇದೇ ಸ್ಥಿತಿಯಲ್ಲಿ ಇರುತ್ತೇವೆ ಎಂಬುದಕ್ಕೆ ಯಾವ ಗ್ಯಾರಂಟಿಯೂ ಇರುವುದಿಲ್ಲ. ಹಣವಿದ್ದರೂ ಆರೋಗ್ಯ ಕೆಟ್ಟಾಗ ಇತರರನ್ನು ಅವಲಂಬಿಸಲೇಬೇಕಾಗುತ್ತದೆ. ಇದು ಸಾರ್ವತ್ರಿಕ ಸತ್ಯವೂ ಆಗಿದೆ.

ನಮಗೆ ನೆಂಟರಿಗಿಂತಲೂ ಸ್ನೇಹಿತರೇ ಮುಖ್ಯ ಎಂದು ಸಾಮಾನ್ಯವಾಗಿ ಹೇಳಿಕೊಳ್ಳುತ್ತೇವೆ. ಆಪತ್ತಿಗಾದವನೇ ನೆಂಟ ಎಂಬ ಮಾತನ್ನು ತಪ್ಪಾಗಿ ಅರ್ಥೈಸಿಕೊಂಡು ತೊಂದರೆಗೆ ಒಳಗಾದಾಗ ಸಹಾಯ ಮಾಡಿದವನೇ ಪರಮಾಪ್ತ ಎಂದುಕೊಳ್ಳುತ್ತೇವೆ. ಇತ್ತೀಚೆಗೆ ಇಂತಹ ಮನೋಭಾವದ ಶ್ರೀಲಂಕಾ ಏನಾಯಿತು ಎಂಬುದು ನಮಗೆಲ್ಲಾ ತಿಳಿದಿದೆ ಚೀನಾ ಸಹಾಯ ಮಾಡುವ ನಾಟಕವಾಡಿತು. ಶ್ರೀಲಂಕಾ ಒಪ್ಪಿತು, ಅಪ್ಪಿತು. ಕ್ರಮೇಣ ಚೀನಾ ಆ ದೇಶವನ್ನೇ ಆಪೋಷಣೆ ಪಡೆಯುವ ಮಟ್ಟಕ್ಕೆ ಹೋಗಿದೆ. ಇದರ ಬದಲು ತನಗೆ ಮೊದಲಿನಿಂದಲೂ ಆಪ್ತರಾಗಿರುವವರೊಡನೆ ಆ ದೇಶ ಮುಂದುವರೆದಿದ್ದರೆ ಬಹುಶಃ ಇಂತಹ ಸಂಕಟ ಬರುತ್ತಿರಲಿಲ್ಲ. ಸದ್ಯದಲ್ಲೇ ಪಾಕಿಸ್ತಾನ ಸಹ ಅಂತಹ ಸ್ಥಿತಿಗೆ ತಲುಪುತ್ತದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಚೀನಾದ ದುರಹಂಕಾರದ ನಡವಳಿಕೆಗೆ ಹೀಗೆ ದೇಶಗಳೇ ನಾಶವಾಗಿ ಬಿಡುತ್ತವೆ. ಪಾಕಿಸ್ತಾನವೂ ಭಾರತದೊಡನೆ ಶತೃತ್ವಕ್ಕಿಂತ ಸ್ನೇಹತ್ವಕ್ಕೆ ಗಮನ ಕೊಟ್ಟಿದ್ದರೆ ಅದಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಭಾರತವನ್ನು ನೇರವಾಗಿ ಎದುರಿಸಲಾಗದ ಚೀನಾ, ಶತ್ರುವಿನ ಶತ್ರು ಮಿತ್ರ ಎಂಬಂತೆ ನಟಿಸಿ ಪಾಕಿಸ್ತಾನಕ್ಕೆ ಸಹಕಾರ ನೀಡುವುದಾಗಿ ನಂಬಿಸಿ, ಇಂದು ಆ ದೇಶವೂ ಶ್ರೀಲಂಕಾದಂತೆ ಆಗುವಂತೆ ಮಾಡಿಬಿಟ್ಟಿದೆ. ಅಲ್ಲಿ ನಿಧಾನವಾಗಿ ಅರಾಜಕತೆ ನೆಲೆಗೊಳ್ಳುತ್ತಿದೆ. ಇತ್ತೀಚೆಗೆ ಒಬ್ಬ ಭಾಷಣಕಾರರು 'ಪಾಕಿಸ್ತಾನದ ಆಯಸ್ಸು ಇನ್ನು ಹತ್ತು ವರ್ಷಕ್ಕಿಂತ ಜಾಸ್ತಿ ಇಲ್ಲ' ಎಂದಿರುವ ಮಾತು ನಿಜವಾಗಿಬಿಡುವ ಸಾಧ್ಯತೆ ಕಂಡುಬರುತ್ತಿದೆ.

ಹಾಗೆಂದು ಎಲ್ಲಾ ಸ್ನೇಹಿತರು ಶತ್ರುಗಳಾಗುತ್ತಾರೆ ಎಂದಲ್ಲ. ನಮಗೆ ಆತ್ಮೀಯ ಗೆಳೆಯರೂ ಇರುತ್ತಾರೆ, ಅವರು ನಮಗಾಗಿ ಪ್ರಾಣಕೊಡಲೂ ಸಿದ್ಧ ಎಂದೂ ನಾವು ಹೇಳುತ್ತೇವೆ. ಇದೂ ನಿಜವೇ. ಆದರೆ ಇದು ಒಮ್ಮುಖದ ಅಭಿಪ್ರಾಯವಾಗಬಾರದು. ಸ್ನೇಹಿತರ ನಡುವಿನ ಅಂತರ್ಯ ಪರಸ್ಪರ ಅರಿವೆಗೆ ಬಂದಿರಬೇಕು. ಅವನಿಗೇನು ಬೇಕಾದಷ್ಟಿದೆ ಸಹಾಯಮಾಡಲಿ ಎಂಬ ಮನೋಭಾವ ಮೂಡಿದರೆ ಅಂತಹ ಸ್ನೇಹಕ್ಕೆ ಬೆಲೆಯಿರುವುದಿಲ್ಲ ಹಾಗೂ ಅದು ಗಾಢವಾದ ಸ್ನೇಹ ಎಂದೂ ಅನಿಸಿಕೊಳ್ಳುವುದಿಲ್ಲ.

ನಮಗೆ ನಮ್ಮ ದೇಶದ ಗಡಿಗಳಲ್ಲಿರುವ ಸೈನಿಕರ ಬಗ್ಗೆ ಹೆಮ್ಮೆ ಇದೆ. ಆದರೆ ಅವರು ಸದಾ ಶತ್ರುವಿನ ಜೊತೆಗೇ ಇರಬೇಕಾಗುತ್ತದೆ, ಅವರಿಗೆ ಸ್ನೇಹಿತರೇ ಇರುವುದಿಲ್ಲ ಎನ್ನಿಸುತ್ತದೆ. ಆದರೆ ಸಾಮಾನ್ಯವಾಗಿ ಗಡಿ ಕಾಯುವವರು ಯಾವ ದೇಶದವರಾದರೂ ಅಲ್ಪಸ್ವಲ್ಪ ಮಿತ್ರತ್ವ ಹೊಂದಿರುತ್ತಾರೆ. ಯುದ್ಧದ ಸಮಯ ಹೊರತುಪಡಿಸಿ ಅವರು ಪರಸ್ಪರರಿಗೆ ಆಗುತ್ತಾರೆ. ಹಾಗೆಂದು ಅವರು ಎಲ್ಲ ಸಮಯದಲ್ಲೂ ಬೇರೆ ದೇಶದ ಸೈನಿಕರನ್ನು ಶತ್ರುಗಳೆಂದು ಪರಿಗಣಿಸುವುದಿಲ್ಲ. ನಾವು ವಾಘಾ ಗಡಿಗೆ (ಅಟ್ಟಾರಿ ಗಡಿ) ಹೋದರೆ ಅಲ್ಲಿ ಎರಡೂ ದೇಶದ ಸಿಪಾಯಿಗಳು ಯಾವಾಗಲೂ ಕಾದಾಟದಲ್ಲೇ ಇರುವುದಿಲ್ಲ. ಪರಸ್ಪರ ಕಾಫೀ/ಟೀ ಹಂಚಿಕೊಳ್ಳುವುದೂ ಇದೆ. ಆದರೆ ದೇಶಗಳ ನಡುವೆ ಯುದ್ಧವಾದರೆ, ಅವನು ಸ್ನೇಹಿತನಾಗಿದ್ದರೂ ಶತ್ರು ವಂತೆಯೇ ಭಾವಿಸುತ್ತಾರೆ, ಪರಸ್ಪರ ಹೋರಾಡುತ್ತಾರೆ. ಆಗ ಅಲ್ಲಿ ಯಾವುದೇ ಮರುಕ, ಸಹಾನುಭೂತಿ ಇರುವುದಿಲ್ಲ. ಇದು ಸಹಜ ಕೂಡ.



ನಾವು ನಮ್ಮ ಸಂಬಂಧ ಎಂದಾಗ ನೆಂಟರು ಎಂದೇ ಭಾವಿಸಬೇಕಾಗಿಲ್ಲ. ಉಳಿದವರನ್ನೂ ನಾವು ನೆಂಟರಾಗಿಸಿಕೊಳ್ಳಬಹುದು. ನಮ್ಮ ಸ್ನೇಹಿತರ ಜೊತೆಗೆ ನಾವು ವ್ಯಾಪಾರ ಮಾಡುವ ಅಂಗಡಿಯವರು, ಹಣ್ಣು ತರಕಾರಿ ಮಾರುವವರು, ಮನೆ ಮುಂದೆ ಬರುವ ಪೌರಕಾರ್ಮಿಕರು, ತಿಂಗಳಿಗೆ ಒಮ್ಮೆ ಕಾವಲು ಕಾಯ ದಿದ್ದರೂ ಕಾಯುತ್ತಿದ್ದೇವೆ ಎಂದು ಹೇಳಿಕೊಂಡು ಬರುವ ಗೂರ್ಖಾಗಳು ಮೊದಲಾದವರೊಡನೆ ನಾವು ಉತ್ತಮ ಸಂಬಂಧ ಇಟ್ಟುಕೊಳ್ಳಬಹುದು. ಇಲ್ಲಿ ಸಂಬಂಧ ಎಂದರೆ ನೆಂಟಸ್ತಿಕೆ ಎಂಬ ಅರ್ಥವಲ್ಲ. ಇಲ್ಲಿ ಮಾನವೀಯ ಮುಖ ಅಗತ್ಯವಾದುದು.

ನಾವು ನಮ್ಮ ಸಂಬಂಧ ಎಂದಾಗ ನೆಂಟರು ಎಂದೇ ಭಾವಿಸಬೇಕಾಗಿಲ್ಲ. ಉಳಿದವರನ್ನೂ ನಾವು ನೆಂಟರಾಗಿಸಿಕೊಳ್ಳಬಹುದು. ನಮ್ಮ ಸ್ನೇಹಿತರ ಜೊತೆಗೆ ನಾವು ವ್ಯಾಪಾರ ಮಾಡುವ ಅಂಗಡಿಯವರು, ಹಣ್ಣು ತರಕಾರಿ ಮಾರುವವರು, ಮನೆ ಮುಂದೆ ಬರುವ ಪೌರಕಾರ್ಮಿಕರು, ತಿಂಗಳಿಗೆ ಒಮ್ಮೆ ಕಾವಲು ಕಾಯದಿದ್ದರೂ ಕಾಯುತ್ತಿದ್ದೇವೆ ಎಂದು ಹೇಳಿಕೊಂಡು ಬರುವ ಗೂರ್ಖಾಗಳು ಮೊದಲಾದವರೊಡನೆ ನಾವು ಉತ್ತಮ ಸಂಬಂಧ ಇಟ್ಟುಕೊಳ್ಳಬಹುದು. ಇಲ್ಲಿ ಸಂಬಂಧ ಎಂದರೆ ನೆಂಟಸ್ತಿಕೆ ಎಂಬ ಅರ್ಥವಲ್ಲ. ಇಲ್ಲಿ ಮಾನವೀಯ ಮುಖ ಅಗತ್ಯವಾದುದು.

ಬರುವವರೊಡನೆ ನಾಲ್ಕು ಸ್ನೇಹದ ಮಾತು ನಮ್ಮ ಸಂಬಂಧ ಗಟ್ಟಿಗೊಳಿಸುತ್ತದೆ. ಅಂತಹ ಮಾತು ಕೇಳಿದ ಅವರು ನಮಗಾಗಿ ಏನು ಬೇಕಾದರೂ ಮಾಡಬಲ್ಲವರಾಗುತ್ತಾರೆ. ಒಬ್ಬ ವ್ಯಾಪಾರಿಯೊಡನೆಯ ಸಂಬಂಧ ನಮಗೆ ಉತ್ತಮ ದಿನಸಿ, ಧಾನ್ಯ ಕೊಳ್ಳಲು ನೆರವಾಗುತ್ತದೆ. ಒಬ್ಬರಿಗೆ ನೋವಾದಾಗ ಅದನ್ನು ನಿವಾರಿಸಲು ಹಣ ನೀಡಬೇಕೆಂದಿಲ್ಲ. ನಾಲ್ಕು ಸಾಂತ್ವನದ ಮಾತೂ ಅವರಿಗೆ ಸಮಾಧಾನ ತಂದುಕೊಡಬಲ್ಲುದು. ಮತ್ತೊಂದು ಮಾತು ಎಂದರೆ ಅನಾರೋಗ್ಯದಿಂದ ಹಾಸಿಗೆ ಹಿಡಿದವರಿಗೆ (ಆಸ್ಪತ್ರೆ ಸೇರಿದವರಿಗೆ) ಒಂದಷ್ಟು ಸಹಾಯ, ಅದು ಆರ್ಥಿಕವಾಗಿಯೂ ಇರಬಹುದು, ಮಾಡಿದರೆ ಅವರು ಆರೋಗ್ಯವಂತರಾದಾಗ ನಮ್ಮ ಬಗ್ಗೆ ಅವರ ಜೀವನಪೂರ್ತಿ ಅತ್ಯಂತ ಹೆಚ್ಚಿನ ಅಭಿಮಾನ ಉಳ್ಳವರಾಗುತ್ತಾರೆ.

ಈ ಹಿಂದೆ ಅವಿಭಕ್ತ ಕುಟುಂಬಗಳು ಇರುತ್ತಿದ್ದವು. ಅಲ್ಲಿನ ಸದಸ್ಯರ ನಡುವೆ ಸಂಬಂಧಗಳು ಗಟ್ಟಿಯಾಗಿರುತ್ತಿದ್ದವು. ನಲವತ್ತು ಐವತ್ತು ಅಥವಾ ಅದಕ್ಕಿಂತ ಜಾಸ್ತಿ ಜನರಿದ್ದ ಕುಟುಂಬಗಳಿದ್ದವು. ಅಲ್ಲಿ ಮೇಲು ಕೀಳುಗಳ ಭಾವನೆ ಇರುತ್ತಿರಲಿಲ್ಲ. ಒಬ್ಬನಿಗೆ ನೋವಾಯಿತು ಎಂದರೆ ಇಡೀ ಕುಟುಂಬ ಕಣ್ಣೀರುಗರೆಯುತ್ತಿತ್ತು. ಅದರಲ್ಲಿ ವಯಸ್ಸಿನ ಭೇದವೂ ಇರುತ್ತಿರಲಿಲ್ಲ. ಇತ್ತೀಚೆಗೆ ಓದಿದ ಒಂದು ಅವಿಭಕ್ತ ಕುಟುಂಬದ ಕಥೆ ಇದಕ್ಕೆ ಪೂರಕವಾಗಿದೆ. ಆ ಅವಿಭಕ್ತ ಕುಟುಂಬದ ಹಿರಿಯನ ವಯಸ್ಸು ತೊಂಭತ್ತಕ್ಕಿಂತಲೂ ಜಾಸ್ತಿ. ಒಂದು ದಿನ ಯಾವುದೋ ಕೌಟುಂಬಿಕ ವಿಷಯದಲ್ಲಿ ಮಾತು ಬೆಳೆದು (ಹೀಗಾಗುವುದು ಅಪರೂಪ) ಆ ಹಿರಿಯನು ತನ್ನ ಎಪ್ಪತ್ತು ವರ್ಷದ ಮಗನಿಗೆ, ಆತನ ಮಕ್ಕಳು ಮೊಮ್ಮಕ್ಕಳ ಎದುರಿಗೇ ಹೊಡೆಯುತ್ತಾನೆ. ಇದನ್ನು ಕಂಡ ಎಲ್ಲರೂ ಸ್ಥಂಭೀಭೂತರಾಗಿ ನಿಧಾನವಾಗಿ ತಮ್ಮ ಕೋಣೆಗಳಿಗೆ ಹೋಗಿಬಿಡುತ್ತಾರೆ. ಅಂದು ರಾತ್ರಿ ಆ ಹಿರಿಯನಿಗೆ ನಿದ್ರೆ ಬರುವುದಿಲ್ಲ. ಹಾಸಿಗೆಯಲ್ಲಿ ಹೊರಳಾಡುತ್ತಿರುತ್ತಾನೆ. ಅದನ್ನು ಗಮನಿಸಿದ ಆತನ ಪತ್ನಿ ಏನಾಯಿತು? ಎಂದು ಕೇಳುತ್ತಾಳೆ. ಆಗ ಹಿರಿಯ ಹೇಳುತ್ತಾನೆ: ನಾನು ಈ ಹಿಂದೆಯೂ ಒಂದೆರಡು ಸಲ ಅವನ ಮೇಲೆ ಕೈಎತ್ತಿದ್ದೇನೆ. ಆದರೆ ಆಗ ಯಾವಾಗಲೂ ಅವನ ಕಣ್ಣಲ್ಲಿ ನೀರು ನೋಡಿರಲಿಲ್ಲ. ಇಂದು ಅವನ ಕಣ್ಣುಗಳು ನೀರಿನಿಂದ ತುಂಬಿಹೋಗಿತ್ತು. ನಾನು ಹೊಡೆದಿದ್ದು ಜೋರಾಗಿ ಅವನಿಗೆ ನೋವಾಯಿತೋ ಏನೋ? ಎಂದು ಹಂಬಲಿಸಿದ. ಮತ್ತೊಂದು ಕಡೆ ಅವನಿಂದ ಹೊಡೆತ ತಿಂದಿದ್ದ ಮಗನಿಗೂ ಆ ರಾತ್ರಿ ನಿದ್ರೆ ಇಲ್ಲ. ಇದಕ್ಕೆ ಕಾರಣ ಕೇಳಿದ ಅವನ ಹೆಂಡತಿಗೆ ಅವನು ಹೇಳಿದ್ದು; ಅಪ್ಪ ಹಿಂದಿನ ಸಲ ಹೊಡೆದಾಗ ಪೆಟ್ಟು ಜೋರಾಗಿತ್ತು. ಈ ಸಲ ಅವರು ಹೊಡೆದಾಗ ಅದು ಹೊಡೆದಂತೆಯೇ ಅನ್ನಿಸಲಿಲ್ಲ, ನಮ್ಮಪ್ಪನ ಕೈಯಲ್ಲಿ ಶಕ್ತಿ ಕಡಿಮೆಯಾದಂತೆ ಅನಿಸುತ್ತದೆ. ಅಪ್ಪನ್ನ ಕಳೆದುಕೊಂಡರೆ ನಾವು ಪರದೇಶಿಗಳಂತಾಗುತ್ತೇವೆ. ಇನ್ನು ಮೇಲೆ ಅಪ್ಪನನ್ನು ಹೆಚ್ಚು ಕಾಳಜಿಯಿಂದ ನೋಡಿಕೊಳ್ಳಬೇಕು ಎಂದು. ಎಂತಹ ವಾತ್ಸಲ್ಯ ಈ ಕಥೆಯಲ್ಲಿ ಆವೇಶದಲ್ಲಿ ಮಗನಿಗೆ ಹೊಡೆದ ತಂದೆ ಪಶ್ಚಾತ್ತಾಪಪಟ್ಟರೆ ಮಗನಿಗೆ ಅಪ್ಪನಿಗೆ ಶಕ್ತಿ ಕುಂದುತ್ತಿದೆ ಎಂಬ ಕಾಳಜಿ. ಇಂತಹ ಸಂಬಂಧ ನಮಗೆ ಬೇಕಾಗಿರುವುದು.

ಇಂತಹ ಸಂಬಂಧಗಳು ಹಣಕಾಸಿನಿಂದ ಬರುವಂತಹುದಲ್ಲ. ಅದು ನಮ್ಮ ಮನಸ್ಥಿತಿಗೆ ಸಂಬಂಧಿಸಿದ್ದು. ನಾನು ನೆಮ್ಮದಿಯಾಗಿ ಬಾಳಬೇಕೆಂದರೆ ನನ್ನ ಸುತ್ತಲಿನವರು, ನನ್ನನ್ನು ನಂಬಿದವರೂ ನೆಮ್ಮದಿಯಾಗಿರಬೇಕು. ನಾವು ಅಶಾಶ್ವತ ಎಂಬುದು ನಮಗೆ ನೆನಪಿರಬೇಕು. ಇರುವಷ್ಟು ಕಾಲವೂ ನಮಗೆ ಸಂಬಂಧಿಸಿದವರು, ಸಂಬಂಧಿಸದವರು ಎಲ್ಲರೊಡನೆಯೂ ಉತ್ತಮ ಸಂಬಂಧ ಗಳಿಸಿ, ಉಳಿಸಿಕೊಳ್ಳಬೇಕು. ನಾವು ಯಾವುದೋ ಒಂದು ದಿನ ಒಂದು ಬೀದಿನಾಯಿಗೆ ಹಾಕಿದ ಒಂದು ಬಿಸ್ಕತ್ತು ಆ ನಾಯಿ ನಮ್ಮನ್ನು ಕಂಡಾಗಲೆಲ್ಲಾ ಬಾಲವಾಡಿಸಿ ಬರುವುದನ್ನು ಗಮನಿಸಬೇಕು. ಪ್ರಾಣಿಗಳೇ ಹಾಗೆ ಪ್ರೀತಿ ತೋರುವಾಗ, ನಮ್ಮ ಪ್ರೀತಿ ಪಾತ್ರರೂ ಅಂತಹ ಗುಣವುಳ್ಳವರೇ ಆಗಿರುತ್ತಾರೆ ಎಂದು ಭಾವಿಸಬೇಕು. ಕೆಲವು ಸಂದರ್ಭ ಇದಕ್ಕೆ ಭಿನ್ನವಾಗಿ ಗೋಚರವಾಗಬಹುದು. ಹಾಗೆಂದು ಎಲ್ಲರೂ ಹಾಗೆ ಎಂದು ಭಾವಿಸಬೇಕಾಗಿಲ್ಲ.

ಸಹಕಾರಿಯ ಶತಮಾನೋತ್ಸವ ಸಂಭ್ರಮ



ಇಂದು ಮೈಸೂರಿನ ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಶತಮಾನೋತ್ಸವ ಸಂಭ್ರಮಾಚರಣೆ. ಈ ಸಂದರ್ಭ ಸಂಸ್ಥೆಯ ಕಿರು ಪರಿಚಯವಿದು.

ಮೈಸೂರು ಪ್ರೇಕ್ಷಣೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಾಜಧಾನಿಯಾಗಿ ಪಾರಂಪರಿಕ ಕಟ್ಟಡವನ್ನಷ್ಟೇ ಅಲ್ಲದೇ ಶತಮಾನೋತ್ಸವ ಕಂಡ ಹಲವಾರು ಸಂಸ್ಥೆಗಳನ್ನೂ ಹೊಂದಿರುವುದು ಸಂತಸದ ವಿಷಯ. ಈ ಸುಂದರ ನಗರದಲ್ಲಿ ನಿವಾಸಿಗಳ ಅವಶ್ಯಕತೆಯನ್ನು ಗಮನಿಸಿ ಕೆಲವು ಪ್ರಬುದ್ಧ ವ್ಯಕ್ತಿಗಳು ಗೃಹ ನಿರ್ಮಾಣ ಮಾಡುವ ಅಪೇಕ್ಷಿತರ ಅನುಕೂಲಕ್ಕಾಗಿ ಪ್ರಥಮವಾಗಿ 1916ರ ನವೆಂಬರ್ 1, ರಂದು ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಸಂಸ್ಥೆಯನ್ನು ಪ್ರಾರಂಭಿಸಿದರು. ಲೋಕ ಹಿತೈಷಿ ಹೆಚ್.ನಂಜುಂಡರಾಜ್ ಅರಸ್, ಡಿ.ಕೃಷ್ಣರಾವ್ ಮತ್ತು ಡಿ.ಕಪಿನೀಪತಿ ರಾಯರು ಇತರರೊಂದಿಗೆ ಸೊಸೈಟಿಯನ್ನು ಪ್ರಾರಂಭಿಸಿ ಮೈಸೂರಿನ ಪಾರಂಪರಿಕ ಕಟ್ಟಡ ಎಂಬ ಹೆಗ್ಗಳಿಕೆಗೆ ಪಾತ್ರವಾದ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನ ಚಿಕ್ಕ ಕೊಠಡಿಯಲ್ಲಿ ಆರಂಭಿಸಿ, ನಂತರ ಪ್ರತಿಷ್ಠಿತ ಸಹಕಾರ ಭವನಕ್ಕೆ ಸ್ಥಳಾಂತರಿಸಿ ಕಾರ್ಯನಿರ್ವಹಿಸಿತು.

ಕೆಲವು ಕಾಲಾನಂತರ 1946ರ ಏಪ್ರಿಲ್ 24ರಂದು ಚಾಮರಾಜ ಜೋಡಿ ರಸ್ತೆಯ ಪಕ್ಕದಲ್ಲಿ ತನ್ನದೇ ಕಟ್ಟಡವನ್ನು ನಿರ್ಮಿಸಿ, ಅಲ್ಲಿಗೆ ವರ್ಗಾಯಿಸಿ ಸೇವಾ ಕಾರ್ಯವನ್ನು ಮುಂದುವರಿಸಲಾಯಿತು. ಈ ಸಹಕಾರಿಯು ಗೃಹ ನಿರ್ಮಾಣಕ್ಕೆ ಸಾಲ ಸೌಲಭ್ಯವನ್ನು ನೀಡುವುದಲ್ಲದೇ, ಮನೆ ಅಭಿವೃದ್ಧಿಪಡಿಸಲು, ನಿವೇಶನ ಖರೀದಿಸಲು ಸೂಕ್ತ ದಾಖಲೆಯನ್ನು ಆಧಾರ ಮಾಡಿಕೊಂಡು ಸುಲಭ ತಿಂಗಳ ಕಂತುಗಳಲ್ಲಿ ಗ್ರಾಹಕರಿಗೆ ಅನು ಕೂಲವಾಗುವಂತೆ ಸೌಲಭ್ಯವನ್ನು ವಿಸ್ತರಿಸಿ, ಪ್ರತಿ ಕುಟುಂಬವೂ ಸ್ವಂತ ಸೂರನ್ನು ಹೊಂದಬೇಕೆಂಬ ದೂರದೃಷ್ಟಿಯಿಂದ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಸಂಗತಿ.

ಸಂಸ್ಥೆಯು 1941ರಲ್ಲಿ ಬೆಳ್ಳಿ ಹಬ್ಬ, 1967ರಲ್ಲಿ ಸುವರ್ಣಮಹೋತ್ಸವ, 1978ರಲ್ಲಿ ವಜ್ರಮಹೋತ್ಸವ ವಿಜೃಂಭಣೆಯಿಂದ ಆಚರಿಸಿದೆ. ಹಾಗೆಯೇ 2016ನೇ ನವೆಂಬರ್ 1, ರಂದು ಶತಮಾನವನ್ನು ಪೂರೈಸಿರುವ ಮೈಸೂರಿನ ಪ್ರಥಮ ಗೃಹ ನಿರ್ಮಾಣ ಸೊಸೈಟಿ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದುವರೆವಿಗೆ ಸುಮಾರು 31 ಸಹಕಾರಿಗಳು ಅಧ್ಯಕ್ಷರಾಗಿ ನಿಸ್ಪೃಹ ಸೇವೆ ಸಲ್ಲಿಸಿದ್ದಾರೆ. ಅವರುಗಳಲ್ಲಿ ಪ್ರಮುಖವಾಗಿ ಸ್ವಾತಂತ್ರ್ಯ ಹೋರಾಟಗಾರರಾದ ಬಿ.ಎನ್.ಕೆಂಗೇಗೌಡರು, ವೇದಾಂತ ಹೆಮ್ಮಿಗೆ, ರಾವ್‌ಬಹದ್ದೂರ್ ಎಂ.ರಾಮಸ್ವಾಮಿ, ಧರ್ಮಪ್ರಕಾಶ ಸಾಹುಕಾರ್ ಡಿ.ಬನುಮಯ್ಯ, ವಿ.ಲಿಂಗಪ್ಪಯ್ಯ, ಟಿ.ಎಸ್.ರಾಜಗೋಪಾಲಯ್ಯಂಗಾರ್, ಬಿ.ವಿ.ನಂಜುಂಡಯ್ಯ, ಎಂ.ಎನ್.ರಾಮಚಂದ್ರ ಜೋಯಿಸ್, ಎಂ.ಸಿ.ಮಹದೇವಸ್ವಾಮಿ, ಆರ್.ಜಿ.ಶಾಮಣ್ಣ, ಎ.ಕೃಷ್ಣಮೂರ್ತಿ ರಾವ್, ಡಾ.ಬಿ.ಜಿ.ದಾಸ್, ಎಸ್.ಶೇಷಗಿರಿರಾವ್, ಶ್ರೀಕಂಠಶರ್ಮ, ಡಿ.ದೊಡ್ಡಯ್ಯ, ಬಿ.ಕೆ.ಆತ್ಮಾರಾಂ ಇನ್ನಿತರ ಪ್ರಮುಖರ ಸೇವೆ ಸ್ಮರಣೀಯ.




ಎನ್.ಶ್ರೀನಿವಾಸ್

1916ರಲ್ಲಿ ಕೇವಲ 86 ಸದಸ್ಯರೊಡನೆ ಆರಂಭವಾದ ಸೊಸೈಟಿಯು ಇಂದು 1378 ಮಂದಿ ಸದಸ್ಯರು ಹಾಗೂ ರೂ. 53,33,500ಗಳ ಷೇರು ಬಂಡವಾಳವನ್ನು ಹೊಂದಿತ್ತು.ಸಹಕಾರಿ ಕ್ಷೇತ್ರಕ್ಕೇ ವಿಶಿಷ್ಟ ಕೊಡುಗೆಯನ್ನು ನೀಡುತ್ತಿದೆ. ಗ್ರಾಹಕರಿಗೆ ತೃಪ್ತಿಕರ ಸೇವೆಯನ್ನು ನೀಡುತ್ತಾ 2016ರಲ್ಲಿ ಶತಮಾನವನ್ನು ಪೂರೈಸಿ ಕಾರಣಾಂತರದಿಂದ ಮುಂದೂಡಿದ್ದ ಶತಮಾನೋತ್ಸವ ಆಚರಣೆಯನ್ನು ಈ ವರ್ಷ ಆಚರಿಸುತ್ತಿರುವುದು ಮೈಸೂರಿನ ಸಹಕಾರಿ ಬಂಧುಗಳಲ್ಲಿ ಸಂತಸ ಮೂಡಿದೆ.

ಸಂಸ್ಥೆಯು ಕೇವಲ ಆರ್ಥಿಕ ಚಟುವಟಿಕೆಗಳಿಗೆ ಸೀಮಿತವಾಗದೆ ಸಾಮಾಜಿಕ ಕಾರ್ಯಗಳಲ್ಲೂ ತೊಡಗಿಸಿಕೊಂಡು ಸದಸ್ಯರ ಉಪಯೋಗಕ್ಕಾಗಿ ಉಚಿತ ವಾಚನಾಲಯ, ವಿದ್ಯಾನಿಧಿಯ ಮೂಲಕ ಅರ್ಹ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ. ಅಲ್ಲದೇ ರಾಷ್ಟ್ರೀಯ ವಿಪತ್ತಿನ ಸಮಯ ಹಾಗೂ ಕೊರೊನಾದ ಸಂಕಷ್ಟದ ಸಮಯದಲ್ಲೂ ಉದಾರವಾಗಿ ದೇಣಿಗೆಯನ್ನು ನೀಡಿ ಸಾಮಾಜಿಕ ಕಾಳಜಿಯನ್ನೂ ಮೆರೆದಿದೆ.

ಪ್ರಸ್ತುತ 32ನೇ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಸಮಾಜಮುಖಿ ಎನ್.ಶ್ರೀನಿವಾಸ್, ದಕ್ಷ ಆಡಳಿತವನ್ನು ಹಾಗೂ ಅವರು ಸಹಕಾರಿ ಕ್ಷೇತ್ರವಲ್ಲದೇ ಹಲವಾರು ಸಂಘ ಸಂಸ್ಥೆಗಳಲ್ಲಿ ವಿವಿಧ ರೀತಿಯಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಅಂತೆಯೇ ಉಪಾಧ್ಯಕ್ಷರಾಗಿ ಹಿರಿಯ ಸಹಕಾರಿ ಧುರೀಣ ಕೆ.ಜಿ ಶಂಕರನಾರಾಯಣ ಶಾಸ್ತ್ರಿಗಳು ಇಳಿವಯಸ್ಸಿನಲ್ಲೂ ಸೇವೆ ಸಲ್ಲಿಸುತ್ತಿರುವುದು ಸದಸ್ಯರುಗಳಿಗೆ ಹೆಮ್ಮೆಯ ವಿಷಯವಾಗಿದೆ.



ನಂ. ಶ್ರೀಕಂಠ ಕುಮಾರ್
ಮೊ: 9481067333

ಸೆ.6, 7ರಂದು ನೀರು ಸರಬರಾಜು ವ್ಯತ್ಯಯ

ಮೈಸೂರು, ಸೆ.3–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ಜಯಪುರ ಸಬ್ ಸ್ಟೇಷನ್ ನಿರ್ವಹಣೆ ಕಾಮಗಾರಿಯನ್ನು ಕೆಪಿಟಿಸಿಎಲ್ ಇಲಾಖೆಯವರು ಕೈಗೆತ್ತಿಕೊಳ್ಳುತ್ತಿರುವುದರಿಂದ ಸೆ.6 ಮತ್ತು 7ರಂದು ನಗರದ ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ವಾರ್ಡ್ ನಂ.45ರಿಂದ 51 (ಶಾರದಾದೇವಿ ನಗರ, ದಟ್ಟಗಳ್ಳಿ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ 54ರಿಂದ 65 (ಗುಂಡೂರಾವ್ ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ, ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ, ಎಂ–ಬ್ಲಾಕ್ ಅಶೋಕಪುರಂ, ವಿದ್ಯಾರಣ್ಯಪುರಂ, ಭಾಗಶಃ ಪ್ರದೇಶ ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರಂ) ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ.

ಹಳೆ ದ್ವೇಷದ ಹಿನ್ನೆಲೆಯಲ್ಲಿ ಸ್ನೇಹಿತನ ಹತ್ಯೆ: ಐವರ ಬಂಧನ

ಮೈಸೂರು, ಸೆ.3(ಎಂಕೆ)– ಮೈಸೂರಿನ ಕ್ಯಾತಮಾರನಹಳ್ಳಿಯ ಅಶ್ವಥಕಟ್ಟೆ ಬಳಿ ಹಳೇ ದ್ವೇಷದ ಹಿನ್ನೆಲೆಯಲ್ಲಿ ಸ್ನೇಹಿತನನ್ನೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಸಂಬಂಧ ಐವರು ಆರೋಪಿಗಳನ್ನು ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆ.31ರ ಗಣೇಶ ಚತುರ್ಥಿಯಂದು ರಾತ್ರಿ 9.30ರಲ್ಲಿ ವೆಂಕಟೇಶ್ ಅಲಿಯಾಸ್ ಕರಿಯ (23) ಎಂಬಾತನನ್ನು ಹತ್ಯೆಗೈದು, ಆತನ ಸ್ನೇಹಿತ ನವೀನ್ ಅಲಿಯಾಸ್ ಜೊಲ್ಲು(18)ವಿಗೂ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ 5 ಮಂದಿ ಆರೋಪಿಗಳನ್ನು ಶನಿವಾರ ಬಂಧಿಸಿದ್ದಾರೆ. ಡಿಸಿಪಿ ಪ್ರದೀಪ್ ಗುಂಟಿ ಮಾರ್ಗದರ್ಶನ ಹಾಗೂ ಎಸಿಪಿ ಎಂ.ಎನ್.ಶಶಿಧರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಉದಯಗಿರಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಪಿ.ಕೆ.ರಾಜು, ಪಿಎಸ್‌ಐಗಳಾದ ಸುನೀಲ್, ನಾಗರಾಜ ನಾಯಕ್, ರೂಪೇಶ್, ಸಿಬ್ಬಂದಿಗಳಾದ ಶಂಕರ್, ಸಿದ್ದಿಕ್ ಅಹಮದ್, ಸೋಮ ಶೇಖರ, ಪುಟ್ಟರಾಜು, ಗೋಪಾಲ್, ಆನಂದ್, ರವಿಕುಮಾರ್, ರಾಥೋಡ್, ಮೋಹನ್, ಶಿವರಾಜಪ್ಪ ಸಮೀರ್, ನಾಗೂರ್ ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com





ಗುರುವೇ ನಮಃ

ಬನ್ನೂರು ಕೆ.ರಾಜು ಮೊ. 9481533167

ಆದರ್ಶ ಸಮಾಜದ ಕನಸುಗಳನ್ನು ಹೊತ್ತಿದ್ದ ಶಿಷ್ಯ ಪ್ರೀತಿಯ ರಾಧಾಕೃಷ್ಣನ್‌ರಂಥ ಶಿಕ್ಷಕರನ್ನು ನಾವಿಂದು ಕಾಣಲಾದೀತೆ? ಇಲ್ಲವೆಂದಲ್ಲ, ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಹನಿಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರಷ್ಟೆ. ಆದರೆ ಇಂಥ ಆದರ್ಶ ಶಿಕ್ಷಕರನ್ನು ಹೆಚ್ಚಿಸುವ ದಿಶೆಯಲ್ಲಿ ಶಿಕ್ಷಕರಷ್ಟೇ ಅಲ್ಲ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಇಂದು ಚಿಂತಿಸಬೇಕಾಗಿದೆ. ಏಕೆಂದರೆ ಒಂದು ನಾಡಿನ ಸುಸಂಸ್ಕೃತಿಯನ್ನು ಸಂವೃದ್ಧಿಗೊಳಿಸುವಲ್ಲಿ ಅಲ್ಲಿನ ಗುರು-ಶಿಷ್ಯ ಪರಂಪರೆಯ ಪಾತ್ರ ದೊಡ್ಡದು. ಅದರಲ್ಲೂ ಗುರುವಿನ ಪಾತ್ರ ಬಹು ಮಹತ್ವದ್ದು.

ಜಗತ್ತಿನಲ್ಲಿ ಶಿಕ್ಷಣ ಕ್ಷೇತ್ರಕ್ಕಿರುವಷ್ಟು ಮಹತ್ವ ಬೇರ್‍ಯಾವುದೇ ಕ್ಷೇತ್ರಗಳಿಗೂ ಇಲ್ಲ. ಏಕೆಂದರೆ ಎಲ್ಲಾ ಕ್ಷೇತ್ರಗಳಿಗೂ ಗುರು ಶಿಕ್ಷಣ ಕ್ಷೇತ್ರವೇ. ಶಿಕ್ಷಣ ಮೊದಲು ನಂತರ ಮಿಕ್ಕಿದ್ದೆಲ್ಲವೂ. ಹಾಗೆಯೇ ಶಿಕ್ಷಕ ವೃತ್ತಿಗಿರುವಷ್ಟು ಗೌರವ, ಘನತೆ, ನೆಲೆ, ಬೆಲೆ ಬೇರ್‍ಯಾವ ವೃತ್ತಿಗಳಿಗೂ ಇಲ್ಲ. ಎಲ್ಲಾ ವೃತ್ತಿಗಳ ಸೃಷ್ಟಿಗೂ, ಎಲ್ಲಾ ಕ್ಷೇತ್ರಗಳ ನಿರ್ಮಾಣಕ್ಕೂ ಶಿಕ್ಷಕರೇ ಕಾರಣರು. ಇಂಥಾ ಪವಿತ್ರವಾದ ಶ್ರೇಷ್ಠಾತಿ ಶ್ರೇಷ್ಠ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಮೂಲಕ ನವ ಭಾರತವನ್ನು ಕಟ್ಟಿ ಸಹಸ್ರ ಸಹಸ್ರ ಶ್ರೇಷ್ಠ ಶಿಕ್ಷಕರು ಇತರರಿಗೆ ಮಾದರಿಯಾಗಿ, ಜನಮಾನಸದಲ್ಲಿ ಉಳಿದು ಹೋಗಿದ್ದಾರೆ. ಅಂತಹವರ ಸಾಲಿನಲ್ಲಿ ಎದ್ದು ಕಾಣುವ ಹೆಸರು ಭಾರತ ರತ್ನ ಸರ್ವಪಲ್ಲಿ ರಾಧಾಕೃಷ್ಣನ್!

ಅದು ಸ್ವಾತಂತ್ರ್ಯ ಪೂರ್ವದ ಕಾಲ. ಆಗಲೇ ಪ್ರಸಿದ್ಧಿಯ ಶಿಖರ ಕಂಡಿದ್ದ ಜ್ಞಾನ ದೇಗುಲ ಮೈಸೂರಿನ ಮಹಾರಾಜ ಕಾಲೇಜು. ಆಗ ಅಲ್ಲಿ ಅಷ್ಟೇ ಪ್ರಸಿದ್ಧಿ ಗಳಿಸಿದ್ದ ಆದರ್ಶ ಶಿಕ್ಷಕರೊಬ್ಬರಿದ್ದರು. ತಮ್ಮ ಮಹಾನ್ ಪ್ರತಿಭೆ, ಪಾಂಡಿತ್ಯ, ವಿನಯ, ವಿದ್ವತ್ತು, ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸಹೃದಯತೆಗಳ ಮೆಟೀರಿಯಲ್‌ಗಳಿಂದಲೇ ಅವರು ತಮ್ಮದೇ ಆದ ಬೃಹತ್ ಶಿಷ್ಯಕೋಟೆಯನ್ನು ಕಟ್ಟಿದ್ದರು. ಅದು ಅಂತಿಂಥಾ ಶಿಷ್ಯಕೋಟೆಯಲ್ಲ ಸಿಡಿಲಿಗೂ ಬೆಚ್ಚದ ಉಕ್ಕಿನ ಕೋಟೆ ಅಂಥಾರಲ್ಲ ಅಂಥಾದ್ದು. ಏಕೆಂದರೆ, ಅವರಲ್ಲಿ ಕಲಿತ ವಿದ್ಯೆ ಅಷ್ಟು ಗಟ್ಟಿ ಮುಟ್ಟಾದದ್ದು. ಇಂಥ ಉತ್ತಮೋತ್ತಮ ಶಿಕ್ಷಕ ಅರ್ಥಾತ್ ಶ್ರೇಷ್ಠಗುರು ಯಾರಿಗೆ ತಾನೆ ಇಷ್ಟವಾಗಲ್ಲ? ಹಾಗಾಗಿ ಅವರ ಸುತ್ತ ಯಾವಾಗಲೂ ಸುಮಧುರ ಹೂವಿಗೆ ಮುತ್ತುವ ಜೇನ್ನೊಣಗಳಂತೆ ಶಿಷ್ಯರು ತುಂಬಿರುತ್ತಿದ್ದರು. ಆಶ್ಚರ್ಯವೆಂದರೆ ಶಿಷ್ಯರಿಗಷ್ಟೇ ಅಲ್ಲದೆ ಸಹೋದ್ಯೋಗಿಗಳಿಗೂ ಅವರು ಅಷ್ಟೇ ಆಪ್ತರಾಗಿದ್ದರು.

ಇಂಥ ಶಿಕ್ಷಕರಿಗೆ ಇದ್ದಕ್ಕಿದ್ದಂತೆಯೇ 1921ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಬರುವಂತೆ ನೇಮಕಾತಿ ಪತ್ರ ಕೈ ಸೇರಿತು. ಸುದ್ದಿ ತಿಳಿದ ಶಿಷ್ಯಕೋಟಿಯನ್ನು ಚಿಂತೆಗೀಡು ಮಾಡಿತು. ಇಂಥ ತಮ್ಮ ಮನಸೆಳೆದ ಗುರು ಕಲ್ಕತ್ತಾಗೆ ಹೊರಟು ಬಿಡುತ್ತಾರಲ್ಲ ಎಂಬ ದುಃಖ ಅವರನ್ನು ಆವರಿಸಿತು. ಆದರೇನಂತೆ ಮೆಚ್ಚಿನ ಗುರು ಕೊಲ್ಕತ್ತಾಗೆ ಹೊರಡುವ ದಿನ ಬಂದೇ ಬಿಟ್ಟಿತು. ಅಂದು ತಮ್ಮ ದುಃಖವನ್ನೆಲ್ಲಾ ಅದುಮಿಟ್ಟುಕೊಂಡು ತಮ್ಮ ಅಚ್ಚುಮೆಚ್ಚಿನ ಗುರುವನ್ನು ಆ ಶಿಷ್ಯಕೋಟಿ ಬೀಳ್ಕೊಟ್ಟ ಪರಿ ವ್ಹಾಹ್ ಅದ್ಭುತವಾದದ್ದು! ಜಗತ್ತಿನ ಯಾವ ದೇಶದ ಸರ್ವಾಧಿಕಾರಿ, ಮಹಾರಾಜ, ಸಾರ್ವಭೌಮ, ಚಕ್ರವರ್ತಿಗೂ ಸಿಗಲಾರದಂಥಾದ್ದು!.

ಅಲ್ಲಿ ಅನಗತ್ಯ ವೈಭವ-ವೈಭೋಗಗಳಿರಲಿಲ್ಲ. ಡಂಬಾಚಾರ-ಬೂಟಾಟಿಕೆಯ ದರ್ಶನವಿರಲಿಲ್ಲ. ಅಲ್ಲಿದ್ದಿದ್ದು ಬರೀ ಗುರುಭಕ್ತಿ ಮಾತ್ರ ಅದಕ್ಕೆ ಒಂದಿನಿತೂ ಕಲ್ಮಶವಿರಲಿಲ್ಲ. ಯಾರ ನೇತೃತ್ವ ಗುಂಪುಗಾರಿಕೆ, ಒತ್ತಾಯವಿಲ್ಲದೆ ತನ್ನಂತಾನೆ ಪರಿಶುದ್ಧ ಹಾಲ ನದಿಯಾಗಿ ಗುರುಪ್ರೇಮವೆಂಬುದು ಶಿಷ್ಯರ ಎದೆಗಡಲು ತುಂಬಿ ಹರಿದಿತ್ತು. ಅದನ್ನು ಮೈಸೂರು ಸಾಕ್ಷೀಕರಿಸಿ ಇತಿಹಾಸದ ಪುಟಗಳಲ್ಲಿ ದಾಖಲಿಸಿತ್ತು.

ಅವತ್ತು ಶಿಷ್ಯರೆಲ್ಲರೂ ಸೇರಿ ಅಲಂಕರಿಸಿ ತಂದಿದ್ದ ಟಾಂಗಾ ಗಾಡಿಯಲ್ಲಿ ಅಕ್ಷರಶಃ 'ಗುರುದೇವ್ರೋ ಮಹೇಶ್ವರ' ಎಂಬಂತೆ ತಮ್ಮ ಗುರುದೇವನನ್ನು ಕೂರಿಸಿದ್ದರು. ಆದರೆ ಟಾಂಗಾ ಗಾಡಿ ಎಳೆಯಲು ಕುದುರೆಗೆ ಅವಕಾಶ ಕೊಡದೆ ಶಿಷ್ಯರೇ ಹೆಗಲು ಕೊಟ್ಟು ಲಕ್ಷ್ಮೀಪುರಂನಲ್ಲಿದ್ದ ತಮ್ಮ ಗುರುವಿನ ಮನೆಯಿಂದ ರೈಲ್ವೆ ನಿಲ್ದಾಣದವರೆವಿಗೂ ಟಾಂಗಾ ಗಾಡಿಯನ್ನು ಎಳೆದು ನಡೆದಿದ್ದರು. ಗುರುವಿಗೆ ಜೈಕಾರ ಹಾಕುತ್ತಾ ಸಾಗರದಂತೆ ವಿವಿಧ ಕಡೆಗಳಿಂದ ಹರಿದುಬಂದ ಶಿಷ್ಯಕೋಟಿಯ ಮಹಾಪ್ರವಾಹದಿಂದ ಅಂದು ಇಡೀ ರಸ್ತೆ ತುಂಬಿ ತುಳುಕಿತ್ತು ಅಷ್ಟೇ ಅಲ್ಲ, ಆ ಒಂದು ಕ್ಷಣ ಗುರು-ಶಿಷ್ಯರ ಇಂಥ ಬಾಂಧವ್ಯ ಕಂಡು ಇಡೀ ಮೈಸೂರು ಸಂಭ್ರಮಗೊಂಡು 'ವಾಹ್ಹ್ ಎಂಥಾ ಗುರು? ಎಂಥಾ ಶಿಷ್ಯರು!' ಎಂದು ಉದ್ಘರಿಸಿತ್ತು. ಇತ್ತ ಶಿಷ್ಯರಿಂದ ಗುರು ಮೆರವಣಿಗೆ ಸಾಗಿ ಬರುತ್ತಿದ್ದರೆ ಅತ್ತ ಒಂದು ಗುಂಪು ಮೊದಲೇ ಹೋಗಿ ತಮ್ಮ ಗುರು ಕುಳಿತುಕೊಳ್ಳುವ ರೈಲ್ವೆ ಕಂಪಾರ್ಟ್‌ಮೆಂಟನ್ನು ಚೆಂದವಾಗಿ ಸಿಂಗರಿಸಿತ್ತು. ಅಲ್ಲಿ ಕುಳಿತ ಆ ಗುರುದೇವನನ್ನು ಹೊತ್ತ ರೈಲು ಮೈಸೂರು ನಿಲ್ದಾಣವನ್ನು ಬಿಡುವಾಗ ರೈಲಿನ ವೇಗದಂತೆಯೇ ಗುರು-ಶಿಷ್ಯರ ಅಗಲಿಕೆಯ ದುಃಖವೂ ಹೆಚ್ಚಾಗಿತ್ತು. ವಿಶೇಷವಾಗಿ ಇಂಥ ಶಿಷ್ಯೋತ್ತಮರನ್ನು ಪಡೆದ ನಾನೇ ಧನ್ಯನೆಂಬ ಸಾರ್ಥಕ ಭಾವ ಅವತ್ತು ಆ ಗುರುವನ್ನು ಆವರಿಸಿ ಕಣ್ತುಂಬಿ ತುಳುಕಿತ್ತು.

ತಮ್ಮ ಶಿಷ್ಯಕೋಟಿಯಿಂದ ಇಂಥ ಬೀಳ್ಕೊಡುಗೆಯ ಮಹಾಗೌರವ ಪಡೆದ ಅಂಥ ಆದರ್ಶ ಶಿಕ್ಷಕರು ಬೇರ್‍ಯಾರೂ ಅಲ್ಲ. ಅವರೇ ಡಾ. ಸರ್ವಪಲ್ಲಿ ರಾಧಾಕೃಷ್ಣನ್. ದೇಶದ ಉಪರಾಷ್ಟ್ರಪತಿ, ರಾಷ್ಟ್ರಪತಿ ಹುದ್ದೆಗೇರಿದರೂ ಅವರು ಮೈಸೂರಿನಲ್ಲಿ ತಮ್ಮ ಶಿಷ್ಯರು ಬೀಳ್ಕೊಟ್ಟ ಬೀಳ್ಕೊಡುಗೆಯ ಸಂದರ್ಭವನ್ನು ಆಗಾಗ್ಗೆ ನೆನೆದು "ಆ ದಿನ ಶಿಷ್ಯರು ನನ್ನಲ್ಲಿ ತೋರಿದ ಪ್ರೀತಿಯನ್ನು ನೆನೆದರೆ ಈಗಲೂ ಕಣ್ಣೀರು ಉಕ್ಕುತ್ತದೆ" ಎಂದು ಭಾವುಕರಾಗುತ್ತಿದ್ದರಂತೆ.

ಆದರ್ಶ ಸಮಾಜದ ಕನಸುಗಳನ್ನು ಹೊತ್ತಿದ್ದ ಶಿಷ್ಯ ಪ್ರೀತಿಯ ರಾಧಾಕೃಷ್ಣನ್‌ರಂಥ ಶಿಕ್ಷಕರನ್ನು ನಾವಿಂದು ಕಾಣಲಾದೀತೆ? ಇಲ್ಲವೆಂದಲ್ಲ, ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಹನಿಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರಷ್ಟೆ, ಆದರೆ ಇಂಥ ಆದರ್ಶ ಶಿಕ್ಷಕರನ್ನು ಹೆಚ್ಚಿಸುವ ದಿಶೆಯಲ್ಲಿ ಶಿಕ್ಷಕರಷ್ಟೇ ಅಲ್ಲ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಇಂದು ಚಿಂತಿಸಬೇಕಾಗಿದೆ. ಏಕೆಂದರೆ ಒಂದು ನಾಡಿನ ಸುಸಂಸ್ಕೃತಿಯನ್ನು ಸಂವೃದ್ಧಿಗೊಳಿಸುವಲ್ಲಿ ಅಲ್ಲಿನ ಗುರು-ಶಿಷ್ಯ ಪರಂಪರೆಯ ಪಾತ್ರ ದೊಡ್ಡದು. ಅದರಲ್ಲೂ ಗುರುವಿನ ಪಾತ್ರ ಬಹು ಮಹತ್ವದ್ದು.

ಇಂಥಾ ಶಿಕ್ಷಣ ಲೋಕದ ಧ್ರುವತಾರೆ ಗುರುವರ್ಯ ಡಾ.ಸರ್ವಪಲ್ಲಿ ರಾಧಾಕೃಷ್ಣನ್ 1888ರ ಸೆಪ್ಟೆಂಬರ್ 5ರಂದು ತಮಿಳುನಾಡಿನ ಚಿತ್ತೂರು ಜಿಲ್ಲೆಯ ತಿರುತ್ತಣಿ ಎಂಬ ಗ್ರಾಮದಲ್ಲಿ ಸಂಪ್ರದಾಯನಿಷ್ಠ ಸುಸಂಸ್ಕೃತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಸರ್ವಪಲ್ಲಿ ವೀರಸ್ವಾಮಿ, ತಾಯಿ ಮಹಾಸಾಧ್ವಿ ಸೀತಮ್ಮ. ಈ ದಂಪತಿಯ ಆರು ಮಂದಿ ಮಕ್ಕಳಲ್ಲಿ ರಾಧಾಕೃಷ್ಣನ್ ಎರಡನೆಯವರು. ಇವರ ಪೂರ್ವಿಕರು ಮೂಲತಃ ಸರ್ವಪಲ್ಲಿಯವರಾಗಿದ್ದರು. ಹಾಗಾಗಿ ರಾಧಾಕೃಷ್ಣನ್ ಹೆಸರಿನ ಜೊತೆಯಲ್ಲಿ 'ಸರ್ವಪಲ್ಲಿ' ಎಂಬುದು ಸೇರಿಕೊಂಡಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹುಟ್ಟಿದೂರಿನಲ್ಲೇ ಪೂರೈಸಿದ ಇವರು, ಕಾಲೇಜು ಶಿಕ್ಷಣಕ್ಕೆ ವೆಲ್ಲೂರಿಗೆ ಹೆಜ್ಜೆ ಯಿರಿಸಿದರು. ನಂತರ ತತ್ವಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಂಡು ಅಷ್ಟೇ ಆಸಕ್ತಿಯಿಂದ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲಿತರು. ಅಷ್ಟೇ ಅಲ್ಲ ತತ್ವಶಾಸ್ತ್ರದ ಬಗ್ಗೆ ಅಪಾರವಾದ ಪ್ರೀತಿ ಬೆಳೆಸಿಕೊಂಡರು. ಇನ್ನೂ ವಿದ್ಯಾರ್ಥಿಯಾಗಿ ಹದಿನೈದು ವರ್ಷದವರಾಗಿದ್ದಾಗಲೇ ಶಿವಕಾಮಿ ಅಮ್ಮಾಳ್ ಎಂಬುವವರೊಂದಿಗೆ ವಿವಾಹವಾದರು. ವಿದ್ಯಾಭ್ಯಾಸ ಮುಗಿದ ನಂತರ ಪ್ರತಿಷ್ಠಿತ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಏಳು ವರ್ಷಗಳ ಕಾಲ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ಅಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಗುರುವಾಗಿದ್ದರು. ಇಲ್ಲಿಂದ ಮುಂದುವರಿದು 1917ರಿಂದ ಒಂದು ವರ್ಷ ಕಾಲ ರಾಜ ಮಂಡ್ರಿಯಲ್ಲಿ ಅಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರ ತತ್ವಜ್ಞಾನದ ಮಹಾಪಾಂಡಿತ್ಯವನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾಲಯ ಅವರನ್ನು ಬಹು ಗೌರವಯುತವಾಗಿ ಆಹ್ವಾನಿಸಿ ತತ್ವಶಾಸ್ತ್ರ ಪೀಠದ ಅಧ್ಯಕ್ಷರನ್ನಾಗಿ ನೇಮಿಸಿತು.

1918ರಿಂದ 1921ರವರೆಗೆ ಮೈಸೂರು ಮಹಾರಾಜ ಕಾಲೇಜಿನ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರು ಅಕ್ಷರಶಃ ವಿದ್ಯಾರ್ಥಿಗಳ ಪಾಲಿಗೆ ಗುರುಬ್ರಹ್ಮರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಅವರಿಗಿದ್ದ ಅವಿನಾಭಾವ ಸಂಬಂಧ, ಪ್ರೀತಿ, ವಾತ್ಸಲ್ಯ, ಕಾಳಜಿ, ಕಳಕಳಿಯಿಂದಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಹೃದಯ ಮಂದಿರದಲ್ಲಿ ನೆಲೆಸಿಬಿಟ್ಟಿದ್ದರು. ಇದರ ಪ್ರತಿಫಲವೆಂಬಂತೆ ರಾಧಾಕೃಷ್ಣನ್ ಅವರು 1921ರಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಬಿಟ್ಟು ಕೊಲ್ಕತ್ತಾ ವಿಶ್ವವಿದ್ಯಾಲಯಕ್ಕೆ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ತೆರಳಿದಾಗ ಇಡೀ ಮಹಾರಾಜ ಕಾಲೇಜು ಕಂಬನಿಯ ಸಾಗರವಾಗಿತ್ತು. ಇವತ್ತಿಗೂ ಈ ಘಟನೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಚಿರಸ್ಥಾಯಿಯಾಗಿದೆ. ಅಷ್ಟು ಮಾತ್ರವಲ್ಲ ರಾಜರೂರು ಮೈಸೂರಿನ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಶಿಕ್ಷಕನೆಂಬುವ ಹೇಗಿರಬೇಕೆಂಬುದಕ್ಕೆ ಬಹುದೊಡ್ಡ ಉದಾಹರಣೆಯಾಗಿ ಉದಾತ್ತ ಧ್ಯೇಯದೊಡನೆ ಶಿಕ್ಷಕ ವೃತ್ತಿಯನ್ನು ಬಹಳವಾಗಿ ಗೌರವಿಸುತ್ತಾ ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಸಾರ್ಥಕವೆನಿಸುವ ಅರ್ಥಪೂರ್ಣ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಓರ್ವ ಶ್ರೇಷ್ಠ ಶಿಕ್ಷಕ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞ ಮಾತ್ರ ಆಗಿರಲಿಲ್ಲ. ಅಪಾರ ಅನುಭವವುಳ್ಳ, ಅಸಾಧಾರಣ ಅಧ್ಯಯನವುಳ್ಳ ತತ್ವಜ್ಞಾನಿಯೂ ಆಗಿದ್ದರು. ಈ ದಿಸೆಯಲ್ಲಿ ಇವರು ರಚಿಸಿದ್ದ 'ದಿ ಎಥಿಕ್ಸ್ ಆಫ್ ವೇದಾಂತ' ಪ್ರಬಂಧ ಪುಸ್ತಕ ಮತ್ತು 'ಜಿನ್ಯೂನ್ ಮ್ಯಾನಿಫೆಸ್ಟೇಷನ್ ಆಫ್ ಇಂಡಿಯನ್ ಸ್ಪಿರಿಟ್' ಹಾಗೂ 'ದಿ ರೀಜನ್ ಆಫ್ ರಿಲಿಜಿಯನ್ ಇನ್ ಕಾಂಟೆಂಪರರಿ ಫಿಲಾಸಫಿ' ಮುಂತಾದ ಕೃತಿಗಳು ಮಹತ್ವವೆನಿಸಿದ್ದು ವಿಶ್ವ ಮನ್ನಣೆ ಗಳಿಸಿವೆ ಯಾವುದೇ ವ್ಯಕ್ತಿಯಾಗಲಿ ಬಡವನಾಗಿ ಹುಟ್ಟಿರಲಿ, ಸಿರಿವಂತನಾಗಿ ಹುಟ್ಟಿರಲಿ ಸಾಧನೆಗೆ ಇದಾವುದೂ ಅಡ್ಡಿಯಾಗದು. ಗುರಿ ಸಾಧಿಸುವ ಛಲದ ಜೊತೆ ಇಚ್ಛಾಶಕ್ತಿ, ಕ್ರಿಯಾಶಕ್ತಿ ಹಾಗೂ ಜ್ಞಾನಶಕ್ತಿ ಇದ್ದರೆ ಎಂಥಾ ಅದ್ಭುತವನ್ನಾದರೂ ಸಾಧಿಸಬಹುದು ಎಂಬುದಕ್ಕೆ ರಾಧಾಕೃಷ್ಣನ್ ಅವರ ಜೀವನವೊಂದು ಮಹಾಪಠ್ಯವಾಗಿ ನಮ್ಮ ಮುಂದಿದೆ. ಪ್ರತಿಯೊಬ್ಬರೂ ಅದನ್ನು ಅರಿತು ನಡೆಯಬೇಕಷ್ಟೆ.

1951ರಲ್ಲಿ ದೇಶದ ಮೊದಲ ಉಪರಾಷ್ಟ್ರಪತಿಯೂ ಆಗಿ 1962ರಲ್ಲಿ ರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಅವರು ಆಯ್ಕೆಯಾದ ಹಿನ್ನೆಲೆಯಲ್ಲಿ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲು ಅವರ ಶಿಷ್ಯಕೋಟಿ ಬಯಸಿತು. ಆದರೆ ಆಗ ರಾಧಾಕೃಷ್ಣರು ಶಿಕ್ಷಕ ಮತ್ತು ಶಿಕ್ಷಣ ಕ್ಷೇತ್ರದ ಮೇಲೆ ತಮಗಿದ್ದ ಅಭಿಮಾನದಿಂದ ತಮ್ಮ ಹುಟ್ಟುಹಬ್ಬವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವಂತೆ ಸಲಹೆ ನೀಡಿದರು. ಅದರಂತೆ ಅಂದಿನಿಂದ ಪ್ರತಿವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ. ರಾಧಾಕೃಷ್ಣನ್ ರಾಷ್ಟ್ರಪತಿಗಳಾದರೂ ಶಿಕ್ಷಕರಾಗಿಯೇ ರಾರಾಜಿಸಿದವರು.

ತತ್ವಶಾಸ್ತ್ರದ ಮೇರು ಜ್ಞಾನಿಯಾಗಿದ್ದ ರಾಧಾಕೃಷ್ಣನ್‌ರ ಪಾಂಡಿತ್ಯದ ಪ್ರಭೆಯನ್ನು ಕಂಡ ಪಾಶ್ಚಾತ್ಯರು ಇವರನ್ನು ಗ್ರೀಕ್ ತತ್ವಜ್ಞಾನಿ ಪ್ಲೇಟೋಗೆ ಹೋಲಿಸುವುದುಂಟು. ಜಗತ್ತಿನ ಯಾವುದೇ ಧರ್ಮಗಳನ್ನು, ತತ್ವಗಳನ್ನು, ಭಾರತದ ಧರ್ಮಗಳು, ತತ್ವಗಳು ಮೀರಿ ನಿಲ್ಲುತ್ತವೆ ಎಂದು ಜಗಜ್ಜಾಹೀರುಗೊಳಿಸಿ ಭಾರತದ ತತ್ವಜ್ಞಾನಕ್ಕೆ, ಪಾಂಡಿತ್ಯಕ್ಕೆ, ಬೋಧನೆಗೆ, ಭಾಷಾಕೌಶಲ್ಯಕ್ಕೆ, ಬರವಣಿಗೆಗೆ ಮಾರು ಹೋಗಿ 1931ರಲ್ಲಿ ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರ ಶಿಫಾರಸ್ಸಿನ ಮೇರೆಗೆ ಬ್ರಿಟಿಷ್ ಸರ್ಕಾರ ಇವರಿಗೆ 'ಸರ್' ಪದವಿ ನೀಡಿ ಗೌರವಿಸಿದೆ. 1950ರ ಜನವರಿ 14ರಂದು ರಷ್ಯಾದ ಸರ್ವಾಧಿಕಾರಿ ಎನಿಸಿದ್ದ ಸ್ಟಾಲಿನನನ್ನು ರಾಧಾಕೃಷ್ಣನ್ ಭೇಟಿ ಮಾಡಿದಾಗ ರಾಧಾಕೃಷ್ಣನ್‌ರ ವ್ಯಕ್ತಿತ್ವದಿಂದ ಆಕರ್ಷಿತನಾದ ಸ್ಟಾಲಿನ್‌ನಂತಹ ಉಕ್ಕಿನ ಮನುಷ್ಯ "ನನ್ನನ್ನು ಮನುಷ್ಯನಂತೆ ಕಂಡವರು ನೀವೊಬ್ಬರೇ" ಎಂದು ಭಾವೋದ್ವೇಗದಿಂದ ಉದ್ಘರಿಸಿ ರಾಧಾಕೃಷ್ಣನ್‌ರನ್ನು ಗುಣಗಾನ ಮಾಡುತ್ತಾನೆ. ಅಂಥಾ ಮಾನವೀಯ ಗುಣದ ಅದ್ಭುತ ವ್ಯಕ್ತಿತ್ವ ರಾಧಾಕೃಷ್ಣನ್‌ರದ್ದು!

ತತ್ವಜ್ಞಾನದ ಹಿನ್ನೆಲೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಊರ್ಧ್ವ ಮುಖಿಯಾಗಿ ಬೆಳೆಸಿಕೊಳ್ಳುತ್ತಾ ಹೋದ ರಾಧಾಕೃಷ್ಣನ್ 1951ರಲ್ಲಿ ಭಾರತದ ಉಪ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದರು. 1962ರವರೆಗೆ ಸ್ವತಂತ್ರ ಭಾರತದ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಇವರು 1962ರಿಂದ 1967ರ ತನಕ ಭಾರತದ ಎರಡನೇ ರಾಷ್ಟ್ರಪತಿಯಾಗಿ ಓರ್ವ ಶಿಕ್ಷಕರಾಗಿ ಚರಿತ್ರೆ ಬರೆದರು. ತಮ್ಮ ದಕ್ಷ ಆಡಳಿತದಿಂದ ದೇಶದ ಹೆಮ್ಮೆಯಾದರು. ಡಾ.ರಾಧಾಕೃಷ್ಣನ್ ಅವರು ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ಭಾರತ ರತ್ನ"ಕ್ಕೆ 1954ರಲ್ಲಿ ಭಾಜನರಾದರು. 87 ವಸಂತಗಳ ಸಾರ್ಥಕ ಬದುಕನ್ನು ಕಂಡ ಭಾರತರತ್ನ ಡಾ.ಎಸ್.ರಾಧಾಕೃಷ್ಣನ್ ಅವರು 1975ರ ಏಪ್ರಿಲ್ 17ರಂದು ಇಹಲೋಕ ತ್ಯಜಿಸಿದರು.

ವಾರಭವಿಷ್ಯ



4.9.2022 ರಿಂದ 10.9.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಕನ್ಯಾ, ಚಂದ್ರ-ಮಕರ, ಕುಂಭ, ಮೀನ, ಕುಜ-ವೃಷಭ, ಬುಧ-ಕನ್ಯಾ, ಗುರು-ಮೀನ, ಶುಕ್ರ-ಕನ್ಯಾ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಆತ್ಮೀಯ ಬಂಧುಗಳು ಮನೆಗೆ ಆಗಮನ, ಅವರ ಆದರಾತಿಥ್ಯಕ್ಕೆ ಹಣ ಖರ್ಚು, ಭವಿಷ್ಯದ ಕೆಲಸಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಒಳ್ಳೆಯದು. ಹೋಟೆಲ್, ಕ್ಯಾಟರಿಂಗ್ ಉದ್ಯಮಿಗಳಿಗೆ ಹೇರಳ ಧನಲಾಭವಾಗುವುದು. ಸಿವಿಲ್ ಇಂಜಿನಿಯರ್‌ಗಳಿಗೆ ದೊಡ್ಡ ಯೋಜನೆ ಸಿಗುವುದು. ಯಂತ್ರೋಪಕರಣ ವ್ಯಾಪಾರಿಗಳಿಗೆ ಉತ್ತಮ ಲಾಭ, ಜನ್ಮಸ್ಥ ರಾಹು ದುಡುಕಿಗೆ ಪ್ರೇರೇಪಿಸುವನು. ನಿಮ್ಮ ಭಾರ್ಯೆಯೊಂದಿಗೆ ಪ್ರೇಮಭಾವದಿಂದ ವರ್ತಿಸಿ. -ಶ್ರೀ ವಿಘ್ನೇಶ್ವರನಿಗೆ ಗರಿಕೆ ಸಮರ್ಪಣೆ, ಶುಭಸಂಖ್ಯೆ-8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸಪ್ತಾಹದ ಆದಿಗೆ ಸಂತೋಷ, ಧನಧಾನ್ಯ ಸಂಗ್ರಹ, ಶೇರು ವ್ಯವಹಾರಗಳಲ್ಲಿ ಲಾಭ ದೊರೆಯುವ ಸಂಭವ. ಪ್ರಭಾವಶಾಲಿಗಳೆನಿಸಿ ಶತ್ರುಗಳ ಮೇಲೆ ವಿಜಯ. ಅಪರಿಚಿತರೊಡನೆ ಹಣಕಾಸು ವ್ಯವಹಾರದಲ್ಲಿ ನಷ್ಟ, ದ್ವಿದಳ ಧಾನ್ಯ ಫಸಲುಗಳಿಂದ ಧನ ಗಳಿಕೆ. ಗುರು ಹಿರಿಯರ ಮಾರ್ಗದರ್ಶನ ಹಾಗೂ ಶ್ರೀಮತಿಯ ಸಹಾಯ ಹಸ್ತವೂ ದೊರೆಯಲಿದೆ. ಕ್ರೆಡಿಟ್ ಕಾರ್ಡ್ ಇದೆ ಎಂದು ಸಿಕ್ಕಾಪಟ್ಟೆ ಸಾಲ ಮಾಡದಿರಿ. ವ್ಯಯಸ್ಥಿತ ರಾಹುವಿನಿಂದ ಅನಗತ್ಯ ಶಿಕ್ಷೆಗೆ ಗುರಿಯಾಗುವ ಸಾಧ್ಯತೆ. - ಶ್ರೀ ದೇವಿ ಉಪಾಸನೆ, ಶುಭಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
'ಧೈರ್ಯಂ ಸರ್ವತ್ರ ಸಾಧನಂ' ಗ್ರಹ ಬಲವಿದೆ ಸಮಸ್ಯೆಯನ್ನು ಪರಿಹರಿಸುವ ಉತ್ತಮ ಮಾರ್ಗವೆಂದರೆ ಅದನ್ನು ಎದುರಿಸುವುದು. ಫೈನಾನ್ಸ್ ವ್ಯವಹಾರಗಳು ಉತ್ತಮ ಆದಾಯ ತರುವುದು. ರಫ್ತು, ಉದ್ದಿಮೆದಾರರಿಗೂ ದೊಡ್ಡ ಆರ್ಡರ್ ದೊರೆಯುವ ಸಂಭವ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿ ಉಂಟಾಗುವುದು. ಮಕ್ಕಳ ಚಲನ-ವಲನದ ಮೇಲೆ ನಿಗಾ ಇಡಿ. ವನಿತಾಮಣಿಯರು ಅಲಂಕಾರಿಕ ವಸ್ತುಗಳಿಗೆ ಹೇರಳ ಧನ ವ್ಯಯಿಸುವರು. - ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ, ಶುಭಸಂಖ್ಯೆ-4.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ಹೊಸ ಜೀವನ ವೃತ್ತಿಯನ್ನು ಪ್ರಾರಂಭಿಸಲು ಗ್ರಹಾನುಕೂಲವಿದೆ. ಆದರೆ ಪಾರ್ಟನರ್‌ಶಿಪ್ ಮಾಡಬೇಡಿ. ಕೃತಿಯ ಗೆಳೆಯರಿಂದ ತೊಂದರೆ ಅನುಭವಿಸಬೇಕಾದೀತು. ಶುಭಸ್ಥಾನ ಸ್ಥಿತ ಗುರುವಿನಿಂದ ಯತ್ನ ಕಾರ್ಯಗಳಲ್ಲಿ ಜಯವನ್ನು ಕಾಣುವಿರಿ. ಇದು ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರದೆ, ಮುಂದಾಗಬೇಕಾಗಿರುವ ವಿಷಯಗಳತ್ತ ಗಮನ ಹರಿಸಿ. ಉಚ್ಚ ಶುಕ್ರನಿಂದ ಐಷಾರಾಮಿ ವಸ್ತುಗಳ ಖರೀದಿ, ವಾರಾಂತ್ಯಕ್ಕೆ ಅದ್ಭುತ ಕ್ರಿಯಾಶಕ್ತಿ ನಿಮ್ಮದಾಗಲಿದೆ. - ಶ್ರೀ ನಾರಾಯಣೀ ಸ್ತೋತ್ರ ಪಠಿಸಿ, ಶುಭಸಂಖ್ಯೆ-3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಈ ವಾರ ವೈಯಕ್ತಿಕ, ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಖ್ಯಾತಿಯನ್ನು ಗಳಿಸುವಿರಿ. ಅಶುಭ ಗುರುವಿನ ಹೊರತಾಗಿಯೂ ಇದು ನಿಮ್ಮ ಪರಿಶ್ರಮಗಳಿಗೆ ಫಲ ನೀಡುವ ಸಮಯ. ವಿದ್ಯಾರ್ಥಿಗಳಿಗೆ ವಿದ್ಯೆ ಕುಂಠಿತವಾಗುವುದು. ಈ ವಾರದಲ್ಲಿ 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆ ಮಾತನ್ನು ಪಾಲಿಸಿದರೆ ಒಳ್ಳೆಯದು. ಅನ್ಯಥಾ ಸಾಲ ಮಾಡಬೇಕಾದ ಪರಿಸ್ಥಿತಿ ಬಂದೀತು. ಖಯಾಲಿ ಪ್ರವಾಸಗಳನ್ನು ತ್ಯಜಿಸಿದರೆ ಒಳ್ಳೆಯದು. - ಶ್ರೀ ಸೂರ್ಯಸ್ತುತಿ, ಶುಭಸಂಖ್ಯೆ-7.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಶ್ರದ್ಧಾವಾನ್ ಲಭತೇ ಫಲಕ ಎಂಬ ಉಕ್ತಿಯಂತೆ ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದಲ್ಲಿ ಗುರಿಯನ್ನು ತಲುಪುವಿರಿ. ಗುರುಬಲವೂ ಇದೆ. ಎನ್‌ಕ್ಯಾಷ್ ಮಾಡಿಕೊಳ್ಳಿ, ಹೊಸ ವೃತ್ತಿ, ಉದ್ಯಮ ಆರಂಭಿಸಲು ಶುಭ ಸಮಯವಿದೆ. ಮನೆಯ ಮುಂದೆ ಚಪ್ಪರ ಹಾಕುವ ಸುಯೋಗವಿದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಸಫಲತೆ ಉಂಟಾಗಲಿದೆ. ಪುಣ್ಯ ಕಾರ್ಯಾಚರಣೆಯಿಂದ ಪ್ರಸಿದ್ಧಿಗೆ ಬರುವಿರಿ. ಅಷ್ಟಮ ರಾಹುವಿನಿಂದ ದುಡುಕಿನ ಪ್ರವೃತ್ತಿ - ಶ್ರೀ ಮನ್ನಾರಾಯಣ ಅರ್ಚನೆ, ಶುಭಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಆಗುವುದನ್ನು ಬದಲಾಯಿಸಲಾಗದು. ಆದರೆ ಭವದನುಗ್ರಹದಿಂದ ಕಡಿಮೆ ಮಾಡಿಕೊಳ್ಳಬಹುದು. ನಿಮ್ಮ ಸುತ್ತಮುತ್ತಲಿನ ಅಸೂಯಾಪರರ ನಿಮ್ಮ ಸಂಭಾವಿತ ತನವನ್ನು ದುರುಪಯೋಗ ಮಾಡಿಕೊಳ್ಳುವರು. ಬಂದ ಹಣ ಬಂದಂತೆ ಖರ್ಚಾಗುವುದು. ರಾಹು-ಕೇತು ಅಶುಭರಿದ್ದು ಮನೆ ಮಂದಿಯಲ್ಲಿ ಕಲಹಗಳು ಉಂಟಾಗದಂತೆ ವರ್ತಿಸಿ. ವಾರದ ಕಡೆಗೆ ಶುಭ ಸುದ್ದಿಯ ಓಲೆ ಬರುವುದು. ದಿನಚರ್ಯೆಯಲ್ಲಿ ಮೆಡಿಟೇಷನ್ ಮಾಡುವುದರಿಂದ ಮನಃಶಾಂತಿ ಲಭಿಸುವುದು. - ಶ್ರೀ ನಾರಾಯಣೀ ಸ್ತೋತ್ರ ಜಪ, ಶುಭಸಂಖ್ಯೆ-6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಸುಕರ್ಮಗಳನ್ನು ಮಾಡುವುದರಿಂದ ಸುಫಲವನ್ನು ಹೊಂದುವಿರಿ. ನಿಮ್ಮ ಪ್ರಯತ್ನಗಳಿಗೆ ದೈವ ಸಹಾಯವೂ ದೊರೆಯಲಿದೆ. 'ಹಸಿದು ಉಂಡ ಊಟ ರುಚಿ ಜಾಸ್ತಿ' ಎಂಬಂತೆ ಈಗ ಸುಸಮಯ ಬಂದಿದೆ. ಆಸ್ತಿ ಕ್ರಯ-ವಿಕ್ರಯಗಳಲ್ಲಿ ವಿಜಯಶಾಲಿಗಳೆನಿಸುವಿರಿ. ಗುರು ಜನರ ಭೇಟಿ ಹಾಗೂ ಆಶೀರ್ವಾದಗಳು ದೊರೆಯಲಿದೆ. ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ಲಾಭಾಂಶ ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. - ಶ್ರೀ ಲಕ್ಷ್ಮೀಸಮೇತ ನೃಸಿಂಹ ದರ್ಶನ, ಶುಭಸಂಖ್ಯೆ-9.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಶುಭ ಚಂದ್ರ ಸಂಚಾರದಿಂದ ಹಣಕಾಸು ವಿಚಾರಗಳು ಆಶಾದಾಯವಾಗಿರುತ್ತೆ ಎಂದು ಹೇಳಬಹುದು. ವೃತ್ತಿ ಸಂಬಂಧವಾಗಿ ಅನ್ಯಕ್ಷೇತ್ರ ವಾಸ ಮಾಡಬೇಕಾದೀತು. ಹಳೆಯ ಗೆಳೆಯರ ಭೇಟಿಯಿಂದ ಸಂತಸಪಡುವಿರಿ. ವಾರಮಧ್ಯೆ ವಿಚಾರ ಹೀನತೆಯಿಂದ ನಷ್ಟವನ್ನು ಅನುಭವಿಸುವಿರಿ. ಸ್ವಂತದ ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗುವುದು. ಹೊಸ ಬಂಡವಾಳ ಹೂಡಲು ಕಾಲವು ಅನುಕೂಲವಾಗಿಲ್ಲ. ಪ್ರಯಾಣಗಳಿಂದಲೂ ಹಾನಿ ಉಂಟಾದೀತು. - ಶ್ರೀ ದತ್ತಗುರು ಧ್ಯಾನ, ಶುಭಸಂಖ್ಯೆ-2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ವಾರದ ಪೂರ್ವಾರ್ಧ ಮಾಡಿದ ಪ್ರಯತ್ನಗಳಿಗೆ ಸೂಕ್ತ ಪ್ರತಿಫಲ ದೊರೆಯುವುದು. ಇದಕ್ಕೆ ನಿಮ್ಮ ಆಪ್ತೇಷ್ಟರ ಸಹಕಾರ ಸಹಾಯಗಳು ಒದಗಿ ಬರುವುದು. ಜನ್ಮ ಶನಿದೇವನ ಕಾರಣ ಕಂಟ್ರಾಕ್ಟರುಗಳಿಗೆ, ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಸುಖವಿಲ್ಲ ಅನಿಸುವುದು. ಮಂಡಿ ನೋವು, ಕೀಲು ನೋವು ಕಾಡಬಹುದು. ಡ್ರೈವಿಂಗ್‌ನಲ್ಲಿ ಜಾಗ್ರತೆ ತಪ್ಪಿದರೆ ಜಾರುತ್ತೀರ. - ಶ್ರೀ ಶನ್ಯಾಷ್ಟೋತ್ತರ ಪಠಿಸಿ, ಎಳ್ಳೆಣ್ಣೆ ದಾನ. ಶುಭಸಂಖ್ಯೆ-7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
'ಮಂಥನ ಮಾಡದೇ ಅಮೃತ ಸಿಗದು', ಗುರು-ಚಂದ್ರರ ಕೃಪೆಯಿಂದ ಕೆಲಸ ಕಾರ್ಯಗಳು ಸರಾಗವಾಗಿ ಮುಂದೆ ಸಾಗುವುದು. ನಿರೀಕ್ಷಿತ ಹಣವೂ ಕೈ ಸೇರಲಿದೆ. ವಿದ್ಯಾ ಬೋಧಕ ಸಂಸ್ಥೆಗಳಿಗೆ ಹೆಚ್ಚಿನ ಧನ ಗಳಿಕೆಯಾಗಲಿದೆ. ಬಂಗಾರ, ರತ್ನ ವ್ಯಾಪಾರಿಗಳಿಗೆ ವಿಶೇಷ ಧನಲಾಭವಾಗುವುದು. ಸರ್ಕಾರಿ ವರಿಷ್ಠ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚಳವಾಗುವುದು. ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಗ್ರಹಾನುಕೂಲವಿದೆ. ಕರ್ತವ್ಯ ನಿರ್ವಹಿಸುತ್ತಾ ಭಗವಾಧ್ಯಾನ ಮಾಡಿ. - ಶರಧಿ ಶಯನ ಶ್ರೀವಿಷ್ಣುನಾಮ ಸ್ಮರಣೆ, ಶುಭಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳಬೇಕು. ಶನಿ-ಚಂದ್ರ ಯೋಗಬಲದಿಂದ ಈ ವಾರ ನೀವು ಬಹಳಷ್ಟು ಸಾಧಿಸುವ ಸಾಮರ್ಥ್ಯ ಪಡೆಯುತ್ತೀರಿ. ಅವಕಾಶಗಳು ಬರುವುದೇ ಅಪರೂಪ. ಬಂದ ಅವಕಾಶಗಳು ಕೈ ಜಾರದಂತೆ ನೋಡಿಕೊಳ್ಳಿ. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾದರೂ ಪರ್ಸ್ ಮಾತ್ರ ಖಾಲಿ ಹೊಡೆಯುವುದು. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ವಾತ-ಕಫ ದೋಷಗಳಿಂದ ಆರೋಗ್ಯ ಕೆಡಬಹುದು. - ಶ್ರೀ ಗುರು ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ-2.

ಮಕ್ಕಳ ಚಿತ್ರ ಕಥೆ

ಹೀಗೊಂದು ರೋಚಕ ನೈಜ ಘಟನೆ !!


-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199




1 "ಜಿಮ್ ತೋರ್ಪ್" - ಈ ಹೆಸರನ್ನು ಬಹುಷ್ಟು ಮಂದಿ ಕೇಳಿರುವುದಿಲ್ಲ. ಈತ ಅಮೆರಿಕಾದ ಖ್ಯಾತ ಕ್ರೀಡಾಪಟುಗಳಲ್ಲಿ ಒಬ್ಬ.




2 ಅಂದಿನ ಕಾಲದಲ್ಲಿ, ಅಮೆರಿಕಾದ ಎಲ್ಲಾ ಕ್ರೀಡಾಪಟುಗಳಿಗಿಂತ ಅತ್ಯಂತ ವೇಗದ ಓಟಗಾರನಾಗಿದ್ದ. "ತೋರ್ಪ್"



3 ಹೀಗಿರುವಾಗ ಈತನನ್ನು 1912 ರಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಅಮೆರಿಕಾವನ್ನು ಪ್ರತಿನಿಧಿಸುವ ಓಟಗಾರನಾಗಿ ಆಯ್ಕೆಗೊಂಡ.



4 ಆದರೆ ದುರಾದೃಷ್ಟವಶಾತ್, ಅಂದಿನ ಪಂದ್ಯ ಇನ್ನೇನು ಆರಂಭವಾಗಬೇಕಿದ್ದ ಸಮಯದಲ್ಲಿ ಆತ ಧರಿಸಬೇಕಿದ್ದ "ಶೂ" ಗಳನ್ನು ಯಾರೋ ಕದ್ದೊಯ್ದುಬಿಟ್ಟಿದ್ದರು.



5 ಈ ಅನಿರೀಕ್ಷಿತ ಘಟನೆಯಿಂದ ಕ್ಷಣಕಾಲ ವಿಚಲಿತನಾದ "ತೋರ್ಪ್" ಕೆಲವೇ ನಿಮಿಷಗಳಲ್ಲಿ ಸಾವರಿಸಿಕೊಂಡು ಬಳಿಯೇ ಇದ್ದ ಕಸದ ತೊಟ್ಟಿಯಲ್ಲಿ ಹುಡುಕಿದಾಗ ಒಂದು ಜೊತೆ ಹಳೆಯ "ಶೂ" ಗಳು ಸಿಕ್ಕವು. ಅದರಲ್ಲಿ ಒಂದು "ಶೂ" ಬಹಳ ಉದ್ದವಾಗಿತ್ತು. ಇದರಿಂದ ಧೃತಿಗೆಡದ ಆತ ಉದ್ದವಾಗಿದ್ದ "ಶೂ" ಒಳಗೆ ಹಲವಾರು ಸಾಕ್ಸ್‌ಗಳನ್ನು ಧರಿಸಿಕೊಂಡು, ಸಿದ್ದವಾಗಿ ಕಣಕ್ಕೆ ಇಳಿದೇ ಬಿಟ್ಟ.



6 ಕಥೆ ಇಷ್ಟಕ್ಕೇ ಮುಗಿಯಲಿಲ್ಲಾ. ಅಂದಿನ ಸ್ಪರ್ಧೆಯಲ್ಲಿ ಆತ ವಿಜಯಿಯಾಗಿ ಎರಡು ಚಿನ್ನದ ಪದಕಗಳನ್ನು ಗಳಿಸಿಬಿಟ್ಟ.

ಕೊಡಗು ಜಿಲ್ಲೆಯಲ್ಲಿ ಸಂಭ್ರಮದ ಕೈಲ್ ಪೋಳ್ದ್ ಆಚರಣೆ

ಮಡಿಕೇರಿ,ಸೆ.3– ಕೊಡಗು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಶನಿವಾರ ಕೈಲ್ ಪೋಳ್ದ್ ಹಬ್ಬವನ್ನು ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸಲಾಯಿತು. ಕೊಡವ ಸಮುದಾಯ ಮತ್ತು ಇಲ್ಲಿನ ಮೂಲ ನಿವಾಸಿಗಳು ಆಯುಧ ಪೂಜೆ ಮಾದರಿಯಲ್ಲಿ ಹಬ್ಬವನ್ನು ಆಚರಿಸಿದ್ದು, ಈ ಹಬ್ಬಕ್ಕೆ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ವೈದ್ಯಕೀಯ ಸಚಿವ ಡಾ.ಕೆ. ಸುಧಾಕರ್ ಸೇರಿದಂತೆ ಗಣ್ಯ ವ್ಯಕ್ತಿಗಳು ಶುಭ ಹಾರೈಸಿದ್ದಾರೆ.

'ಸಮಸ್ತ ಕೊಡವ ಬಾಂಧವರಿಗೆ 'ಕೈಲ್ ಪೋಳ್ದ್' ಹಬ್ಬದ ಹಾರ್ದಿಕ ಶುಭಾಶಯಗಳು. ಕೊಡಗಿನ ರೈತಾಪಿ ವರ್ಗ ತಾನು ದಿನನಿತ್ಯ ಬಳಸುವ ಆಯುಧಗಳಿಗೆ ಪೂಜೆ ಸಲ್ಲಿಸುವ ಮೂಲಕ ಕೃತಜ್ಞತಾ ಭಾವವನ್ನು ಸಂಭ್ರಮ ಸಡಗರದಿಂದ ಆಚರಿಸುವ ಹಬ್ಬ ಇದಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಟ್ವೀಟ್ ಮಾಡಿದ್ದಾರೆ.

'ನಾಡಿನ ಸಮಸ್ತ ಜನತೆಗೆ ಕೈಲ್ ಪೋಳ್ದ್ ಹಬ್ಬದ ಶುಭಾಶಯಗಳು. ಈ ಹಬ್ಬವು ಎಲ್ಲರ ಬಾಳಲ್ಲಿ ಸುಖ ಹಾಗೂ ಸಮೃದ್ಧಿ ತರಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ಇನ್ನು ಸಚಿವ ಡಾ.ಕೆ.ಸುಧಾಕರ್ ಅವರು ಆಂಗ್ಲ ಭಾಷೆಯಲ್ಲಿ 'ಹ್ಯಾಪಿ ಕೈಲ್ ಪೋಳ್ದ್ ಟು ಆಲ್ ಮೈ ಕೊಡವ ಫ್ರೆಂಡ್ಸ್' ಎಂದು ಆಯುಧಗಳ ಪೂಜೆಯ ಫೋಟೋ ಹಾಕಿ ಟ್ವೀಟ್ ಮೂಲಕ ಶುಭಾಶಯ ಕೋರಿದ್ದಾರೆ.

ಪೊನ್ನಂಪೇಟೆ ಕೊಡವ ಸಮಾಜದಲ್ಲಿ ಹಬ್ಬ ಆಚರಣೆ



ಶ್ರೀಮಂಗಲ, ಸೆ.3– ಪೊನ್ನಂಪೇಟೆ ಕೊಡವ ಸಮಾಜದಲ್ಲಿ ಪೊನ್ನಂಪೇಟೆ ಕೊಡವ ಸಮಾಜ ಮತ್ತು ಪೊನ್ನಂಪೇಟೆ ಕ್'ಗ್ಗಟ್ಟ್ ನಾಡ್ ಕೊಡವ ಹಿತರಕ್ಷಣಾ ಬಳಗದ ಆಶ್ರಯದಲ್ಲಿ ಶನಿವಾರ ಕೈಲ್ ಪೋಳ್ದ್ ಹಬ್ಬದ ಪ್ರಮುಖ ಕೃಷಿ ಪರಿಕರಗಳಾದ ನೇಗಿಲು,ನೊಗ, ಅದಲ್ಲದೇ ಕೋವಿ,ಕತ್ತಿ, ಮತ್ತು ವಾಹನಗಳಿಗೆ ಸಾಂಪ್ರದಾಯಿಕವಾಗಿ ಆಯುಧ ಪೂಜೆ ಮಾಡಲಾಯಿತು.ಇದೇ ಸಂದರ್ಭ ತೆಂಗಿನಕಾಯಿಗೆ ಗುಂಡು ಹೊಡೆದು ಸಂಭ್ರಮಾಚರಣೆ ಮಾಡಲಾಯಿತು.

ಈ ಸಂದರ್ಭ ಪೊನ್ನಂಪೇಟೆ ಕೊಡವ ಸಮಾಜದ ಅಧ್ಯಕ್ಷ ಕಾಳಿಮಾಡ ಮೋಟಯ್ಯ, ಉಪಾಧ್ಯಕ್ಷೆ ಚಿರಿಯಪಂಡ ಇಮ್ಮಿ ಉತ್ತಪ್ಪ,ಗೌ.ಕಾರ್ಯದರ್ಶಿ ಕೋಟೆರ ಕಿಶನ್ ಉತ್ತಪ್ಪ, ಖಜಾಂಚಿ ಕಳ್ಳಿಚಂಡ ಕಟ್ಟಿ ಪೂಣಚ್ಚ, ಸಹಕಾರ್ಯದರ್ಶಿ ಆಲೇಮಾಡ ಸುಧೀರ್, ಆಡಳಿತ ಮಂಡಳಿ ನಿರ್ದೇಶಕರಾದ ಮೂಕಳೇರ ಕಾವ್ಯ ಕಾವೇರಮ್ಮ, ಕೋಣಿಯಂಡ ಸಂಜು ಸೋಮಯ್ಯ, ಅಡ್ಡಂಡ ಸುನಿಲ್ ಸೋಮಯ್ಯ,ಮೂಕಳಮಾಡ ಅರಸು ನಂಜಪ್ಪ ಚೊಟ್ಟೆಕಾಳಪಂಡ ಆಶಾ ಪ್ರಕಾಶ್, ಚೆಪ್ಪುಡೀರ ರಾಕೇಶ್ ದೇವಯ್ಯ, ಚೀರಂಡ ಕಂದಾ ಸುಬ್ಬಯ್ಯ ಹಾಗೂ ಖಾಯಂ ಆಹ್ವಾನಿತರಾದ ಚೆಪ್ಪುಡೀರ ಕಿಟ್ಟು ಅಯ್ಯಪ್ಪ ಕ್'ಗ್ಗಟ್ಟ್ ನಾಡ್ ಕೊಡವ ಹಿತರಕ್ಷಣಾ ಬಳಗದ ಅಧ್ಯಕ್ಷ ಚಿರಿಯಪಂಡ ರಾಜ ನಂಜಪ್ಪ, ಕಾರ್ಯದರ್ಶಿ ಗಾಂಡಂಗಡ ಕೌಶಿಕ್ ದೇವಯ್ಯ, ಉಪಾಧ್ಯಕ್ಷ ಚೆಕ್ಕೆರ ರಮೇಶ್, ಮಾಜಿ ಅಧ್ಯಕ್ಷ ಕಾಯಪಂಡ ಸನ್ನಿ ಬೋಪಣ್ಣ, ಸಮಾಜದ ಮಾಜಿ ಅಧ್ಯಕ್ಷ ಚೊಟ್ಟೆಕ್ ಮಾಡ ರಾಜೀವ್ ಬೋಪಯ್ಯ, ಪ್ರಮುಖರಾದ ಮಲ್ಲಮಾಡ ಪ್ರಭು ಪೂಣಚ್ಚ, ಮತ್ರಂಡ ಕಬೀರ್ ದಾಸ್, ಮತ್ರಂಡ ಜಾಕಿ, ಮಾಚಿಮಾಡ ರವೀಂದ್ರ, ಅಜ್ಜಿಕುಟ್ಟಿರ ಶುಭ ಅಜ್ಜಿಕುಟ್ಟಿರ ನಿಲನ್, ಮಲಚೀರ ಉತ್ತಪ್ಪ ತೋರೇರ ವಿನು ಮತ್ತಿತರರು ಹಾಜರಿದ್ದರು.

ಕುಶಾಲನಗರದಲ್ಲೂ ಕೈಲ್ ಮುಹೂರ್ತ ಸಂಭ್ರಮ



ಕುಶಾಲನಗರ, ಸೆ.3– ಜಿಲ್ಲೆಯ ಪ್ರಮುಖ ಹಬ್ಬಗಳಲ್ಲಿ ಒಂದಾದ ಕೈಲ್ ಮುಹೂರ್ತವನ್ನು ಶನಿವಾರ ತಾಲೂಕಿನ ವಿವಿಧೆಡೆ ಸಂಭ್ರಮ, ಸಡಗರದಿಂದ ಆಚರಿಸಲಾಯಿತು.

ಪ್ರಕೃತಿ ಸೌಂದರ್ಯದ ಬೀಡಾದ ಕೊಡಗು ಜಿಲ್ಲೆಯಲ್ಲಿ ಭತ್ತದ ನಾಟಿ ಕಾರ್ಯ ಪೂರ್ಣಗೊಂಡ ನಂತರ ಆಚರಿಸುವ ಈ ವಿಶಿಷ್ಟ ಹಬ್ಬದಲ್ಲಿ ರೈತರು ತಾವು ಬಳಸುವ ಕೋವಿ, ಕತ್ತಿ, ನೇಗಿಲು, ನೊಗ ಸೇರಿದಂತೆ ನಿತ್ಯ ಬಳಕೆಯ ಆಯುಧಗಳನ್ನು ತಮ್ಮ ಮನೆಗಳಲ್ಲಿ ಒಪ್ಪವಾಗಿ ಜೋಡಿಸಿ ಸಾಂಪ್ರದಾಯಿಕ ಉಡುಗೆ ಧರಿಸಿ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿದರು. ಹಬ್ಬದ ಅಂಗವಾಗಿ ತಂಬಿಟ್ಟು, ಕಡುಂಬಿಟ್ಟು, ರೊಟ್ಟಿ, ಹೋಳಿಗೆ, ಕೇಸರಿಬಾತ್, ಮಾಂಸದ ಅಡುಗೆ ಮಾಡಿ ಉಣಬಡಿಸಿದರು. ಪೂಜೆಯ ನಂತರ ಹಬ್ಬದ ಸಾಂಪ್ರದಾಯಿಕ ಭಕ್ಷ್ಯಗಳಾದ ಕಡುಬಿಟ್ಟು, ಶ್ಯಾವಿಗೆ ಹಾಗೂ ಪಂದಿಕರಿಯನ್ನು ಇಂತಹ ವಿಶಿಷ್ಟ ಭೋಜನವನ್ನು ಮನೆಮಂದಿ ಹಾಗೂ ಬಂಧುಗಳು ಒಟ್ಟಿಗೆ ಸೇರಿ ಸವಿದರು. ಹಳ್ಳಿಗಳಲ್ಲಿ ತಮ್ಮ ಕೃಷಿ ಕಾರ್ಯಕ್ಕೆ ಬಳಸುವ ಎತ್ತುಗಳಿಗೆ ಸ್ನಾನ ಮಾಡಿಸಿ ಪೂಜೆ ಸಲ್ಲಿಸಲಾಯಿತು.

ಕುಶಾಲನಗರ ಸೇರಿದಂತೆ ಕೂಡಿಗೆ, ಗುಡ್ಡೆಹೊಸೂರು, ಕೊಡಗರಹಳ್ಳಿ, ಸುಂಟಿಕೊಪ್ಪ, ನಂಜರಾಯಪಟ್ಟಣ, ಹುದುಗೂರು, ವಾಲ್ನೂರು, 7ನೇ ಹೊಸಕೋಟೆ, ರಂಗಸಮುದ್ರ, ಹಾರಂಗಿ, ಚಿಕ್ಕತ್ತೂರು, ಮೊದಲಾದೆಡೆ ಬಹುತೇಕ ಮಂದಿ ತಮ್ಮ ತಮ್ಮ ಐನ್ ಮನೆಗಳಲ್ಲಿ ಆಯುಧಗಳನ್ನು ಇಟ್ಟು ಪೂಜೆ ಸಲ್ಲಿಸುವ ಮೂಲಕ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿದರು.

ಆಧುನಿಕತೆಯಿಂದ ತಮ್ಮ ಮೂಲ ಸಂಸ್ಕೃತಿಗೆ ಧಕ್ಕೆ ಯಾಗುತ್ತಿದ್ದು, ಪ್ರತಿಯೊಬ್ಬರು ತಮ್ಮ ಸಂಸ್ಕೃತಿ, ಪರಂಪರೆ ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು ಎಂದು ಗೌಡ ಸಮಾಜದ ಅಧ್ಯಕ್ಷ ಕೂರನ ಪ್ರಕಾಶ್ ಹೇಳಿದರು.



ಶ್ರೀ ಗೌರಿ–ಗಣೇಶೋತ್ಸವದ ಅಂಗವಾಗಿ ವಿರಾಜಪೇಟೆ ಪಟ್ಟಣದಲ್ಲಿ ಸುಮಾರು 28 ಸಮಿತಿಗಳಿಂದ ಗೌರಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ನಗರದ 22 ಸಮಿತಿಗಳು 10 ದಿನಗಳ ಕಾಲ ಬೆಳಿಗ್ಗೆ ಮತ್ತು ರಾತ್ರಿ ಗೌರಿ ಗಣೇಶನಿಗೆ ಪೂಜೆ ಸಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಕೊಡಗು ಡಿಸಿ ಕಚೇರಿ ತಡೆಗೋಡೆ ಕಾಮಗಾರಿ ಕಳಪೆ

ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಲೋಕಾಯುಕ್ತರಿಂದ ನೋಟಿಸ್

ಸೆ.20 ರಂದು ವಿಚಾರಣೆಗೆ ಹಾಜರಾಗಲು ಸೂಚನೆ



ಮಡಿಕೇರಿ,ಸೆ.3– ಕೊಡಗು ಜಿಲ್ಲಾಧಿಕಾರಿಗಳ ಕಚೇರಿಯ ತಡೆಗೋಡೆ ಕಾಮಗಾರಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆ ಮಡಿಕೇರಿ ಲೋಕೋಪಯೋಗಿ ಇಲಾಖೆಯ ಉಪ ವಿಭಾಗದ ಅಧಿಕಾರಿಗಳಿಗೆ ಕರ್ನಾಟಕ ಲೋಕಾಯುಕ್ತ ವಿಚಾರಣೆಯನ್ನು ಕೈಗೆತ್ತಿಕೊಳ್ಳುವ ಮೂಲಕ ಬಿಸಿ ಮುಟ್ಟಿಸಿದೆ.

ತಡೆಗೋಡೆ ಕಾಮಗಾರಿ ನಿರ್ವಹಣೆ ಹೊಣೆ ಹೊತ್ತಿರುವ ಕಿರಿಯ ಇಂಜಿನಿಯರ್ ಕೆ.ಎಲ್. ದೇವರಾಜು, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶಿವರಾಂ ಹಾಗೂ ಅಂದಿನ ಕಾರ್ಯಪಾಲಕ ಇಂಜಿನಿಯರ್ ಮದನ್ ಮೋಹನ್ ಅವರುಗಳ ಮೇಲೆ ಭ್ರಷ್ಟಾಚಾರ ಮತ್ತು ಕರ್ತವ್ಯ ಲೋಪದ ಆರೋಪದಡಿ ಪ್ರಕರಣ ದಾಖಲಾಗಿದ್ದು, ಸೆ.20 ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ.

ಸುಮಾರು 7.5 ಕೋಟಿ ರೂ ವೆಚ್ಚದ ಕಾಮಗಾರಿಯಲ್ಲಿ ಬಹುದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ. ಗುತ್ತಿಗೆದಾರರು ಮತ್ತು ಇಂಜಿನಿಯರ್‌ಗಳು ಸೇರಿ ಕಳಪೆ ಕಾಮಗಾರಿ ನಡೆಸಿ ಭಾರೀ ಭ್ರಷ್ಟಾಚಾರವೆಸಗಿದ್ದಾರೆ ಎಂದು ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಕೊಡಗು ಜಿಲ್ಲಾಧ್ಯಕ್ಷ ತೆನ್ನಿರಾ ಮೈನಾ ಅವರು, ಕರ್ನಾಟಕ ಲೋಕಾಯುಕ್ತಕ್ಕೆ ದೂರು ನೀಡಿದರು.

ಕಾಮಗಾರಿ ಕಳಪೆಯಾಗಿರುವುದರಿಂದ ತಡೆಗೋಡೆ ಪೂರ್ಣಗೊಳ್ಳುವ ಮುನ್ನವೇ ಕುಸಿಯುವ ಹಂತ ತಲುಪಿದ್ದು, ಇದರ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ಕ್ರಮ ಜರುಗಿಸುವಂತೆ ಅವರು ಒತ್ತಾಯಿಸಿದ್ದಾರಲ್ಲದೆ, ಈ ಸಂಬಂಧ ಪೂರಕ ದಾಖಲೆಗಳನ್ನು ಸಹ ಸಲ್ಲಿಸಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಲೋಕಾಯುಕ್ತರು ದೂರು ಮತ್ತು ದಾಖಲೆಗಳ ಪರಿಶೀಲಿಸಿ, ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯದಿಂದ ಸೆ.20ರಂದು ವಿಚಾರಣೆಗೆ ಹಾಜರಾಗಲು ನೋಟಿಸ್ ಜಾರಿ ಮಾಡಲಾಗಿದೆ. ಈ ಪ್ರಕರಣ ಗಂಭೀರ ಸ್ವರೂಪ ಪಡೆದಿದ್ದು, ಭ್ರಷ್ಟಾಚಾರ ನಡೆಸಿ, ಕರ್ತವ್ಯ ಲೋಪವೆಸಗಿರುವ ಅಧಿಕಾರಿಗಳ ತಲೆ ದಂಡವಾಗುವ ಸಾಧ್ಯತೆಯಿದೆ.

ಸಚಿವ ಕೆ.ಗೋಪಾಲಯ್ಯ, ಸಂಸದೆ ಸುಮಲತಾ ಬೆಂಗಳೂರು–ಮೈಸೂರು ಹೆದ್ದಾರಿ ಪರಿಶೀಲನೆ



ಮಂಡ್ಯ, ಸೆ3– ಕಳೆದ 15 ದಿನಗಳಿಂದ ಮಂಡ್ಯ, ರಾಮನಗರ, ಚನ್ನಪಟ್ಟಣ ಸೇರಿದಂತೆ ವಿವಿಧೆಡೆ ಸುರಿದ ಧಾರಾಕಾರ ಮಳೆಯಿಂದ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಜಲಾವೃತಗೊಂಡಿದ್ದು, ಸಾಕಷ್ಟು ಹಾನಿ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ಶನಿವಾರ ಅಧಿಕಾರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಸಂಸದೆ ಸುಮಲತಾ ಅಂಬರೀಶ್ ಅವರು ಹಾನಿಗೊಳಗಾದ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ಪರಿಶೀಲನೆಯುದ್ದಕ್ಕೂ ಸಾರ್ವಜನಿಕರು ಹೈವೇಯ ಅವ್ಯವಸ್ಥೆ ವಿರುದ್ಧ ಹಿಡಿಶಾಪ ಹಾಕಿದರು.

ಬೆಳಿಗ್ಗೆ 11 ಗಂಟೆಯಿಂದ ಮಂಡ್ಯ– ರಾಮನಗರ ಜಿಲ್ಲೆಯ ಗಡಿ ಪ್ರದೇಶವಾದ ಮದ್ದೂರು ತಾಲೂಕಿನ ನಿಡಘಟ್ಟದಿಂದ ಆರಂಭವಾದ ಹೆದ್ದಾರಿಯ ಪರಿಶೀಲನೆ ಕಾರ್ಯ ಮಂಡ್ಯ–ಮೈಸೂರು ಗಡಿಯ ಶ್ರೀರಂಗಪಟ್ಟಣದ ನಗುವನಹಳ್ಳಿ ಗ್ರಾಮದವರೆಗೆ ನಡೆಯಿತು. ಬಸ್‌ನಲ್ಲಿ ಸಚಿವರು, ಸಂಸದರು, ವಿಧಾನಪರಿಷತ್ ಸದಸ್ಯರು ಹಾಗೂ ಅಧಿಕಾರಿಗಳು ಸಂಚರಿಸಿ, ಎಲ್ಲೆಲ್ಲಿ ಸಮಸ್ಯೆಯುಂಟಾಗಿದೆ. ಅಲ್ಲೆಲ್ಲಾ ಬಸ್ ನಿಲ್ಲಿಸಿ ಜನರ ಸಮಸ್ಯೆ ಆಲಿಸಿದರು.

ಮದ್ದೂರು ತಾಲೂಕಿನ ನಿಡಘಟ್ಟ ಗ್ರಾಮಸ್ಥರು ಸಚಿವರೊಂದಿಗೆ ಮಾತನಾಡಿ, ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಅವೈಜ್ಞಾನಿಕವಾಗಿದೆ. ಇಲ್ಲಿ ಚರಂಡಿ ವ್ಯವಸ್ಥೆ ಕಲ್ಪಿಸಿಲ್ಲ. ಹಾಗಾಗಿ, ಹಳ್ಳದಿಂದ ನೀರು ಹರಿದು ಬರುತ್ತಿದ್ದು, ಮನೆ, ಜಮೀನುಗಳಿಗೆ ನುಗ್ಗಿ ಅಪಾರ ಪ್ರಮಾಣದ ನಷ್ಟ ಉಂಟಾಗುತ್ತಿದೆ. ಕೂಡಲೇ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಸ್ಥಳದಲ್ಲಿದ್ದ ರಾಷ್ಟ್ರೀಯ ಹೆದ್ದಾರಿಯ ಯೋಜನಾ ನಿರ್ದೇಶಕ ಶ್ರೀಧರ್ ಅವರನ್ನು ತರಾಟೆ ತೆಗೆದುಕೊಂಡ ಗ್ರಾಮಸ್ಥರು, ಅಧಿಕಾರಿಗಳು ಕೇವಲ ಹೋಟೆಲ್ ಮಾಲೀಕರು ಹಾಗೂ ಉದ್ಯಮಿಗಳ ಪರ ಇದ್ದಾರೆ. ಹೋಟೆಲ್ ಇರುವ ಕಡೆ ಅಂಡರ್‌ಪಾಸ್, ಡಿವೈಡರ್ ಕೊಟ್ಟಿದ್ದು, ಹಳ್ಳಿಗಳು ಇರುವ ಕಡೆ ಯಾವುದೇ ಸೌಲಭ್ಯ ನೀಡುತ್ತಿಲ್ಲ ಎಂದು ದೂರಿದರು. ನಿಡಘಟ್ಟದಿಂದ ಮದ್ದೂರು ಪಟ್ಟಣದ ರಾಷ್ಟ್ರೀಯ ಹೆದ್ದಾರಿಯ ಅಂಡರ್ ಪಾಸ್ ಬಳಿ ಟ್ರಾಫಿಕ್ ಸಮಸ್ಯೆ, ಗೆಜ್ಜಲಗೆರೆ ಬಳಿ ಮಳೆಯಿಂದ ಹೆದ್ದಾರಿಗೆ ತುಂಬಿಕೊಂಡ ನೀರು ಜಮೀನಿಗೆ ನುಗ್ಗಿ ಬೆಳೆ ನಾಶವಾಗಿರುವುದು. ಮಂಡ್ಯದ ಬೂದನೂರು ಬಳಿ ಹೆದ್ದಾರಿ ಮುಳುಗಡೆಯಾಗಿ ಜಮೀನಿಗೆ ನೀರು ನುಗ್ಗಿರುವುದು. ಮಂಡ್ಯದ ಇಂಡುವಾಳು ಬಳಿ ರಾಷ್ಟ್ರೀಯ ಹೆದ್ದಾರಿ ಕುಸಿದು ಸಂಚಾರಕ್ಕೆ ಅಡ್ಡಿಯಾಗಿದ್ದು, ಮದ್ದೂರಿನಿಂದ ಶ್ರೀರಂಗಪಟ್ಟಣದವರೆಗೆ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಯಿಂದ ಆಗಿರುವ ಅವಾಂತರದ ಬಗ್ಗೆ ಸ್ಥಳೀಯರು ಸಚಿವ ಕೆ.ಗೋಪಾಲಯ್ಯ ಅವರಿಗೆ ತಿಳಿಸಿದರು.

ಇದೇ ವೇಳೆ ಶಾಸಕರಾದ ಎಂ.ಶ್ರೀನಿವಾಸ್, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಎಸ್‌ಪಿ ಎನ್.ಯತೀಶ್, ಎಎಸ್‌ಪಿ ವೇಣುಗೋಪಾಲ್, ಉಪ ವಿಭಾಗಾಧಿಕಾರಿಗಳಾದ ಆರ್.ಐಶ್ವರ್ಯ, ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ನರಸಿಂಹಮೂರ್ತಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಹೆದ್ದಾರಿ ನ್ಯೂನತೆ ಸರಿಪಡಿಸಲು ಕ್ರಮ


ಮಂಡ್ಯ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಒಳ್ಳೆಯ ಉದ್ದೇಶ ಹೊಂದಿರುವ ಉಪಯುಕ್ತ ಯೋಜನೆಯಾಗಿದ್ದು, ಇರುವ ಸಣ್ಣ ಪುಟ್ಟ ನ್ಯೂನತೆಗಳನ್ನು ಸರಿಪಡಿಸಲಾಗುವುದು ಎಂದು ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಹೆದ್ದಾರಿ ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆದ್ದಾರಿ ಕಾಮಗಾರಿಯಲ್ಲಿ ಯಾವುದೇ ತೊಂದರೆ ಇಲ್ಲ. ಸರ್ವಿಸ್ ರಸ್ತೆಯಲ್ಲಿ ತೊಂದರೆ ಇದ್ದು, ಪರ್ಯಾಯ ವ್ಯವಸ್ಥೆ ಹಾಗೂ ಸರಿಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೈಸೂರಿನಿಂದ ಬೆಂಗಳೂರಿಗೆ 118 ಕಿ.ಮೀ ರಸ್ತೆ ಕಾಮಗಾರಿ ನಡೆಸಲಾಗುತ್ತಿದೆ. ಬೆಂಗಳೂರು ನೈಸ್ ರಸ್ತೆಯಿಂದ ನಿಡಘಟ್ಟದವರೆಗೆ ಹಾಗೂ ನಿಡಘಟ್ಟದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಯವರೆಗೆ ಎರಡು ಹಂತದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಗ್ರಾಮಸ್ಥರು ಕೆಲವು ತೊಂದರೆಗಳ ಬಗ್ಗೆ ಪರಿಶೀಲನೆಯ ಸಂದರ್ಭದಲ್ಲಿ ತಿಳಿಸಿದ್ದಾರೆ. 4ರಿಂದ 5 ಕಡೆ ಜನರು ಓಡಾಡಲು ಅಂಡರ್‌ಪಾಸ್ ರಸ್ತೆ ಅವಶ್ಯಕತೆ ಕಂಡು ಬಂದಿದೆ. ಈ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳಲು ತಿಳಿಸಲಾಗಿದೆ. ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ನಿಡಘಟ್ಟ ಹಾಗೂ ಮದ್ದೂರು ಬಸ್ ಸ್ಟ್ಯಾಂಡ್ ರಸ್ತೆಯ ಕೆಲವು ನ್ಯೂನತೆ. ಸರ್ವಿಸ್ ರಸ್ತೆಯಲ್ಲಿ ಚರಂಡಿ ವ್ಯವಸ್ಥೆಯ ಬಗ್ಗೆ ಕಾಮಗಾರಿ ಪ್ರಾರಂಭಿಸಿ ಬೇಗ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಮದ್ದೂರು ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ: ಮಧು ಮಾದೇಗೌಡ



ಭಾರತೀನಗರ, ಸೆ.3– ಮದ್ದೂರು ಕ್ಷೇತ್ರದ ಅಭಿವೃದ್ಧಿಗೆ ದುಡಿಯುತ್ತೇನೆ. ಹಾಗಾಗಿ ಕಾರ್ಯಕರ್ತರು ನನ್ನೊಂದಿಗೆ ಕೈಜೋಡಿಸಿ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮನವಿ ಮಾಡಿದರು.

ಸಮೀಪದ ಕೆ.ಎಂ.ದೊಡ್ಡಿಯ ಮಾರುತಿ ಪಾರ್ಟಿಹಾಲ್‌ನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನನ್ನ ಅಧಿಕಾರದ 72 ತಿಂಗಳ ಅವಧಿಯಲ್ಲಿ 2 ತಿಂಗಳು ಈಗಾಗಲೇ ಕಳೆದುಹೋಗಿದೆ. ಇನ್ನಿರುವ 70ತಿಂಗಳಲ್ಲಿ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇನೆ. ಬೂತ್ ಮಟ್ಟದಲ್ಲಿ 15 ರಿಂದ 20 ಕಾರ್ಯಕರ್ತರನ್ನು ಆಯ್ಕೆಗೊಳಿಸಲಾಗುವುದು. ಆಯ್ಕೆಗೊಂಡ ಕಾರ್ಯಕರ್ತರು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕೋರಿದರು.

ಕೆಪಿಸಿಸಿ ಸದಸ್ಯ ಎಸ್.ಗುರುಚರಣ್ ಮಾತನಾಡಿ, ನನ್ನ ಹಾಗೂ ಮಧು ಮಾದೇಗೌಡರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮುಂಬರುವ ವಿಧಾನಸಭೆ ಚುನಾವಣೆಗೆ ನಾನು ಸ್ಪರ್ಧಿಸುತ್ತಿದ್ದೇನೆ. ನಿಮ್ಮೆಲ್ಲರ ಸಹಕಾರ ಅತ್ಯವಶ್ಯಕ ಎಂದರು.

ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಮಾತನಾಡಿ, ಜಿಲ್ಲೆಯಲ್ಲಿ 7 ಕ್ಷೇತ್ರದಲ್ಲೂ ಕಾಂಗ್ರೆಸ್ ಜಯಭೇರಿ ಬಾರಿಸುವ ಸಾಧ್ಯತೆ ಇದೆ. ಕಾಂಗ್ರೆಸ್ ಅಧಿಕಾರಕ್ಕೆ ತರಲು ಪಕ್ಷವನ್ನು ಸಂಘಟಿಸಲಾಗುತ್ತಿದೆ. ಎಂಎಲ್‌ಸಿ ಮಧು ಮಾದೇಗೌಡ, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಶಾಸಕ ಬಿ.ರಾಮಕೃಷ್ಣ ಅವರ ನೇತೃತ್ವದಲ್ಲಿ ಗುರುಚರಣ್ ಅವರ ಗೆಲುವಿಗೆ ಕಂಕಣಬದ್ಧರಾಗಬೇಕು ಎಂದು ಕೋರಿದರು. ಈ ವೇಳೆ ಹಲವು ಕಾರ್ಯಕರ್ತರು ಪಕ್ಷ ಸಂಘಟನೆ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಟ್ಟನಹಳ್ಳಿ ಶಿವಲಿಂಗೇಗೌಡ, ಮುಖಂಡರಾದ ಚಂದೂಪುರ ಪಾಪಣ್ಣ, ಆರ್.ಸಿದ್ದಪ್ಪ, ಸಂದರ್ಶ ಇದ್ದರು.

ಪುನೀತ್ ಸ್ಮರಣಾರ್ಥ ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆ

ಮಂಡ್ಯ, ಸೆ.3– ಪಾಂಚಜನ್ಯ ಸೇವಾ ಟ್ರಸ್ಟ್‌ನಿಂದ ಪವರ್ ಸ್ಟಾರ್ ಪುನೀತ್‌ರಾಜ್ ಕುಮಾರ್ ಸ್ಮರಣಾರ್ಥ ಸೆ.18ರಂದು ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆಯನ್ನು ನಗರದಲ್ಲಿ ಆಯೋಜಿಸಿದ್ದು, ಆಸಕ್ತ ಎಲ್ಲಾ ವಯೋಮಿತಿಯ ಗಾಯಕರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಬೃಹತ್ ವೇದಿಕೆಯಲ್ಲಿ ನಾಡಿನ ಸುಪ್ರಸಿದ್ಧ ಗಾಯಕರು ಹಾಗೂ ತೀರ್ಪುಗಾರರ ಮುಂದೆ ಗಾಯನವನ್ನು ಪ್ರಚುರಪಡಿಸಲು ಅವಕಾಶವಿದ್ದು, ಕನ್ನಡ ಚಲನಚಿತ್ರಗಳ ಯಾವುದೇ ಗೀತೆ ಆಡಲು ಅವಕಾಶವಿದೆ. ಪ್ರಥಮ, ದ್ವಿತೀಯ, ತೃತೀಯ ಬಹುಮಾನವಾಗಿ ಆಕರ್ಷಕ ಟ್ರೋಫಿ ಮತ್ತು ಸರ್ಟಿಫಿಕೇಟ್ ನೀಡಲಾಗುವುದು. ಇನ್ನುಳಿದ ಗಾಯಕರಿಗೆ ಸಮಾಧಾನಕರ ಬಹುಮಾನವಾಗಿ ಟ್ರೋಫಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಆಸಕ್ತ ಗಾಯಕ ಸ್ಪರ್ಧಿಗಳು ಸ್ವವಿವರವನ್ನು ಹಾಗೂ ಒಂದು ನಿಮಿಷದೊಳಗಿನ ಗಾಯನದ ವೀಡಿಯೋ ತುಣುಕು ಅನ್ನು ಮೊ: 9606187312 ನಂಬರ್‌ಗೆ ವಾಟ್ಸ್‌ಆಪ್ ಮೂಲಕ ಸೆ.8 ರೊಳಗೆ ಕಳುಹಿಸಿ ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಮೊ.9606187312 ಸಂಪರ್ಕಿಸಬಹುದಾಗಿದೆ.



ಕೆ.ಆರ್.ಪೇಟೆ ತಾಲೂಕಿನ ಹೊಸಹೊಳಲು ಗ್ರಾಮದ ಪುರಾಣ ಪ್ರಸಿದ್ಧ ಶ್ರೀಕೋಟೆ ಭೈರವೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ ಅನುಕೂಲವಾಗುವಂತೆ ತಾಲೂಕಿನ ಬೂಕನಕೆರೆಯ ಮಿತ್ರ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರಾದ ಬೂಕನಕೆರೆ ವಿಜಯ್ ರಾಮೇಗೌಡ ಅವರು ವೈಯುಕ್ತಿಕವಾಗಿ 50,000 ರೂ.ಗಳನ್ನು ದೇಣಿಗೆಯಾಗಿ ನೀಡಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್, ತಾಲೂಕು ಭೂ ನ್ಯಾಯ ಮಂಡಳಿ ಮಾಜಿ ಸದಸ್ಯ ಎ.ಬಿ.ಕುಮಾರ್, ಶ್ರೀಕೋಟೆ ಭೈರವೇಶ್ವರ ದೇವಾಲಯ ಸಮಿತಿ ಸದಸ್ಯ ಚಿಕ್ಕೇಗೌಡ, ಯೋಗೇಶ್, ಕಾರ್ಯದರ್ಶಿ ಯೋಗೇಶ್, ವಸಂತ್ ಇದ್ದರು.

ಸೈಕಲ್ ವ್ಹೀಲಿಂಗ್ ವಿಚಾರದಲ್ಲಿ ಚಾ.ನಗರದಲ್ಲಿ ಗುಂಪು ಘರ್ಷಣೆ: ಲಘು ಲಾಠಿ ಪ್ರಹಾರ

ಪೊಲೀಸರ ಕಟ್ಟೆಚ್ಚರ; ಆಯಕಟ್ಟಿನ ಪ್ರದೇಶದಲ್ಲಿ ಗಸ್ತು

ಚಾಮರಾಜನಗರ, ಸೆ3– ಸೈಕಲ್ ವ್ಹೀಲಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಶನಿವಾರ ರಾತ್ರಿ ಘರ್ಷಣೆ ನಡೆದಿದ್ದು, ಪೊಲೀಸರ ಸಮಯೋಚಿತ ಕ್ರಮದಿಂದಾಗಿ ಹೆಚ್ಚಿನ ಅನಾಹುತ ತಪ್ಪಿದೆ.

ಚಾಮರಾಜನಗರದ ಸಂತೇಮರಳ್ಳಿ ವೃತ್ತದ ಬಳಿ ಒಂದು ಗುಂಪಿಗೆ ಸೇರಿದ ಯುವಕ ಸೈಕಲ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದಾಗ ಸೈಕಲ್ ಮತ್ತೊಂದು ಗುಂಪಿನ ಯುವಕನಿಗೆ ತಾಗಿತು ಎನ್ನಲಾಗಿದೆ ಈ ವೇಳೆ ಇವರಿಬ್ಬರ ನಡುವೆ ಮಾತಿನ ಚಕಮಕಿ ನಡೆದು ಒಂದು ಗುಂಪಿನ ಯುವಕ ವ್ಹೀಲಿಂಗ್ ಮಾಡುತ್ತಿದ್ದ ಯುವಕನಿಗೆ ಹೊಡೆದಿದ್ದಾನೆ. ಏಟು ತಿಂದ ಯುವಕ ತನ್ನ ಗುಂಪಿನವರನ್ನು ಕರೆತಂದಿದ್ದು, ಎರಡೂ ಗುಂಪುಗಳು ಜಮಾಯಿಸಿ ಘರ್ಷಣೆ ಆರಂಭವಾಗಿದೆ. ಈ ವೇಳೆ ಕಿಡಿಗೇಡಿಗಳು ಕಲ್ಲು ತೂರಾಟ ಸಹ ನಡೆಸಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಲಘು ಲಾಠಿ ಚಾರ್ಜ್ ನಡೆಸಿ, ಎರಡು ಗುಂಪುಗಳನ್ನೂ ಚದುರಿಸಿದರು. ಪೊಲೀಸರ ಮಧ್ಯ ಪ್ರವೇಶದಿಂದ ದೊಡ್ಡ ಗಲಾಟೆ ತಪ್ಪಿದಂತಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ನಗರದ ಆಯಕಟ್ಟಿನ ಪ್ರದೇಶಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಅಲ್ಲದೇ ಹಿರಿಯ ಅಧಿಕಾರಿಗಳೇ ನಗರದಾದ್ಯಂತ ಗಸ್ತು ತಿರುಗುತ್ತಿದ್ದಾರೆ.



15 ವರ್ಷದ ಯುವಕನೊರ್ವ ಸೈಕಲ್‌ನಲ್ಲಿ ವ್ಹೀಲಿಂಗ್ ಮಾಡುತ್ತಿರುವಾಗ ಸೈಕಲ್ ಮತ್ತೊಂದು ಸಮುದಾಯದ ಯುವಕನಿಗೆ ತಾಗಿದ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿದೆ. ಎರಡು ಗುಂಪುಗಳ ಯುವಕರನ್ನು ಅವರವರ ಸಮುದಾಯದ ಮುಖಂಡರು ಕರೆದೊಯ್ದು ಶಾಂತಿ ಕಾಪಾಡುವಂತೆ ಮನವಿ ಮಾಡಲಾಗಿದೆ. ಸ್ಥಳದಲ್ಲಿ ಹಾಗೂ ನಗರದ ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಈಗ ಪರಿಸ್ಥಿತಿ ಶಾಂತವಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗುವುದು. ಯಾರೊಬ್ಬರೂ ವದಂತಿಗಳಿಗೆ ಕಿವಿಗೊಡದೆ ಶಾಂತಿ ಕಾಪಾಡಬೇಕು.

– ಟಿ.ಪಿ. ಶಿವಕುಮಾರ್, ಜಿಲ್ಲಾ ಎಸ್ಪಿ

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕೊರೊನಾ : ವೃದ್ಧ ಬಲಿ

ಚಾಮುರಾಜನಗರ, ಸೆ.3– ಜಿಲ್ಲೆಯಲ್ಲಿ ಶನಿವಾರ ಕೊರೊನಾಗೆ ವೃದ್ಧರೊಬ್ಬರು ಬಲಿಯಾಗಿದ್ದು, 24 ಮಂದಿಗೆ ಸೋಂಕು ತಗುಲಿದೆ.

ನಗರದ 83 ವರ್ಷದ ವೃದ್ಧ ಅನಾರೋಗ್ಯದಿಂದ ಸೆ.1ರಂದು ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ತಪಾಸಣೆ ವೇಳೆ ಅವರಿಗೆ ಕೋವಿಡ್ ಸೋಂಕು ದೃಢಪಟ್ಟಿತ್ತು. ಶನಿವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ ಕೊರೊನಾ ಹೆಚ್ಚಳವಾಗುತ್ತಿದ್ದು, ಶನಿವಾರ 24 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಚಾಮರಾಜನಗರದಲ್ಲಿ 6 ಮಂದಿಗೆ, ಕೊಳ್ಳೇಗಾಲ 1, ಹನೂರು 3, ಯಳಂದೂರು 2, ಗುಂಡ್ಲುಪೇಟೆ 12 ಮಂದಿಗೆ ಕೋವಿಡ್ ತಗುಲಿದೆ. ಒಟ್ಟು 79 ಸಕ್ರಿಯ ಪ್ರಕರಣಗಳಿವೆ.

ಮಳೆಯಿಂದ ಹಾನಿಗೀಡಾದ ಶಾಲಾ ಕಟ್ಟಡ ಶೀಘ್ರ ದುರಸ್ತಿ

ಕೊಳ್ಳೇಗಾಲ ಬಿಇಓ ಕಚೇರಿಯಲ್ಲಿ ಮಹನೀಯರ ಪುತ್ಥಳಿ ಸ್ಥಾಪನೆಗೆ ಶಿಕ್ಷಣ ಸಚಿವ ನಾಗೇಶ್ ಮೆಚ್ಚುಗೆ



ಕೊಳ್ಳೇಗಾಲ, ಸೆ.3–ಮಳೆಯಿಂದ ಹಾನಿಗೀಡಾರುವ ಶಾಲಾ ಕಟ್ಟಡಗಳ ದುರಸ್ತಿಗೆ ಶೀಘ್ರ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಸಿಇಓಗೆ ಸೂಚಿಸಲಾಗಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಬಿಇಓ ಕಚೇರಿಗೆ ಭೇಟಿ ನೀಡಿ ಕಚೇರಿಯ ಆವರಣದಲ್ಲಿ ಕಳೆದ 2 ತಿಂಗಳ ಹಿಂದೆ ಸಂಘ ಸಂಸ್ಥೆಗಳು ಹಾಗೂ ಅನೇಕ ಶಿಕ್ಷಕರಿಂದ ವಂತಿಕೆ ಸಂಗ್ರಹಿಸಿ ನಿರ್ಮಿಸಿದ್ದ ಬುದ್ಧ, ಬಸವ, ಅಂಬೇಡ್ಕರ್, ಸಾವಿತ್ರಿ ಬಾಪುಲೆ, ಜ್ಯೋತಿ ಬಾಪುಲೆ ಪ್ರತಿಮೆಗಳನ್ನು ವೀಕ್ಷಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

8 ವರ್ಷಗಳಲ್ಲಿ ಶಾಲೆಗಳ ಅಭಿವೃದ್ಧಿ ಕುರಿತು ಹೆಚ್ಚಿನ ಗಮನ ನೀಡದ ಪರಿಣಾಮ ಕಟ್ಟಡಗಳು ಶಿಥಿಲಾವಸ್ಥೆ ತಲುಪಿವೆ. ಇದನ್ನು ಮನಗಂಡು ಒಟ್ಟಾರೇ ರಾಜ್ಯದ ಶಾಲೆಗಳಲ್ಲಿ 8,100 ಕೊಠಡಿ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದ್ದು, ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. ಅದೇ ರೀತಿಯಲ್ಲಿ ಪ್ರತಿ ತಾಲೂಕಿನ ಶಾಲಾ ಕೊಠಡಿಗಳ ದುರಸ್ತಿಗಾಗಿ 30 ಲಕ್ಷ ರೂ. ಹೆಚ್ಚುವರಿ ಹಣ ಮಂಜೂರು ಮಾಡುವ ವಿಚಾರ ಸಹ ಈಗ ಸರ್ಕಾರದ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲೇ ಉತ್ತಮ ರೀತಿಯಲ್ಲಿ ಕೊಳ್ಳೇಗಾಲ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಆವರಣದಲ್ಲಿ ಭಗವಾನ್ ಬುದ್ಧ, ಬಸವೇಶ್ವರರು ಹಾಗೂ ಡಾ.ಬಿ.ಆರ್.ಅಂಬೇಡ್ಕರ್, ಸಾವಿತ್ರಿ ಬಾಯಿಪುಲೆ ಅವರ ಪುತ್ಥಳಿ ಸ್ಥಾಪನೆ ಮಾಡಿರುವುದು ಶ್ಲಾಘನೀಯ. ಶಿಕ್ಷಕರೇ ವಂತಿಕೆ ಹಾಕಿ ಪುತ್ಥಳಿ ನಿರ್ಮಾಣ ಮಾಡಿರುವುದು ರಾಜ್ಯಕ್ಕೆ ಮಾದರಿ ಎಂದ ಸಚಿವರು, ಇದೇ ಆವರಣದಲ್ಲಿ ವಿದ್ಯಾದಾತೆ ಸರಸ್ವತಿ ದೇವಿ ಪ್ರತಿಮೆಯನ್ನೂ ಸ್ಥಾಪಿಸಿ. ಆಗ ಇಂತಹ ಸುಂದರ ವಾತಾವರಣಕ್ಕೆ ಇನ್ನಷ್ಟು ಮೆರುಗು ದೊರೆಯಲಿದೆ ಎಂದು ಶಿಕ್ಷಣಾಧಿಕಾರಿ ಚಂದ್ರಪಾಟೀಲ್‌ಗೆ ಸಲಹೆ ನೀಡಿದರು. ಬಿಇಓ ಕಚೇರಿ ದುರಸ್ತಿ ಸಂಬಂಧ ಶೀಘ್ರವೇ ಪ್ರಸ್ತಾವನೆ ಸಲ್ಲಿಸಿ, ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಇದೇ ತಿಳಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ದತ್ತೇಶ್ ಕುಮಾರ್, ಚಾ.ನಗರ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಎನ್. ಮಂಜುನಾಥ್, ಚಾ.ನಗರ ಡಯಟ್ ಪ್ರಾಂಶುಪಾಲ ಹೆಚ್.ಕೆ.ಪಾಂಡು, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಪಾಟೀಲ್, ಶಿಕ್ಷಣ ಸಂಯೋಜಕರು ಚಾಮರಾಜು, ಚಿಕ್ಕರಾಜು, ಮುಖ್ಯಶಿಕ್ಷಕಿ ಮಂಜುಳಾ, ಶಿಕ್ಷಕ ಸಿದ್ದರಾಜು ಇನ್ನಿತರರಿದ್ದರು.

ಚಿತ್ರದುರ್ಗದ ಮುರುಘಾ ಮಠದ ಮುರುಘಾ ರಾಜೇಂದ್ರ ಶ್ರೀಗಳ ವಿರುದ್ಧದ ಪ್ರಕರಣದಲ್ಲಿ ಸರ್ಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡುತ್ತಿಲ್ಲ. ತನಿಖೆ ಹಂತದಲ್ಲಿ ಯಾವುದೇ ಲೋಪ ದೋಷಕ್ಕೂ ಅವಕಾಶವಿಲ್ಲ. ಈ ವಿಚಾರದಲ್ಲಿ ಆರೋಪಗಳು ಸರಿಯಲ್ಲ.

–ಬಿ.ಸಿ. ನಾಗೇಶ್, ಶಿಕ್ಷಣ ಸಚಿವ.

ಮಾಂಬಳ್ಳಿ ಗ್ರಾಪಂ ಆವರಣದಲ್ಲಿ ಶವ ಸಂಸ್ಕಾರ: ಗ್ರಾಮಸ್ಥರ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಸೆ.3–ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಅಂತ್ಯ ಸಂಸ್ಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮದ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಿಸಲಾಗಿದೆ.

ಪಿಡಿಓ ನೀಡಿರುವ ದೂರಿನ ಅನ್ವಯ ಗ್ರಾಮಸ್ಥರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ತಾಲೂಕು ಆಡಳಿತ ಹಾಗೂ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾಂಬಳ್ಳಿಯಲ್ಲಿ ಪರಿಶಿಷ್ಟರಿಗೆ ಸ್ಮಶಾನಕ್ಕೆ ಸ್ಥಳ ಇಲ್ಲದ ಹಿನ್ನೆಲೆಯಲ್ಲಿ ಸಾಕಷ್ಟು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಇಲಾಖೆಗೆ ಮನವಿ ಸಲ್ಲಿಸಿದ್ದರು. ಆದರೆ ಸ್ಮಶಾನ ಮಂಜೂರಾಗದೆ ಪರಿಶಿಷ್ಟ ಜನಾಂಗದವರು ತೊಂದರೆ ಅನುಭವಿಸುತ್ತಿದ್ದರು.

ಗುರುವಾರ ಮಹಿಳೆಯೊಬ್ಬರ ಅಂತ್ಯ ಸಂಸ್ಕಾರಕ್ಕೆ ಜಾಗವಿಲ್ಲದೆ ಆಕ್ರೋಶಗೊಂಡ ಗ್ರಾಮಸ್ಥರು, ಮಳೆ ನಡುವೆಯೇ ಪೊಲೀಸರು, ಅಧಿಕಾರಿಗಳು ತಡೆಯಲು ಯತ್ನಿಸಿದರೂ ಲೆಕ್ಕಿಸದೆ ಗ್ರಾಪಂ ಆವರಣದಲ್ಲೇ ಅಂತ್ಯಕ್ರಿಯೆ ನಡೆಸಿದ್ದರು. ಘಟನೆ ಸಂಬಂಧ ಶುಕ್ರವಾರ, ಶನಿವಾರ ಹಲವು ಸರಣಿ ಸಭೆಗಳು ನಡೆದಿವೆ. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಸಹ ಚಾಮರಾಜನಗರದಲ್ಲಿ ಜಿಲ್ಲಾಧಿಕಾರಿ, ಶಾಸಕರೊಂದಿಗೆ ಸಭೆ ನಡೆಸಿ ಹಲವು ಸಲಹೆ ಸೂಚನೆ ನೀಡಿದ್ದಾರೆ. ಅಧಿಕಾರಿಗಳ ಸಭೆಯಲ್ಲಿ ಮಾಹಿತಿ ನೀಡಿದ ಮಾಂಬಳ್ಳಿ ಪಿಡಿಓ ರಮೇಶ್, ಮುಂದಿನ ದಿನಗಳಲ್ಲಿ ಯಾವುದೇ ಅಚಾತುರ್ಯ ಸಂಭವಿಸದಂತೆ ಕ್ರಮ ವಹಿಸಲು ಪಟ್ಟಣ ಠಾಣೆಗೆ ಮಾಹಿತಿ ನೀಡಿರುವುದಾಗಿ ತಿಳಿಸಿದ್ದಾರೆ.

ಬೋರ್‌ವೇಲ್ ಕೇಬಲ್ ಕಳವು

ಬೇಗೂರು, ಸೆ.3– ಗುಂಡ್ಲುಪೇಟೆ ತಾಲೂಕಿನ ಮರಳಾಪುರ ಗ್ರಾಮದ ಜಮೀನಿನೊಂದರಲ್ಲಿ ಕೇಬಲ್ ಕಳವು ಮಾಡಿರುವ ಘಟನೆ ನಡೆದಿದೆ.

ಮರಳಾಪುರ ಗ್ರಾಮದ ಹೊರವಲಯದ ಮಹದೇವಪ್ಪ ಅವರ ಜಮೀನಿನಲ್ಲಿ 60 ಮೀ. ಕೇಬಲ್ ಹಾಗೂ ಸುತ್ತಮುತ್ತಲ ಮೂರರಿಂದ ನಾಲ್ಕು ಜಮೀನಿನ ಬೋರ್‌ವೆಲ್‌ಗಳ ಕೇಬಲ್‌ಗಳನ್ನು ಕಳವು ಮಾಡಿ ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿ ತಂತಿಗಳನ್ನು ಕದ್ದಿದ್ದಾರೆ. ಕಳೆದ 2–3 ತಿಂಗಳಿನಿಂದ ಇಂತಹ ಪ್ರಕರಣಗಳು ವರದಿಯಾಗುತ್ತಿವೆ. ಬೇಗೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮೈಸೂರು ಮಿತ್ರ ಭಾನುವಾರ 4 ಸೆಪ್ಟೆಂಬರ್ 2022



ಮೈಸೂರು ದಸರಾ ಮಹೋತ್ಸವ-2022

ದಸರಾ ಗಜಪಡೆ ಮಾವುತರು, ಕಾವಾಡಿಗಳ ಮಕ್ಕಳಿಗೆ ಬ್ಯಾಗ್, ನೋಟ್‌ಬುಕ್ ವಿತರಿಸಿದ ಟೆಕ್ಕಿ



ಮೈಸೂರು, ಸೆ.3(ಎಂಟಿವೈ)– ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿಯರ್‌ವೊಬ್ಬರು ಶಾಲಾ ಬ್ಯಾಗ್‌ನೊಂದಿಗೆ ಪಠ್ಯಸಾಮಗ್ರಿಗಳನ್ನು ವಿತರಿಸಿದರು.

ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಆನೆಗಳ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ತಾತ್ಕಾಲಿಕ ಶಾಲೆ ಆರಂಭಿಸಿ, ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಕಲಿಯುತ್ತಿರುವ 2–5ನೇ ತರಗತಿಯ 15 ಮಕ್ಕಳಿಗೆ ಬೆಂಗಳೂರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಹರಿಣಿ ಪುಟ್ಟಣ್ಣ ಎಂಬುವರು ಶಾಲಾ ಬ್ಯಾಗ್, 200 ಪುಟಗಳ ತಲಾ 5 ನೋಟ್ ಪುಸ್ತಕ, ಐದು ಪೆನ್ ಜೊತೆಗೆ ಹಣ್ಣು–ಹಂಪಲು ನೀಡಿ ಶುಭ ಕೋರಿದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಹರಿಣಿ ಪುಟ್ಟಣ್ಣ, ದಸರಾ ಆನೆಗಳ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಪ್ರತಿವರ್ಷ ಟೆಂಟ್ ಶಾಲೆ ತೆರೆಯುವ ವಿಷಯವನ್ನು ಪತ್ರಿಕೆಗಳ ಮೂಲಕ ಗಮನಿಸಿದ್ದೆ. ನಗರ ಪ್ರದೇಶದಲ್ಲಿರುವ ಮಕ್ಕಳಿಗೆ ವಿವಿಧ ಸೌಲಭ್ಯ ದೊರೆಯುತ್ತದೆ. ಆದರೆ ಹಾಡಿಯಲ್ಲಿರುವ ಮಕ್ಕಳಿಗೆ ಯಾವ ಸೌಲಭ್ಯವೂ ದೊರೆಯುವುದಿಲ್ಲ. ಹೀಗಾಗಿ ಗುಣಮಟ್ಟದ ಶಾಲಾ ಬ್ಯಾಗ್‌ನೊಂದಿಗೆ ಪಠ್ಯಪುಸ್ತಕ ನೀಡಿದ್ದೇನೆ ಎಂದರು. ಮೈಸೂರಿನ ಆಲನಹಳ್ಳಿಯ ಪೊಲೀಸ್ ಬಡಾವಣೆಯ ಐಪಿಎಸ್ ನಗರದ ನಿವಾಸಿ ಸಿಎಸ್‌ಬಿ(ವಿಶೇಷ ಪೊಲೀಸ್ ದಳ) ಎಎಸ್‌ಐ ಎಸ್.ಪುಟ್ಟಣ್ಣ, ಸುನೀತಾ ದಂಪತಿಯ ಪುತ್ರಿ ಹರಿಣಿ, ಪ್ರಸ್ತುತ ಬೆಂಗಳೂರಲ್ಲಿ ನೆಲೆಸಿದ್ದಾರೆ. ಮಕ್ಕಳಿಗೆ ಬ್ಯಾಗ್ ವಿತರಣೆ ಸಂದರ್ಭದಲ್ಲಿ ದಸರಾ ಆನೆಯ ಪಶುವೈದ್ಯರ ಸಹಾಯಕರಾಗಿರುವ ರಂಗರಾಜು, ಸಿಬ್ಬಂದಿ ಹಾಗೂ ಹರಿಣಿ ಸಹೋದರ ಗಗನ್ ಉಪಸ್ಥಿತರಿದ್ದರು.

ದಸರಾ ವೇಳೆ ನಗರಪಾಲಿಕೆ ವ್ಯಾಪ್ತಿ ತುತ್ತೂರಿ ಮಾರಾಟ, ಬಳಕೆ ನಿಷಿದ್ಧ

ಸಾರ್ವಜನಿಕರು, ಪ್ರವಾಸಿಗರಿಗೆ ಕಿರಿಕಿರಿ ತಪ್ಪಿಸಲು ಈ ಕ್ರಮ

ಮೈಸೂರು, ಸೆ.3(ಎಂಕೆ)– ಮೈಸೂರು ನಗರ ವ್ಯಾಪ್ತಿಯಲ್ಲಿ ವುವುಜೆಲಾ(ತುತ್ತೂರಿ) ಮಾರಾಟ ಹಾಗೂ ಬಳಸುವುದನ್ನು ನಿಷೇಧಿಸಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದಾರೆ.



2021ನೇ ಸಾಲಿನ ನಾಡಹಬ್ಬ ಮೈಸೂರು ದಸರಾ ಸಂದರ್ಭದಲ್ಲಿ ನಗರ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳು, ರಸ್ತೆಗಳು ಹಾಗೂ ಪ್ರವಾಸಿಗರು ಹೆಚ್ಚಾಗಿ ಕಂಡುಬರುವ ಸ್ಥಳಗಳಲ್ಲಿ ಪುಂಡರು ತುತ್ತೂರಿ ಊದಿ ಕಿರಿಕಿರಿ ಉಂಟುಮಾಡುವುದು ಕಂಡುಬಂದ ಹಿನ್ನೆಲೆ ಹಾಗೂ ಪ್ರಸ್ತುಕ ವರ್ಷದ ದಸರಾ ಆಚರಣೆಯ ಮುಂಜಾಗ್ರತಾ ಕ್ರಮವಾಗಿ ಕರ್ನಾಟಕ ಪೊಲೀಸ್ ಕಾಯ್ದೆ 1963 ಸೆಕ್ಷನ್ 92(q) ಹಾಗೂ ಭಾರತೀಯ ದಂಡ ಸಂಹಿತೆ ಕಲಂ 268ರ ಅನ್ವಯ ನಗರ ವ್ಯಾಪ್ತಿಯಲ್ಲಿ ತುತ್ತೂರಿ ಮಾರಾಟ ಮಾಡುವುದು ಮತ್ತು ಬಳಸುವುದನ್ನು ನಿಷೇಧಿಸಿ ಆದೇಶಿಸಿದ್ದಾರೆ.

ವಿಜೃಂಭಣೆಯ ದಸರಾ ಆಚರಣೆಗೆ ಸಾಥ್ ನೀಡಿ

● ಉದ್ಯಮಿಗಳು, ಸಂಘ–ಸಂಸ್ಥೆಗಳಿಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಆಹ್ವಾನ ● ಹತ್ತು ಹಲವು ವಿಭಿನ್ನ ಕಾರ್ಯಕ್ರಮಗಳಲ್ಲಿ ಯಾವುದಾದರೊಂದನ್ನು ಪ್ರಾಯೋಜಿಸಲು ಸಲಹೆ





ಮೈಸೂರು, ಸೆ.3(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವವನ್ನು ಈ ಬಾರಿ ಖಾಸಗಿ ಸಹಭಾಗಿತ್ವದಲ್ಲಿ ವಿಜೃಂಭಣೆಯಿಂದ ಆಚರಿಸಲು ಸರ್ಕಾರ ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಶನಿವಾರ ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರ ಅಧ್ಯಕ್ಷತೆಯಲ್ಲಿ ಪ್ರಾಯೋಜಕತ್ವದ ಸಭೆ ನಡೆಯಿತು.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮೈಸೂರು ನಗರ ಹಾಗೂ ತಾಲೂಕಿನ ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು, ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು, ಉದ್ಯಮಿಗಳು, ರಿಯಲ್ ಎಸ್ಟೇಟ್ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡು ದಸರಾ ಕಾರ್ಯಕ್ರಮದ ಪ್ರಾಯೋಜಕತ್ವದ ಬಗ್ಗೆ ಮಾಹಿತಿ ಪಡೆದು, ತಮ್ಮ ಶಕ್ತ್ಯಾನುಸಾರ ವಿವಿಧ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡುವುದಾಗಿ ಕೆಲವರು ಭರವಸೆ ನೀಡಿದರೆ, ಮತ್ತೆ ಕೆಲವರು ಹಿರಿಯ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಪ್ರಾಯೋಜಿಸುವುದಾಗಿ ತಿಳಿಸಿದರು.

ಪ್ರಾಯೋಜಕತ್ವ ನೀಡುವ ಕಂಪನಿಗಳ ಜಾಹೀರಾತುಗಳನ್ನು ಕಾರ್ಯಕ್ರಮದ ಸ್ಥಳದಲ್ಲಿ ಪ್ರದರ್ಶಿಸಲು ಅವಕಾಶ ನೀಡಲಾಗುವುದು. ಅಲ್ಲದೆ ಅವರಿಗೆ ಪ್ರತ್ಯೇಕ ಮಳಿಗೆಗಳನ್ನು ತೆರೆಯಲು ಅವಕಾಶ ನೀಡಿ ತಮ್ಮ ಕಂಪನಿಗಳ ಉತ್ಪನ್ನಗಳ ಕುರಿತು ಪ್ರಚಾರ ಮಾಡಲು ಅವಕಾಶ ಮಾಡಿಕೊಡಲಾಗುವುದು. ದಸರಾ ಕಾರ್ಯ ಕ್ರಮವನ್ನು ಪ್ರತಿನಿತ್ಯ ಲಕ್ಷಾಂತರ ಸಂಖ್ಯೆಯಲ್ಲಿ ಜನರು ನೇರವಾಗಿ ಹಾಗೂ ಟಿವಿ, ಸಾಮಾಜಿಕ ಜಾಲತಾಣ ಗಳ ಮೂಲಕ ವೀಕ್ಷಿಸುತ್ತಾರೆ. ವಿವಿಧ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರಚಾರ ಮಾಡಲು ಇದೊಂದು ಉತ್ತಮ ವೇದಿಕೆಯಾಗಲಿದೆ ಎಂದು ಹೇಳಿದರು.

ಈ ಬಾರಿ ಕೈಗಾರಿಕಾ ದಸರಾ, ಆರೋಗ್ಯ ಮೇಳವನ್ನು ದೊಡ್ಡ ಪ್ರಮಾಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಇದಕ್ಕೆ ಬೇಕಾದ ತಯಾರಿ ನಡೆಯುತ್ತಿದೆ. ಈ ಕಾರ್ಯಕ್ರಮಗಳಿಗೂ ಪ್ರಾಯೋಜಕತ್ವ ನೀಡಬಹುದು. ಪ್ರಾಯೋಜಕತ್ವ ನೀಡಲು ಬಯಸುವ ಕಂಪನಿಗಳು ಕೂಡಲೇ ಜಿಲ್ಲಾಡಳಿತವನ್ನು ಸಂಪರ್ಕಿಸಬೇಕು. ಸೆ.10ರೊಳಗೆ ಪ್ರಾಯೋಜಕತ್ವವನ್ನು ಅಂತಿಮಗೊಳಿಸಲಾಗುವುದು ಎಂದರು.

ಮೈಸೂರು ಜಿಲ್ಲೆಯಲ್ಲಿ ದೊಡ್ಡ ಉದ್ಯಮವಾದ ನೆಸ್ಲೆ, ಏಷಿಯನ್ ಪೇಂಟ್ಸ್, ಮೈಸೂರಿನ ಪ್ರತಿಷ್ಠಿತ ಜ್ಯುವೆಲರಿ ಸಂಸ್ಥೆಗಳು ಯುವ ದಸರಾದಂತಹ ದೊಡ್ಡ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡಬೇಕು. ಯುವ ದಸರಾದಲ್ಲಿ ಸ್ಯಾಂಡಲ್‌ವುಡ್ ನೈಟ್, ಬಾಲಿವುಡ್ ನೈಟ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಾಲಿವುಡ್ ನೈಟ್‌ನ ಒಂದು ದಿನದ ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಮೆರಗು: ಎಸ್ಪಿ ಆರ್.ಚೇತನ್ ಮಾತನಾಡಿ, ಈ ಬಾರಿ ದಸರಾ ಮಹೋತ್ಸವದ ಕ್ರೀಡಾ ಮಹೋತ್ಸವಕ್ಕೆ ಅಂತರರಾಷ್ಟ್ರೀಯ ಮೆರಗು ನೀಡಲು ಚಿಂತಿಸಲಾಗಿದೆ. ಮುಂಬೈ ಹಾಗೂ ಬೆಂಗಳೂರಲ್ಲಿ ನಡೆಯುವಂತೆ ಈ ಬಾರಿ ದಸರಾ ಮಹೋತ್ಸವದಲ್ಲಿ 21 ಕಿ.ಮಿ, 10 ಕಿಮಿ. 5 ಕಿ.ಮಿ ಮ್ಯಾರಾಥಾನ್ ಆಯೋಜಿಸಲಾಗುತ್ತದೆ. ಅಲ್ಲದೆ, ಯುವ ದಸರಾದಲ್ಲೂ ಬಾಲಿವುಡ್ ನೈಟ್, ಸ್ಯಾಂಡಲ್‌ವುಡ್ ನೈಟ್ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡಿದರೆ ನಿಮಗೆ ಹೆಚ್ಚು ಲಾಭವಾಗಲಿದೆ ಎಂದರು.

ಸಭೆಯ ವೇದಿಕೆಯಲ್ಲಿ ಜಿ.ಪಂ. ಸಿಇಓ ಬಿ.ಆರ್. ಪೂರ್ಣಿಮಾ, ಡಿಸಿಪಿ ಗೀತಾ ಪ್ರಸನ್ನ ಉಪಸ್ಥಿತರಿದ್ದರು. ಸಭೆಯಲ್ಲಿ ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಎನ್. ನಾಗರಾಜ್, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಪ್ರಾಯೋಜಕತ್ವಕ್ಕೆ ಸಮ್ಮತಿ

ಸಭೆಯಲ್ಲೇ ಕೋಕಾ ಕೋಲಾ, ಟಿವಿಎಸ್, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಇಸ್ಕಾನ್, ಮುತ್ತೂಟ್ ಫೈನಾನ್ಸ್, ಎಸ್‌ಬಿಐ, ಎವಿಆರ್ ಜುವೆಲ್ಲರ್ಸ್ ಸೇರಿದಂತೆ ವಿವಿಧ ಕಂಪನಿಗಳ ಪ್ರತಿನಿಧಿಗಳು ದಸರಾದ ವಿವಿಧ ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸುವುದಾಗಿ ಘೋಷಿಸಿದರು. ಚಲನಚಿತ್ರೋತ್ಸವಕ್ಕೆ ಡಿಆರ್‌ಸಿ ಚಿತ್ರಮಂದಿರದಲ್ಲಿ ಒಂದು ಪರದೆಯನ್ನು ಉಚಿತವಾಗಿ ನೀಡಲು ಚಿತ್ರಮಂದಿರದ ಮಾಲೀಕರು ನಿರ್ಧರಿಸಿದ್ದಾರೆ. ಆಹಾರ ಮೇಳ ಹಾಗೂ ದಸರಾ ಫಲಪುಷ್ಪ ಪ್ರದರ್ಶನದ ಸಂಪೂರ್ಣ ಪ್ರಾಯೋಜಕತ್ವವನ್ನು ಕೋಕಾ ಕೋಲಾ ಕಂಪನಿ ವಹಿಸಿಕೊಳ್ಳಲು ಮುಂದೆ ಬಂದಿದೆ. ಅಲ್ಲದೆ ಎಲ್‌ಐಸಿ ವೃತ್ತದ ಬಳಿ ದೀಪಾಲಂಕಾ ರದ ಪ್ರಾಯೋಜಕತ್ವ ನೀಡಬೇಕು ಎಂದು ಕೋಕಾ ಕೋಲಾ ಕಂಪನಿ ಕೋರಿಕೊಂಡಿದೆ. ಹಾರ್ಡಿಂಜ್ ವೃತ್ತಕ್ಕೆ ದೀಪಾಲಂಕಾರದ ಪ್ರಾಯೋ ಜಕತ್ವಕ್ಕೆ ಟಿವಿಎಸ್ ಕಂಪನಿ ಮನವಿ ಮಾಡಿದೆ. ಮಕ್ಕಳ ದಸರಾದ ಊಟದ ವ್ಯವಸ್ಥೆಯನ್ನು ಇಸ್ಕಾನ್ ಸಂಸ್ಥೆ ವಹಿಸಿಕೊಳ್ಳುವುದಾಗಿ ಸಭೆ ಯಲ್ಲಿ ಸಂಸ್ಥೆಯ ಪ್ರತಿನಿಧಿಗಳು ತಿಳಿಸಿದರು.

ದಸರಾ ಮಹೋತ್ಸವದಲ್ಲಿ ನಡೆಯುವ ಯುವ ಸಂಭ್ರಮ, ಯುವ ದಸರಾ, ರೈತ ದಸರಾ, ಕ್ರೀಡಾ ದಸರಾ ಸೇರಿದಂತೆ ಹಲವು ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡಲು ಬಯಸುವ ಖಾಸಗಿ ಕಂಪನಿಗಳು, ಸಂಘ–ಸಂಸ್ಥೆಗಳು, ದಸರಾ ವಿಶೇಷಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಅಥವಾ ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರನ್ನು ಸಂಪರ್ಕಿಸಿ ಡಿ.ಡಿ ಅಥವಾ ಚೆಕ್‌ಗಳನ್ನು ನೀಡಿ ಸ್ವೀಕೃತಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿಇ–ಮೇಲ್ ವಿಳಾಸ adcmysuru@gmail.com & dcmysuru@gmail.com ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಪ್ರಾಯೋಜಕತ್ವ ವಹಿಸಿಕೊಳ್ಳಲು ಮನವಿ

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಕಂಪನಿಗಳು, ಸಂಘ ಸಂಸ್ಥೆಗಳು, ಎನ್‌ಜಿಓಗಳು ಜಿಲ್ಲಾಡಳಿತಕ್ಕೆ ಸಾಕಷ್ಟು ನೆರವನ್ನು ನೀಡಿವೆ. ಸೋಂಕಿತರಿಗೆ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತಕ್ಕೆ ಬೇಕಾದ ಅಗತ್ಯ ನೆರವು ಕಲ್ಪಿಸಲು ಕೈಗಾರಿಕೋದ್ಯಮಿಗಳು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ನೀಡಿದ ಬೆಂಬಲ ಶ್ಲಾಘನೀಯ. ಆ ಸಂದರ್ಭ ಎಲ್ಲರೂ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಜಿಲ್ಲಾಡಳಿತಕ್ಕೆ ನೆರವು ನೀಡಿದ್ದರು. ಆದರೆ, ದಸರಾ ಸಂದರ್ಭದಲ್ಲಿ ನೀವು ನೀಡುವ ಸಹಕಾರಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ದಸರಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಯುವ ಸಂಭ್ರಮ, ಯುವ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿವಿಧ ಖಾಸಗಿ ಕಂಪನಿಗಳು, ಸಂಘ ಸಂಸ್ಥೆಗಳು, ಎನ್‌ಜಿಓಗಳು ಯಾವುದಾದರು ಒಂದು ನಿರ್ದಿಷ್ಟವಾದ ಕಾರ್ಯಕ್ರಮದ ಅಥವಾ ಇಡೀ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿಕೊಳ್ಳಬಹುದು. ಪ್ರತಿಯೊಂದು ಕಾರ್ಯಕ್ರಮದ ಪ್ರಾಯೋಜಕತ್ವಕ್ಕೆ ನಿರ್ದಿಷ್ಟ ಮೊತ್ತ ನಿಗದಿಪಡಿಸಲಾಗಿದೆ ಎಂದರು.

ಸಣ್ಣ ಸಣ್ಣ ಕಾರ್ಯಕ್ರಮಕ್ಕೂ ಪ್ರಾಯೋಜಕತ್ವ ನೀಡಬಹುದು

ಅಪರ ಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಮಾತನಾಡಿ, ಈ ಬಾರಿ 16 ಉಪ ಸಮಿತಿ ರಚಿಸಲಾಗಿದ್ದು, ನವರಾತ್ರಿ ವೇಳೆ ಎಲ್ಲಾ ಉಪ ಸಮಿತಿ ವತಿಯಿಂದ ಪ್ರತಿದಿನವೂ ಒಂದೊಂದು ಕಾರ್ಯಕ್ರಮ ನಡೆಯುತ್ತಿರುತ್ತದೆ. ಅರಮನೆ ಮುಂಭಾಗದ ಮುಖ್ಯ ವೇದಿಕೆಯಲ್ಲಿ 8 ದಿನ ಸಂಗೀತ ಕಾರ್ಯಕ್ರಮ ನಡೆಯುತ್ತದೆ. ಯುವ ದಸರಾ, ಯುವ ಸಂಭ್ರಮ, ಚಿಕ್ಕಗಡಿಯಾರ ವೃತ್ತದಲ್ಲಿ ನಡೆಯುವ ಕಾರ್ಯಕ್ರಮ, ಪುರಭವನ ಸೇರಿದಂತೆ ವಿವಿಧೆಡೆ ಕಾರ್ಯಕ್ರಮಗಳು ಜರುಗಲಿದೆ. ಈ ಕಾರ್ಯಕ್ರಮಗಳಲ್ಲಿ ಯಾವುದಾದರೂ ಕಾರ್ಯಕ್ರಮಕ್ಕೆ, ಅಥವಾ ಒಂದು ದಿನದ ಕಾರ್ಯಕ್ರಮ, ಕಲಾವಿದರಿಗೆ ನೀಡುವ ಸಂಭಾವನೆ, ಪ್ರಶಸ್ತಿ, ಪ್ರಮಾಣ ಪತ್ರ, ದಸರಾ ಟಿಕೆಟ್, ಪಾಸ್ ಮುದ್ರಣಕ್ಕೂ ಪ್ರಾಯೋಜಕತ್ವ ನೀಡಬಹುದು ಎಂದು ಸಲಹೆ ನೀಡಿದರು.

ಮೂರನೇ ಪುಟದಿಂದ

ಸಿಬಿಐ ತನಿಖೆಗೆ ಜೆಡಿಎಸ್ ಆಗ್ರಹ

ಭೂ ಪರಿಹಾರ ಹಾಗೂ ಹೆದ್ದಾರಿ ಅವ್ಯವಹಾರದ ಬಗ್ಗೆ ಇಡಿ ಹಾಗೂ ಸಿಬಿಐ ತನಿಖೆಯಾಗಬೇಕು. ಈ ಸಂಬಂಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ನೇತೃತ್ವದಲ್ಲಿ ಶಾಸಕರ ನಿಯೋಗ ಸೆಪ್ಟೆಂಬರ್ 7ರಂದು ದೆಹಲಿಗೆ ತೆರಳಿ, ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ, ದೂರು ನೀಡುವುದರೊಂದಿಗೆ ಸವಿಸ್ತಾರವಾಗಿ ವಿವರಿಸಲಿದ್ದಾರೆ ಎಂದು ಹೇಳಿದರು. ಮಳೆಯಿಂದಾಗಿ ಹೆದ್ದಾರಿಗೆ ಭಾರೀ ಹಾನಿಯಾಗಿದೆ. ಇಡೀ ರಸ್ತೆಯುದ್ಧಕ್ಕೂ ಮಳೆಯ ನೀರು ತುಂಬಿದೆ. ಆ ಭಾಗದ ರೈತರು, ಜನರಿಗೆ ಅನಾನುಕೂಲವಾಗಿದೆ. ನಾನು ಆ ಭಾಗದ ಜನಪ್ರತಿನಿಧಿಯಾಗಿದ್ದೇನೆ. ಕಳೆದ ನಾಲ್ಕು ವರ್ಷಗಳ ಹಿಂದೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಎಚ್ಚರಿಸಿದ್ದೆವು. ಅವರ ದುರ್ನಡತೆಯಿಂದಾಗಿ ಈ ಸ್ಥಿತಿ ಉಂಟಾಗಿದೆ ಎಂದು ಹೆದ್ದಾರಿ ಕಾಮಗಾರಿ ಬಗ್ಗೆ ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆಯಾದರೆ ಒಳ್ಳೆಯದು ಎಂಬ ಕಾರಣಕ್ಕೆ ಸುಮ್ಮನಿದ್ದೆವು. ಸಂಸದ ಪ್ರತಾಪ್ ಸಿಂಹ ಆಗಾಗ ಬಂದು ಫೋಸ್ ಕೊಡ್ತಿದ್ರು. ರಸ್ತೆ ನಾವೇ ಮಾಡಿರೋದು ಅಂತ ತಮ್ಮನ್ನು ತಾವೇ ಹೊಗಳಿಕೊಂಡ್ರು. ನಾನು ಪ್ರತಾಪ್ ಸಿಂಹ ಅವರನ್ನು ಕೇಳಲು ಬಯಸುತ್ತೇನೆ, ನೀವು ಯಾರಿಗೆ ಬ್ರಾಂಡ್ ಅಂಬಾಸಿಡರ್ ಹೇಳಿ, ಹೆದ್ದಾರಿ ಮಾಡುವ ಸಂಸ್ಥೆಯವರಿಗಾ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೆದ್ದಾರಿಯುದ್ದಕ್ಕೂ ಸಮಸ್ಯೆ... ಸಮಸ್ಯೆ...: ಬಿಡದಿಗೆ ರಸ್ತೆ ಓಪನ್ ಬಿಟ್ಟಿಲ್ಲ. 119 ಕಿ.ಮೀ ರಸ್ತೆಯಲ್ಲಿ ಇಂಟರ್ ಜಂಕ್ಷನ್ ಇಲ್ಲ. ಪ್ರಯಾಣಿಕರಿಗೆ ಟೀ ಕುಡಿಯಲು ವ್ಯವಸ್ಥೆ ಇಲ್ಲ. ಪೆಟ್ರೋಲ್ ಹಾಕಿಸಿಕೊಳ್ಳುವ ವ್ಯವಸ್ಥೆಯೂ ಇಲ್ಲ. ಬೇರೆ ಎಕ್ಸ್ ಪ್ರೆಸ್ ಹೈವೇಗಳನ್ನು ಇದೇ ರೀತಿ ಮಾಡಿದ್ದಾರಾ? ಅಪಘಾತವಾದರೆ ಟ್ರಾಮಾ ಸೆಂಟರ್ ಮಾಡಿಲ್ಲ. ಸಾರ್ವಜನಿಕರಿಗೆ ಇದರಿಂದ ಏನು ಲಾಭ? ನಾವೆಲ್ಲ ಶಾಸಕರು ಬರುತ್ತೇವೆ. ಬನ್ನಿ ರಸ್ತೆ ನೋಡಿ ಎಂದು ಪ್ರತಾಪ್ ಸಿಂಹ ಅವರನ್ನು ಆಹ್ವಾನಿಸಿದರು ಮಂಜುನಾಥ್.

ಹೆದ್ದಾರಿಯಲ್ಲಿ ಕ್ರಾಸಿಂಗ್ ಕೊಟ್ಟಿಲ್ಲ. ನಮ್ಮ ಜನ ಎತ್ತಿನ ಗಾಡಿ ಎಲ್ಲಿಂದ ಓಡಿಸಬೇಕು. ಟ್ರ್ಯಾಕ್ಟರ್‌ಗಳನ್ನು ಎಲ್ಲಿ ಕ್ರಾಸ್ ಮಾಡಬೇಕು. 50 ಕಡೆ ಕ್ರಾಸಿಂಗ್ ಇವೆ. ಅಲ್ಲಿ ನೀರು ತುಂಬಿದೆ. ಬನ್ನಿ, ಎಲ್ಲಿ ಮಿಸ್ಟೇಕ್ ಇದೆ ತೋರಿಸ್ತೇವೆ. ರೈತರಿಗೆ ಬರಬೇಕಾದ ಭೂ ಪರಿಹಾರ ಕೊಡಿಸಿ. ಭೂ ಪರಿಹಾರ ಕೊಡದೆ ಇದ್ದರೆ ರಸ್ತೆಯಲ್ಲೇ ಕೂರುತ್ತೇವೆ. ಯಾವುದೇ ಕಾರಣಕ್ಕೂ ಸುಮ್ಮನೆ ಬಿಡಲ್ಲ ಎಂದು ಎಚ್ಚರಿಸಿದರು.

ಈ ರಸ್ತೆ ಚಿನ್ನ, ಬೆಳ್ಳಿಯಿಂದ ಮಾಡಿರೋದಾ...!: ಈ ರಸ್ತೆಯ ಒಂದು ಕಿ.ಮೀ.ಗೆ 80 ಕೋಟಿ ರೂ. ಖರ್ಚು ಮಾಡಲಾಗಿದೆ. ಇನ್ನೂ ಹೆಚ್ಚಿನ ಹಣ ಖರ್ಚು ಮಾಡಬೇಕು. ಇದು ಡಾಂಬರ್ ರಸ್ತೆಯಾ, ಚಿನ್ನ, ಬೆಳ್ಳಿಯಿಂದ ಮಾಡಿರೋದಾ? ನಿನ್ನಂತೆ ಫೋಸ್ ಕೊಡೋಕೆ ನಾವು ಬಂದಿಲ್ಲ. ನಮ್ಮ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆ ಇರಲಿ ಎಂದು ಪ್ರತಾಪ್ ಸಿಂಹ ಅವರಿಗೆ ತಿರುಗೇಟು ನೀಡಿದರು.

ಯಾರ್ದೋ ಭೂಮಿ, ಮತ್ಯಾರಿಗೋ ಪರಿಹಾರ: ಯಾರದ್ದೋ ಭೂಮಿ, ಇನ್ಯಾರಿಗೋ ಪರಿಹಾರ ನೀಡಲಾಗಿದೆ. ಯಾರಿಗೆ ಪರಿಹಾರ ಕೊಟ್ಟಿದ್ದಾರೆ. ಭೂ ಪರಿಹಾರ ಕೇಳಿದರೆ ಜೈಲಿಗೆ ಹಾಕಿಸ್ತಾರಂತೆ. ಮೈಸೂರಿನಿಂದ ಬೆಂಗಳೂರಿಗೆ ಬರುವಾಗ ಪ್ರತಾಪ್ ಸಿಂಹ ಬಿಡದಿಗೆ ಬರಬೇಕು. ಬಿಡದಿಗೆ ಬನ್ನಿ ನಾವು ನೋಡಿಕೊಳ್ತೇವೆ ಎಂದು ಗುಡುಗಿದರು ಮಂಜುನಾಥ್. ದಶಪಥ ರಾಷ್ಟ್ರೀಯ ಹೆದ್ದಾರಿ ವಿಚಾರವಾಗಿ ವಿಧಾನಸಭೆ ಅಧಿವೇಶನದಲ್ಲಿ ಎರಡು ಬಾರಿ ಪ್ರಶ್ನೆ ಕೇಳಲು ಪ್ರಯತ್ನಪಟ್ಟಿದ್ದರೂ ಪ್ರಶ್ನೋತ್ತರ ವೇಳೆಗೆ ಬಾರದಂತೆ ಸಭಾಧ್ಯಕ್ಷರ ಕಚೇರಿಯನ್ನು ಮ್ಯಾನೇಜ್ ಮಾಡಲಾಗಿದೆ ಎಂದು ಶಾಸಕರು ಆರೋಪಿಸಿದರು. ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ಬಹಳ ಪ್ರಭಾವ ಇರುವ ವ್ಯಕ್ತಿ. ಅವರು ಏನು ಬೇಕಾದರೂ ಮಾಡಬಲ್ಲರು. ಅದಕ್ಕಾಗಿಯೇ ಮೈಸೂರು ಸಂಸದರು ಅವರ ಬೆಂಬಲಕ್ಕೆ ನಿಂತಿದ್ದಾರೆ ಎಂದು ಶಾಸಕರು ದೂರಿದರು.

ಸಿಇಟಿ ಸೀಟು ಹಂಚಿಕೆ: ಪುನರಾವರ್ತಿತ ಪಿಯುಸಿ ಅಂಕ ಪರಿಗಣಿಸಲು ಹೈಕೋರ್ಟ್ ತೀರ್ಪು

ಬೆಂಗಳೂರು, ಸೆ.3– 2020–21ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆಯಾಗಿದ್ದು, ಸಿಇಟಿ ಪರೀಕ್ಷೆಗೆ ಪುನರಾವರ್ತಿತರಾಗಿರುವ ಅಭ್ಯರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ ಮಾಡುವಾಗ ದ್ವಿತೀಯ ಪಿಯುಸಿಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಸಹ ಪರಿಗಣಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಹೈಕೋರ್ಟ್ ಆದೇಶ ನೀಡಿದೆ.

ನಾನೇ ಇದರ ಬ್ರಾಂಡ್ ಅಂಬಾಸಡರ್

'ಪ್ರತಾಪ್ ಸಿಂಹ, ಬೆಂಗಳೂರು ಮತ್ತು ಮೈಸೂರು ನಡುವೆ ಅತ್ಯುತ್ತಮವಾದ ಹೆದ್ದಾರಿ ನಿರ್ಮಾಣವಾಗುತ್ತಿದ್ದು, ಇದು ಪ್ರಧಾನಿ ಮೋದಿ ಅವರ ಹೆದ್ದಾರಿಯಾಗಿದೆ. ಮೈಸೂರಿಗೆ ಉದ್ಯಮಗಳನ್ನು ತರಲು ಹಾಗೂ ಮಂಡ್ಯ, ಮದ್ದೂರು ಹಾಗೂ ರಾಮನಗರ ಅಭಿವೃದ್ಧಿಗಾಗಿ ನಾನು ಈ ಹೆದ್ದಾರಿಯ ಬ್ರಾಂಡ್ ಅಂಬಾಸಡರ್ ಆಗಿದ್ದೇನೆ ಎಂದು ತಿರುಗೇಟು ನೀಡಿದರು.

ಭೂ ಸ್ವಾಧೀನಕ್ಕೆ ಸಂಬಂಧಿಸಿದ ಆರೋಪಕ್ಕೆ ಉತ್ತರಿಸಿದ ಅವರು, ವಿಶೇಷ ಭೂ ಸ್ವಾಧೀನಾಧಿಕಾರಿಯು ಕರ್ನಾಟಕ ಸರ್ಕಾರದ ಅಧಿಕಾರಿಯಾಗಿರುತ್ತಾರೆ. ಅವರು ನಿಗದಿಪಡಿಸಿದ ದರವನ್ನು ಭೂಮಿ ಕಳೆದುಕೊಂಡ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡಲಾಗುತ್ತದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರ ಹಸ್ತಕ್ಷೇಪ ಇರುವುದಿಲ್ಲ. ಯಾರಾದರೂ ರೈತರಿಗೆ ಪರಿಹಾರ ವಿಚಾರದಲ್ಲಿ ಆಕ್ಷೇಪಣೆ ಇದ್ದರೆ ಅವರು ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲೂ ಅವಕಾಶವಿದೆ ಎಂದರು. ಈ ಯೋಜನೆಯಲ್ಲಿ 900 ಕೋಟಿ ರೂ. ಭ್ರಷ್ಟಾಚಾರ ನಡೆದಿದೆ ಎಂದು 6 ತಿಂಗಳ ಹಿಂದೆಯೇ ಶಾಸಕ ಮಂಜುನಾಥ್ ಆರೋಪಿಸಿದ್ದರು. ನಿಜಕ್ಕೂ ಭ್ರಷ್ಟಾಚಾರ ನಡೆದಿದ್ದರೆ ಅಲ್ಲಿ ನಷ್ಟವಾಗುವುದು ಸಾರ್ವಜನಿಕರ ಹಣವಲ್ಲವೇ? ಹಾಗಿರುವಾಗ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮನೆಯಲ್ಲಿಟ್ಟುಕೊಂಡು ಅವರು ಪೂಜಿಸುತ್ತಿದ್ದಾರಾ? ಎಂದು ಪ್ರಶ್ನಿಸಿದರಲ್ಲದೆ, ಸಾರ್ವಜನಿಕರ ಹಣ ಭ್ರಷ್ಟರ ಪಾಲಾಗಬಾರದು ಎಂಬುದು ಅವರ ನಿಲುವಾಗಿದ್ದರೆ ದಾಖಲೆಗಳನ್ನು ಯಾಕೆ ಬಹಿರಂಗಪಡಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಇನ್ನು ಬಿಡದಿಗೆ ಬರುವಂತೆ ನನಗೆ ಸವಾಲೆಸೆದಿದ್ದಾರೆ. ಅವರು ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಿದರೆ ಆ ಸಮಯಕ್ಕೆ ಸರಿಯಾಗಿ ನಾನು ಒಬ್ಬನೇ ಬಿಡದಿಗೆ ಬರುತ್ತೇನೆ ಎಂದು ಹೇಳುವ ಮೂಲಕ ಅವರ ಸವಾಲನ್ನು ಸ್ವೀಕರಿಸಿದರು.

2018ರ ಮೇ ತಿಂಗಳಿನಿಂದ 2019ರ ಜುಲೈವರೆಗೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿ, ರೇವಣ್ಣ ಅವರು ಲೋಕೋಪಯೋಗಿ ಸಚಿವರಾಗಿದ್ದರು. ಆಗ ರಾಮನಗರದ ಶಾಸಕರೂ ಆಗಿದ್ದ ಕುಮಾರಸ್ವಾಮಿ ಅವರು ಈ ಕಾಮಗಾರಿ ಬಗ್ಗೆ ಪರಿಶೀಲನಾ ಸಭೆ ನಡೆಸಿದ್ದರು. ಅದರಲ್ಲಿ ರೇವಣ್ಣ ಸಹ ಉಪಸ್ಥಿತರಿದ್ದರು. ಆಗ ಅವರಿಗೆ ಕಾಣದೇ ಇದ್ದ ಅವೈಜ್ಞಾನಿಕತೆ ವಿಧಾನಸಭಾ ಚುನಾವಣೆ ಕೇವಲ 6 ತಿಂಗಳು ಇರುವಾಗ ಗೋಚರಿಸಿತೇ? ಅಂಡರ್‌ಪಾಸ್ ಮತ್ತು ಇಂಟರ್ ಜಂಕ್ಷನ್‌ಗಳು ಈಗ ಕಾಣಿಸುತ್ತಿವೆಯೇ? ರಾಮದೇವರ ಗುಡ್ಡ ಪ್ರದೇಶದಲ್ಲಿ ಕಳೆದ 30 ವರ್ಷಗಳಲ್ಲಿ ಈಗ ಸುರಿದಷ್ಟು ಮಳೆ ಸುರಿದಿದೆಯೇ ಎಂಬುದನ್ನು ಶಾಸಕ ಮಂಜುನಾಥ್ ಹೇಳಲಿ ಎಂದು ಸವಾಲೆಸೆದರು.

ವಿಧಾನಸಭೆಯಲ್ಲಿ ಚರ್ಚಿಸಲು ವಿಧಾನಸಭಾಧ್ಯಕ್ಷರು ಅವಕಾಶ ನೀಡಿಲ್ಲ. ಅವರನ್ನು ಪ್ರತಾಪ್ ಸಿಂಹ ಅಡ್ಜಸ್ಟ್ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಉತ್ತರಿಸಿದ ಸಂಸದರು, ವಿಧಾನಸಭೆಯಲ್ಲಿ ಯಾವುದೇ ವಿಷಯದ ಚರ್ಚೆ ನಡೆಯದಂತೆ ಪ್ರಭಾವ ಬೀರಲು ನಾನೇನೂ ಶಾಸಕನಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಈ ಹೆದ್ದಾರಿ ಬಗ್ಗೆಯೇ ವಿಷಯವನ್ನು ಪ್ರಸ್ತಾಪಿಸಿ ಚರ್ಚಿಸಬಹುದಿತ್ತಲ್ಲವೇ? ಆಗ ಅವರದೇ ಸರ್ಕಾರ. ಅವರದೇ ವಿಧಾನಸಭಾಧ್ಯಕ್ಷರು ಇದ್ದರಲ್ಲವೇ? ಎಂದು ಪ್ರಶ್ನಿಸಿದರು. ಪ್ರಧಾನಿ ಮೋದಿಯವರ ಹೆದ್ದಾರಿಯಾಗಿರುವ ಮೈಸೂರು–ಬೆಂಗಳೂರು ಹೆದ್ದಾರಿಗೆ ನಾನು ಬ್ರಾಂಡ್ ಅಂಬಾಸಡರ್‌ನಂತೆ ಕೆಲಸ ಮಾಡುತ್ತಿರುವುದರಿಂದಲೇ ಕಾಲಮಿತಿಯೊಳಗೆ ಈ ಹೆದ್ದಾರಿ ಕಾಮಗಾರಿ ಪೂರ್ಣಗೊಳ್ಳುತ್ತಿದೆ ಎಂದರು.

ಇದು ಪ್ರವೇಶ ನಿಯಂತ್ರಿತ ಎಕ್ಸ್‌ಪ್ರೆಸ್ ಹೈವೇ ಆಗಿದ್ದು, ಈ ರಸ್ತೆಯಲ್ಲಿ ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿರುವಂತೆ ಹಾದಿ ಬೀದಿ ಡಾಬಾ, ಹೋಟೆಲ್‌ಗಳಿಗೆ ಅವಕಾಶವಿಲ್ಲ. ಈ ರಸ್ತೆಯಲ್ಲಿ ಕೆಫೆಟೇರಿಯನ್, ಪೆಟ್ರೋಲ್ ಬಂಕ್, ಟ್ರಾಮಾ ಸೆಂಟರ್, ಪ್ರತ್ಯೇಕ ರೆಸ್ಟ್ ಏರಿಯಾ ಎಲ್ಲವೂ ಬರುತ್ತದೆ. ಶಾಸಕ ಮಂಜುನಾಥ್ ಮತ್ತು ಬೆಂಬಲಿಗರು ಮಾಡಿಕೊಂಡ ಲೇಔಟ್‌ಗಳಿಗೆ ಈ ರಸ್ತೆಯಲ್ಲಿ ಪ್ರವೇಶ ಹಾಗೂ ನಿರ್ಗಮನ ನೀಡುವುದಿಲ್ಲ. ಕಮಿಷನ್ ತೆಗೆದುಕೊಳ್ಳುವರು ಯಾರು? ಕಾಂಟ್ರಾಕ್ಟ್ ಮಾಡಿಸಿರುವವರು ಯಾರು? ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವವರು ಯಾರು? ಎಂಬುದು ಮಾಗಡಿ ಹಾಗೂ ಕರ್ನಾಟಕದ ಜನತೆಗೆ ಗೊತ್ತಿದೆ. ರಾಜ್ಯದಲ್ಲೇ ಪ್ರಪ್ರಥಮವಾಗಿ ಪ್ರವೇಶ ನಿಯಂತ್ರಿತ ಎಕ್ಸ್‌ಪ್ರೆಸ್ ಹೈವೇ ಕಾಮಗಾರಿ ನಡೆಯುತ್ತಿರುವಾಗ ಅದಕ್ಕೆ ಸಹಕಾರವನ್ನು ನೀಡುವುದನ್ನು ಬಿಟ್ಟು ಹೀಗೆ ಆರೋಪದಲ್ಲಿ ತೊಡಗಿರುವವರನ್ನು ನೋಡಿದರೆ ನನಗೆ ಮಾತ್ರವಲ್ಲ, ರಾಜ್ಯದ ಜನತೆಗೂ ಅವರ ಬಗ್ಗೆ ಅನುಮಾನ ಕಾಡುತ್ತಿದೆ ಎಂದರು.

ಮುರುಘಾ ಶರಣರು ನನಗೆ ದೇವರ ಸಮಾನ

ಶಿವಮೊಗ್ಗ, ಸೆ. 3– ಮುರುಘಾ ಮಠದ ಸ್ವಾಮೀಜಿಗಳು ನನಗೆ ದೇವರ ಸಮಾನ, ಅವರ ಮೇಲೆ ಬಂದಿರುವ ಆರೋಪ ಸುಳ್ಳಾಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ.



ಅಪ್ರಾಪ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮುರುಘಾ ಶರಣರ ಕುರಿತು ಶಿವಮೊಗ್ಗದಲ್ಲಿ ಮಾತನಾಡಿದ ಕೆಎಸ್ ಈಶ್ವರಪ್ಪ, ಮಠದ ಸ್ವಾಮೀಜಿಗಳು ನನಗೆ ದೇವರ ಸಮಾನ. ಮುರುಘಾ ಶ್ರೀಗಳ ಬಗ್ಗೆ ಈಗಲೂ ಗೌರವ ಇದೆ. ತನಿಖೆಯಲ್ಲಿ ಅವರ ಮೇಲಿರುವ ಆರೋಪ ಸತ್ಯವೋ, ಸುಳ್ಳೋ ಎಂಬುದು ಹೊರ ಬರಲಿದೆ. ಈಗಲೇ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಸಾಧು ಸಂತರು ಹಿಂದೂ ಧರ್ಮಕ್ಕೆ ಪ್ರೇರಣೆಯಾಗಿದ್ದಾರೆ. ಮುರುಘಾ ಶ್ರೀಗಳ ಮೇಲಿನ ಆರೋಪ ಸುಳ್ಳಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಆದರೆ ಶರಣರ ಬಗ್ಗೆ ಕೇಳಿ ಬರುತ್ತಿರುವ ಆರೋಪದ ಬಗ್ಗೆ ಮಾತನಾಡಲು ನನಗೆ ವಾಕರಿಕೆ ಬರುತ್ತದೆ, ಈ ಪ್ರಕರಣ ಬಗ್ಗೆ ಮಾತನಾಡಲು ನನಗೆ ಮನಸ್ಸಿಲ್ಲ, ಅದರ ಬಗ್ಗೆ ಮಾತನಾಡಿದರೆ ಅನಿಷ್ಟ ಬರುತ್ತದೆ. ನನಗೆ ಮಠಾಧೀಶರು ಎಂದರೆ ದೇವರಿದ್ದ ಹಾಗೆ, ಕೇಸು ನಡೆಯುತ್ತಿರುವುದರಿಂದ ಮಾತನಾಡುವುದು ಸರಿಯಲ್ಲ ಎಂದರು.

ಇಂದು ಮದ್ಯ ಮಾರಾಟ ನಿಷೇಧ

ಮೈಸೂರು,ಸೆ.3–ನಗರದ 812 ಕಡೆ ಸೆ.4ರಂದು ಗೌರಿ–ಗಣೇಶ ವಿಸರ್ಜಿಸುವ ಕಾರ್ಯಕ್ರಮಗಳಿದ್ದು, ಈ ಸಮಯದಲ್ಲಿ ಮೆರವಣಿಗೆ ಉತ್ಸವಗಳನ್ನು ನಡೆಸಲಿರುವುದರಿಂದ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ವ್ಯವಸ್ಥೆ ಕಾಪಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಸೆ.4ರ ಬೆಳಗ್ಗೆ 6 ರಿಂದ ಮಧ್ಯ ರಾತ್ರಿ 12ರವರೆಗೆ ಜಿಲ್ಲೆಯ ಗ್ರಾಮಾಂತರ ವ್ಯಾಪ್ತಿಯಲ್ಲಿ ಎಲ್ಲಾ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಿಲಾಗಿದೆ.

ಸೆ.18ರಂದು ಅಂತರಶಾಲಾ ಚಿತ್ರಕಲಾ ಸ್ಪರ್ಧೆ; ವಿಜೇತರಿಗೆ 'ನೈಪುಣ್ಯ ದಸರಾ ಪ್ರಶಸ್ತಿ'

ಮೈಸೂರು, ಸೆ.3(ಪಿಎಂ)– ಮೈಸೂರಿನ ಆರ್.ಟಿ.ನಗರದ 'ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್' ಶಾಲೆ ವತಿಯಿಂದ ಪ್ರಸಕ್ತ ಸಾಲಿನ ನಾಡಹಬ್ಬ ದಸರಾ ಅಂಗವಾಗಿ ಸೆ.18ರಂದು ಅಂತರಶಾಲಾ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದ್ದು, ಪ್ರಥಮ ಸ್ಥಾನಕ್ಕೆ ನಗದು ಸಹಿತ 'ನೈಪುಣ್ಯ ದಸರಾ ಪ್ರಶಸ್ತಿ' ಪ್ರದಾನ ಮಾಡಲಾಗುವುದು.

Nypunya School of Excellence MYSURU

ಎಲ್‌ಕೆಜಿಯಿಂದ ಎಸ್‌ಎಸ್‌ಎಲ್‌ಸಿವರೆಗಿನ ಶಾಲೆ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಸೆ.18ರಂದು ಶಾಲಾ ಆವರಣದಲ್ಲಿ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ನೇರವಾಗಿ ಅಥವಾ ತಾವು ವ್ಯಾಸಂಗ ಮಾಡುತ್ತಿರುವ ಶಾಲೆಯ ಮುಖೇನ ಸೆ.13ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಪಾರಂಪರಿಕ ಕಟ್ಟಡಗಳು, ಮೈಸೂರು ಸಂಸ್ಕೃತಿ ಹಾಗೂ ದಸರಾ ವಿಷಯಗಳಲ್ಲಿ ಒಂದು ಆಯ್ಕೆ ಮಾಡಿಕೊಂಡು ಚಿತ್ರ ರಚಿಸಬಹುದು. ಸೀನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನಕ್ಕೆ 10 ಸಾವಿರ ನಗದು ಸಹಿತ ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಂತೆಯೇ ಜೂನಿಯರ್ ಮತ್ತು ಸಬ್ ಜೂನಿಯರ್ ವಿಭಾಗಗಳಿಗೂ ಪ್ರಶಸ್ತಿ ಹಾಗೂ ನಗದು ಬಹುಮಾನಗಳನ್ನು ನೀಡಲಾಗುವುದು. ಮಾಹಿತಿಗೆ ಮೊ.ಸಂ. 91080 02966 ಅಥವಾ ದೂ.ಸಂ. 0821–2340041 ಸಂಪರ್ಕಿಸಬಹುದು ಎಂದು ಶಾಲಾ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈ.ನ.ಪ್ರಾ/ವಕ–4/2022–23 ದಿನಾಂಕ:03.09.2022

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯಿಂದ "ದಿ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ" ಮೈಸೂರು ಇವರಿಗೆ ಜಯಲಕ್ಷ್ಮಿಪುರಂ ಕಾಳಿದಾಸ ರಸ್ತೆಯ ನಿವೇಶನ ಸಂಖ್ಯೆ: 144ರ ನಿವೇಶನವನ್ನು ಮಂಜೂರು ಮಾಡಿದ್ದು, ನಂತರ ಸೊಸೈಟಿ ರವರು ಶ್ರೀ ಹೆಚ್.ಸುಬ್ಬರಾವ್ ರವರಿಗೆ ಮಂಜೂರು ಮಾಡಿರುತ್ತಾರೆ. ತದನಂತರ ಶ್ರೀ ಹೆಚ್.ಸುಬ್ಬರಾವ್‌ರವರು ಡಾ॥ ರಾಮೇಗೌಡರವರಿಗೆ ದಿನಾಂಕ : 29.05.1978 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಡಾ॥ ರಾಮೇಗೌಡ ರವರ ಹೆಸರಿಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿ:19.06.1978 ರಂದು ಖಾತಾ ನೋಂದಾಯಿಸಿರುತ್ತಾರೆ.

ಪ್ರಸ್ತುತ ಡಾ॥ ರಾಮೇಗೌಡ ರವರು ಪ್ರಾಧಿಕಾರಕ್ಕೆ ಹಕ್ಕುಪತ್ರ ಪಡೆಯಲು ಕೋರಿರುವುದರಿಂದ ಸದರಿಯವರ ಹೆಸರಿಗೆ ಹಕ್ಕುಪತ್ರ ನೀಡಲು ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 7 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಚೇರಿ–4.
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ. ಮೈಸೂರು

ಮೂರನೇ ಪುಟದಿಂದ

ಒತ್ತುವರಿ ತೆರವಿಗೆ ಜಿಲ್ಲಾಡಳಿತ ಕ್ರಮ

ಅಲ್ಲಿಂದಲೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಗ್ರಾಮ ಪಂಚಾಯಿತಿ ವತಿಯಿಂದ ತಕ್ಷಣವೇ ಹುಯಿಲಾಳು ಕೆರೆ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡಬೇಕು ಹಾಗೂ ನರೇಗಾ ಯೋಜನೆಯಡಿ ಖಾಯಂ ಕಾಮಗಾರಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸುವಂತೆ ಸೂಚಿಸಿದರು. ಬೋಗಾದಿ, ಕೆ.ಹೆಮ್ಮನಹಳ್ಳಿ, ಆನಂದ ನಗರ, ಪರಸಯ್ಯನಹುಂಡಿ ಬಳಿಯ ಅರ್ಪಿತಾ ನಗರ, ಹುಯಿಲಾಳು, ಮಾಣಿಕ್ಯಪುರ, ಸಾಹುಕಾರ್ ಹುಂಡಿ, ಮೂಗನಹುಂಡಿ ಸೇರಿದಂತೆ ಸುತ್ತಲಿನ ಜನವಸತಿ ಪ್ರದೇಶ, ತೋಟಗಳು ಸೇರಿದಂತೆ ಇನ್ನಿತರೆ ಕೃಷಿ ಭೂಮಿಯಲ್ಲಿ ನೀರು ತುಂಬಿಕೊಳ್ಳುವುದನ್ನು ತಡೆಯಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಎಂಜಿಎನ್‌ಆರ್‌ಇಜಿ) ಯೋಜನೆಯಡಿ ಕಾಮಗಾರಿ ಕೈಗೊಳ್ಳುವಂತೆಯೂ ಅವರು ಜಿಲ್ಲಾ ಪಂಚಾಯಿತಿ ಸಿಇಒ ತಿಳಿಸಿದರು. ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವಿಗೆ ಉನ್ನತ ಮಟ್ಟದ ಸಮಿತಿ ರಚಿಸಬೇಕೆಂದು ಕೋರಿಕೊಂಡಿರುವ ಎಂಜಿಪಿ ಸದಸ್ಯರು, ಪ್ರವಾಹ ಹಾನಿ ತಪ್ಪಿಸುವಂತೆ ಮನವಿ ಮಾಡಿದರು. ಮೂಲ ಪೂರ್ಣಯ್ಯ ನಾಲೆ ಹಾದು ಹೋಗಿರುವ ಬಗ್ಗೆ ಮೂಲ ನಕ್ಷೆ ಹಾಜರುಪಡಿಸಿ ವಿವರಿಸಿದ ಅವರು, ಪ್ರಸ್ತುತ ಆ ಜಾಗ ಒತ್ತುವರಿಯಾಗಿ ಅದರ ಮೇಲೆ ಕಟ್ಟಡ ನಿರ್ಮಿಸಿರುವುದರಿಂದ ಮಳೆ ನೀರು ಹರಿದು ಹೋಗಲು ಅಡ್ಡಿಯಾಗಿ ವಸತಿ ಬಡಾವಣೆಗಳು ಜಲಾವೃತಗೊಳ್ಳುತ್ತಿವೆ ಎಂಬುದನ್ನು ಪುರಾವೆ ಸಹಿತ ಅವರು ಜಿಲ್ಲಾಧಿಕಾರಿಗಳ ಗಮನ ಸೆಳೆದರು.

ದಿವಾನ್ ಪೂರ್ಣಯ್ಯ ನಾಲೆ ಒಟ್ಟು 22 ಕಿ.ಮೀ. ಇತ್ತು. ಈಗ ಕೇವಲ 4 ಕಿ.ಮೀ. ಮಾತ್ರ ಕಾಣಸಿಗುತ್ತದೆ. ಈ ನಾಲೆ ಜಾಗವನ್ನು ಒತ್ತುವರಿ ಮಾಡಿ ವಸತಿ ಕಟ್ಟಡ, ವಾಣಿಜ್ಯ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಅದರಿಂದ ಮಳೆಗಾಲದಲ್ಲಿ ಬೆಳವಾಡಿ, ಕೆ. ಹೆಮ್ಮನಹಳ್ಳಿ, ಸಾಹುಕಾರ್‌ಹುಂಡಿ, ಹುಯಿಲಾಳು ಸೇರಿದಂತೆ ಇತರ ಗ್ರಾಮಗಳ ಕೆರೆಗಳು ಉಕ್ಕಿ ಹರಿದು, ಸುತ್ತಲಿನ ವಸತಿ ಬಡಾವಣೆಗಳು ಮುಳುಗಡೆಯಾಗುತ್ತಿವೆ ಎಂದು ಎಂಜಿಪಿ ಸದಸ್ಯರು, ಜಿಲ್ಲಾಧಿಕಾರಿಗಳಿಗೆ ವಸ್ತುಸ್ಥಿತಿ ವಿವರಿಸಿದರು. ಆ ವೇಳೆ ಪ್ರತಿಕ್ರಿಯಿಸಿದ ಡಿಸಿ ಡಾ. ಬಗಾದಿ ಗೌತಮ್, ಕೆರೆಗಳ ಸಂರಕ್ಷಣೆಗಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿ ಅಸ್ತಿತ್ವದಲ್ಲಿದೆ. ಹುಕ್ಕುಡಳ್ಳಿ ಕೆರೆ ಸೇರಿದಂತೆ ಎಲ್ಲಾ ಕೆರೆಗಳ ಹೂಳೆತ್ತುವುದು, ಸಂರಕ್ಷಣೆಯ ಅಧಿಕಾರ ಸಮಿತಿಗೆ ನೀಡಿರುವುದರಿಂದ ಅಗತ್ಯ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು. ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಿಯೋಗದಲ್ಲಿ ಎಂಜಿಪಿಯ ಶೋಬನಾ ಸಾಂಬಶಿವನ್, ಅಶ್ವಿನಿ ರಂಜನ್, ಎಸ್. ಶೈಲಜೇಶ್, ಮೇಜರ್ ಜನರಲ್ (ನಿವೃತ್ತ) ಎಸ್.ಜಿ. ಒಂಬತ್ಕೆರೆ, ಜಲಸಂರಕ್ಷಕ ಯು.ಎನ್. ರವಿಕುಮಾರ್ ಹಾಗೂ ಮೇಜರ್ ಜನರಲ್ (ನಿವೃತ್ತ) ಸಿ.ಕೆ. ಕರುಂಬಯ್ಯ ಅವರ ಪತ್ನಿ ದೇಚು ಕರುಂಬಯ್ಯ ಉಪಸ್ಥಿತರಿದ್ದರು.

ಕಾನೂನಿಗಿಂತ ಯಾರೂ ದೊಡ್ಡವರಲ್ಲ

ಬೆಂಬಲಕ್ಕೆ ನಿಲ್ಲುತ್ತಾರೆ. ಈ ಕಾರ್ಯಕ್ಕಾಗಿ ಅವರನ್ನು ಸದಾ ನೆನೆಯುತ್ತಾರೆ ಎಂದು ಅವರು ತಿಳಿಸಿದ್ದಾರೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಸುಪ್ರೀಂಕೋರ್ಟ್ ಆದೇಶದಂತೆ ನೋಯಿಡಾದಲ್ಲಿ ಅವಳಿ ಟವರ್‌ಗಳನ್ನು ನೆಲಸಮಗೊಳಿಸಲಾಗಿದೆ. ಯಾರಾದರೂ ಈ ಕ್ರಮವನ್ನು ಕೈಗೊಂಡಿದ್ದರೆ? ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಸರ್ವೋಚ್ಛ ನ್ಯಾಯಾಲಯವೇ ಸೂಚಿಸುತ್ತಿರುವಾಗ ಮೈಸೂರಿನಲ್ಲಿ ಜಿಲ್ಲಾಧಿಕಾರಿಗಳು ಒತ್ತುವರಿಯನ್ನು ಮುಲಾಜಿಲ್ಲದೆ ತೆರವುಗೊಳಿಸಬಹುದು ಎಂದು ಅವರು ಹೇಳಿದ್ದಾರೆ. ಕೇರಳ ರಾಜ್ಯದ ಕೊಚ್ಚಿಯ ಬೀಚ್‌ಗೆ ಹೊಂದಿಕೊಂಡಂತೆ ಕಾನೂನನ್ನು ಉಲ್ಲಂಘಿಸಿ ನಿರ್ಮಿಸಲಾಗಿದ್ದ ಎರಡು ಐಷಾರಾಮಿ ಅಪಾರ್ಟ್‌ಮೆಂಟ್ ಅನ್ನು 2020ರ ಜನವರಿ 11ರಂದು ನೆಲಸಮಗೊಳಿಸಿರುವ ಉದಾಹರಣೆ ಕಣ್ಮುಂದೆ ಇರುವಾಗ ಮೈಸೂರು ಜಿಲ್ಲಾಧಿಕಾರಿಗಳು ತಕ್ಷಣವೇ ಕಾರ್ಯ ಪ್ರವೃತ್ತರಾಗಿ ದಿವಾನ್ ಪೂರ್ಣಯ್ಯ ನಾಲೆಯ ಒತ್ತುವರಿ ತೆರವುಗೊಳಿಸಿ ಮೈಸೂರು ನಗರದ ಅಮೂಲ್ಯ ಕೆರೆಗಳ ಉಳಿಸುವಂತೆಯೂ ಭಾಮಿ ವಿ.ಶೆಣೈ ಸಲಹೆ ನೀಡಿದ್ದಾರೆ.

ಡಾ.ಚಂದ್ರಶೇಖರ ಕಂಬಾರರಿಂದ ಚಾಲನೆ

ಮುಂದೆ ತಿಳಿಸಲಾಗುವುದು. ನಾಡಿನಾದ್ಯಂತ 40 ಯುವ ಕವಿಗಳು ತಮ್ಮ ಕವಿತೆ ವಾಚಿಸಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಚಿಗುರು ಕವಿಗೋಷ್ಠಿ: ಅ.1ರಂದು ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ 'ಚಿಗುರು ಕವಿಗೋಷ್ಠಿ' ಹಮ್ಮಿಕೊಳ್ಳಲಾಗುವುದು. 40 ಮಂದಿ ಉದಯೋನ್ಮುಖ ಪ್ರತಿಭೆಗಳಿಗೆ ಇದರಲ್ಲಿ ಅವಕಾಶ ಕಲ್ಪಿಸಲಾಗುವುದು. ಯುವ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆದವರಿಗೆ ಚಿಗುರು ಕವಿಗೋಷ್ಠಿಯಲ್ಲಿ ಅವಕಾಶ ಇರುವುದಿಲ್ಲ ಎಂದರಲ್ಲದೆ, ವಯೋಮಿತಿ ನಿಗದಿ ಮಾಡಿಲ್ಲ. ಒಟ್ಟಾರೆ ನಾಡಿನ ವಿದ್ಯಾರ್ಥಿಗಳು ಹಾಗೂ ಉದಯೋನ್ಮುಖ ಕವಿಗಳಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರಧಾನ ಕವಿಗೋಷ್ಠಿ: ಅ.3ರಂದು ಜಗನ್ಮೋಹನ ಅರಮನೆ ಅಥವಾ ಮಾನಸ ಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ಪ್ರಧಾನ ಕವಿಗೋಷ್ಠಿ ನಡೆಯಲಿದೆ. ಉದ್ಘಾಟನೆಯನ್ನು ಡಾ.ಚಂದ್ರಶೇಖರ ಕಂಬಾರ ಮಾಡಲಿದ್ದು, ಅಧ್ಯಕ್ಷತೆಯನ್ನು ಪ್ರಸಿದ್ಧ ಕವಿ ಡಾ.ಹೆಚ್.ಎಸ್.ಶಿವಪ್ರಕಾಶ್ ವಹಿಸಲಿದ್ದಾರೆ. ಇದು ಬಹುಭಾಷಾ ಕವಿಗೋಷ್ಠಿ ಆಗಿರುವುದು ವಿಶೇಷ. ಕನ್ನಡ ನಾಡಿನ ತುಳು, ಕೊಡವ, ಅರೆಭಾಷೆ, ಸಂಸ್ಕೃತ, ಕೊಂಕಣಿ ಮೊದಲಾದ ಭಾಷೆಗಳ ಪ್ರಸಿದ್ಧ ಕವಿಗಳಿಗೆ ಆಹ್ವಾನ ನೀಡಲಾಗುವುದು. 40 ಮಂದಿ ಕವಿಗಳನ್ನು ಆಹ್ವಾನಿಸುವ ಸಂಬಂಧ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎಲ್ಲಾ ನಾಲ್ಕು ಕಾರ್ಯಕ್ರಮಗಳಲ್ಲೂ ಕವಯತ್ರಿಯರಿಗೂ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ದಸರಾ ಕವಿಗೋಷ್ಠಿ ಉಪಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್ ಗೋಷ್ಠಿಯಲ್ಲಿದ್ದರು.

ಮುರುಘಾ ಶ್ರೀಗಳಿಗೆ ಪುರುಷತ್ವ ಪರೀಕ್ಷೆ

ಎಂಬ ಮಾಹಿತಿ ಲಭ್ಯವಾಗಿದೆ. ಸ್ವಾಮೀಜಿ ಎಲ್ಲಾ ಪ್ರಶ್ನೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ. ಪೋಕ್ಸೊ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮುರುಘಾ ಶ್ರೀಗಳಿಗೆ ಸೋಮವಾರದವರೆಗೆ ಜಾಮೀನಿಗೆ ಅರ್ಜಿ ಸಲ್ಲಿಸಬೇಡಿ ಎಂದು ಶ್ರೀಗಳ ಪರ ವಕೀಲರಿಗೆ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ನೇರವಾಗಿ ಹೇಳಿದೆ.

ಲೈಂಗಿಕ ಕಿರುಕುಳ ಆರೋಪದ ಮೇಲೆ ಮುರುಘಾ ಮಠದ ಶ್ರೀಗಳು ಜೈಲು ಪಾಲಾಗಿದ್ದು, ಮುರುಘಾ ಮಠದ ಆಪ್ತ ವಕೀಲ ಉಮೇಶ್ ಅವರು ಇಂದು ಬೆಳಗ್ಗೆ 11 ಗಂಟೆಗೆ ಶ್ರೀಗಳ ಪರವಾಗಿ ಜಾಮೀನು ಕೋರಿ ಅರ್ಜಿ ಸಲ್ಲಿಸಲು ಮುಂದಾದರು. ಆದರೆ ಪೊಲೀಸ್ ಕಸ್ಟಡಿ ಮುಗಿಯುವವರೆಗೆ ಜಾಮೀನು ಅರ್ಜಿ ಸಲ್ಲಿಸಬೇಡಿ ಎಂದು ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ನ್ಯಾಯಾಧೀಶರು ಸೂಚಿಸಿದ್ದಾರೆ.

ಹಾಸ್ಟೆಲ್ ವಿದ್ಯಾರ್ಥಿನಿಯರ ಭವಿಷ್ಯದ ಚಿಂತೆ: ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಾದ ಬೆನ್ನಲ್ಲೇ ಮಠದ ಹಾಸ್ಟೆಲ್ ವಿದ್ಯಾರ್ಥಿನಿಯರ ಭವಿಷ್ಯದ ಬಗ್ಗೆ ಚಿಂತೆ ಎದುರಾಗಿದೆ. ಮುರುಘಾ ಮಠದಲ್ಲಿರುವ ವಿದ್ಯಾರ್ಥಿನಿಯರನ್ನು ಬೇರೆಡೆಗೆ ಶಿಫ್ಟ್ ಮಾಡುವ ಕುರಿತು ಮಕ್ಕಳ ಹಕ್ಕು ಆಯೋಗ ಚಿಂತನೆ ನಡೆಸಿದೆ.

ಪ್ರಗತಿಪರರ ಸಹವಾಸವೇ ಕಾರಣ!

ಪ್ರತಿಮೆಯನ್ನು ಮಠದಲ್ಲಿಟ್ಟಿದ್ದರು. ಗೋವುಗಳನ್ನು, ಅವೂ ಹಂದಿ-ನಾಯಿ ಇದ್ದಂತೆ ಎಂದು ಹೇಳಿದ್ದರು. ಹಿಂದು ಧರ್ಮದ ರಕ್ಷಣೆ ಬಗ್ಗೆ ಮಾತನಾಡುವುದನ್ನು ಬಿಟ್ಟು ಇಸ್ಲಾಂ ಧರ್ಮದ ವರ್ಣನೆ, ಗುಣಗಾನ ಮಾಡಿದ್ದರು. ಇದಕ್ಕಾಗಿ ನೀವು ಸ್ವಾಮಿಗಳಾಗಿರಲಿಲ್ಲ. ಹಿಂದೂ ಧರ್ಮದ ಗುಣಗಾನ ಮಾಡಿ, ಧರ್ಮವನ್ನು ಬೆಳೆಸಬಹುದಿತ್ತು, ಬೇರೆ ಧರ್ಮದವರನ್ನೂ ಆಹ್ವಾನಿಸಬಹುದಿತ್ತು, ಲವ್ ಜಿಹಾದ್ ತಪ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬಹುದಿತ್ತು. ಆದರೆ ಅವರು ವಿಭೂತಿ, ತಿಲಕ ಹಚ್ಚಿಕೊಂಡು ಟಿಪ್ಪು ಸುಲ್ತಾನ್ ವರ್ಣನೆ ಮಾಡಿದ್ದರು ಎಂದು ಶ್ರೀಗಳ ಧೋರಣೆ ಖಂಡಿಸಿದರು. ಟಿಪ್ಪು ವರ್ಣನೆ ಮಾಡಿದವರೆಲ್ಲಾ ಕಷ್ಟ-ನಷ್ಟಕ್ಕೆ ತುತ್ತಾಗಿದ್ದಾರೆ. ಟಿಪ್ಪು ಕುರಿತು ಒಬ್ಬ ಸಿನಿಮಾ ಚಿತ್ರೀಕರಣ ಮಾಡಿದಾಗ ದೊಡ್ಡ ಅಗ್ನಿ ದುರಂತವೇ ಸಂಭವಿಸಿತು. ವಿದೇಶದಲ್ಲಿದ್ದ ಟಿಪ್ಪು ಖಡ್ಗ ತೆಗೆದುಕೊಂಡು ಬಂದ ವಿಜಯ್ ಮಲ್ಯ ದೇಶವನ್ನೇ ಬಿಟ್ಟುಹೋದ. ಸಿದ್ದರಾಮಯ್ಯನವರು ಟಿಪ್ಪು ಜಯಂತಿ ಮಾಡಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 30 ಸಾವಿರ ಮತಗಳ ಅಂತರದಿಂದ ಸೋತರು. ಈಗ ಇವರ(ಮುರುಘಾ ಶರಣರು) ಪಾಳಿ ಎಂದು ಟೀಕಿಸಿದರು. ಮುರುಘಾ ಮಠ, ಒಂದು ವೀರಶೈವ ಮಠ ಹಾಗೂ ಹಿಂದೂ ಮಠ. ಅಲ್ಲಿ ಶಿವಾಜಿ ಮಹಾರಾಜ್, ರಾಣಾ ಪ್ರತಾಪ್, ಬಸವಣ್ಣ, ಚೆನ್ನಮ್ಮ, ಆದಿ ಶಂಕರಾಚಾರ್ಯರು ಸೇರಿದಂತೆ ಹಿಂದೂ ದರ್ಮದ ಮಹನೀಯರ ಪ್ರತಿಮೆ ಸ್ಥಾಪಿಸಬಹುದಿತ್ತು. ಅವರನ್ನೆಲ್ಲಾ ಬಿಟ್ಟು ಲಕ್ಷಾಂತರ ಹಿಂದೂಗಳ ಕಗ್ಗೊಲೆ ಮಾಡಿದ ಟಿಪ್ಪು ಪ್ರತಿಮೆ ಇಟ್ಟಿದ್ದಾರೆ. ಅದರಲ್ಲೂ ಚಿತ್ರದುರ್ಗ, ಮದಕರಿ ನಾಯಕರು ಆಳಿದ ಪ್ರದೇಶ. ಅಲ್ಲಿ ಮದಕರಿ ನಾಯಕರು ಹಾಗೂ ಒನಕೆ ಓಬವ್ವ ಅವರ ಹೆಮ್ಮೆಯ ಇತಿಹಾಸವಿದೆ. ಆ ನೆಲದ ಮೇಲೆ ಟಿಪ್ಪು ಸುಲ್ತಾನ್ ಅಪ್ಪ(ಹೈದರಾಲಿ) ದಾಳಿ ಮಾಡಿದ್ದ. ಮದಕರಿ ನಾಯಕರ ವಂಶದವರೇ ಮಠಕ್ಕೆ ಸಾವಿರಾರು ಎಕರೆ ಭೂಮಿ ನೀಡಿದ್ದಾರೆ. ಹೀಗಿರುವಾಗ ಅಲ್ಲಿ ಟಿಪ್ಪು ಪ್ರತಿಮೆ ಮಾಡಿದ್ದು ಅನ್ಯಾಯ ಹಾಗೂ ಪಾಪದ ಕೆಲಸ ಎಂದು ಹೇಳಿದರು.

ಇಂದು ಮತ್ತೆ ಭಾರತ-ಪಾಕ್ ಸೆಣಸಾಟ

ಮುಖಾಮುಖಿಯಾಗುತ್ತಿರುವ ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯ ಕಣ್ತುಂಬಿಸಿಕೊಳ್ಳಲು ವಿಶ್ವದ ಕ್ರಿಕೆಟ್ ಅಭಿಮಾನಿಗಳಿಗೆ ಮತ್ತೊಂದು ಅವಕಾಶ ಲಭಿಸಿದ್ದು, ಪಂದ್ಯ ಭಾನುವಾರ ಸಂಜೆ 7.30ಕ್ಕೆ ಆರಂಭಗೊಳ್ಳಲಿದೆ. ಕಳೆದ ಭಾನುವಾರ ನಡೆದ ಪಂದ್ಯದಲ್ಲಿ ರೋಹಿತ್ ಬಳಗ ಪಾಕಿಸ್ತಾನವನ್ನು 5 ವಿಕೆಟ್‌ಗಳಿಂದ ಸೋಲಿಸಿತು. ನಂತರ ಹಾಂಗ್‌ಕಾಂಗ್ ತಂಡವನ್ನು 40 ರನ್‌ಗಳಿಂದ ಮಣಿಸಿದ ಭಾರತ 'ಎ' ಗುಂಪಿನ ಅಗ್ರ ತಂಡವಾಗಿ ಸೂಪರ್ 4 ಹಂತಕ್ಕೆ ಲಗ್ಗೆ ಹಾಕಿತ್ತು. ಅತ್ತ ಪಾಕಿಸ್ತಾನ ಭಾರತ ವಿರುದ್ಧದ ಮೊದಲ ಪಂದ್ಯ ಸೋತರೂ, ಹಾಂಗ್ ಕಾಂಗ್ ವಿರುದ್ಧ 155 ರನ್‌ಗಳ ಭಾರೀ ಅಂತರದ ಗೆಲುವು ದಾಖಲಿಸಿ 2ನೇ ತಂಡವಾಗಿ ಸೂಪರ್ 4 ಹಂತಕ್ಕೆ ಪ್ರವೇಶಿಸಿದೆ.

ಮೈಸೂರು ಮೇಯರ್ ಚುನಾವಣೆಗೆ ದಿನಗಣನೆ

ಬಿಜೆಪಿ, ಕಾಂಗ್ರೆಸ್ ಬಿಗಿ ನಿಲುವು; ಜೆಡಿಎಸ್ ಕಾದು ನೋಡುವ ತಂತ್ರ

● ಪಕ್ಷಗಳ ಮುಖಂಡರ ರಂಗ ಪ್ರವೇಶ ● ಅಂತಿಮ ಘಳಿಗೆಯಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ಸಾಧ್ಯತೆ





ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರ ಸಭೆ ನಡೆಯಿತು

ಮೈಸೂರು, ಸೆ.3(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಮೇಯರ್ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳೆರಡು ಸದ್ಯ ಸ್ವತಂತ್ರ ಸ್ಪರ್ಧೆಗೆ ನಿರ್ಧರಿಸಿದ್ದು, ಜೆಡಿಎಸ್ ಕಾದು ನೋಡುವ ತಂತ್ರ ಅನುಸರಿಸುತ್ತಿದೆ.

ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು, ಮುಖಂಡರು ಹಾಗೂ ಕಾರ್ಪೊರೇಟರ್‌ಗಳು ಶನಿವಾರ ಪ್ರತ್ಯೇಕ ಸಭೆ ನಡೆಸಿದ್ದು, ಈ ಬಾರಿ ಮೈತ್ರಿಗೆ ಮುಂದಾಗದೆ ಸ್ವತಂತ್ರವಾಗಿ ಸ್ಪರ್ಧಿಸುವ ತೀರ್ಮಾನಕ್ಕೆ ಬಂದಿದ್ದಾರೆ. ಈ ಅಚ್ಚರಿ ಬೆಳವಣಿಗೆಯಿಂದ ರಾಷ್ಟ್ರೀಯ ಪಕ್ಷಗಳಿಂದ ಮೈತ್ರಿ ಆಹ್ವಾನದ ನಿರೀಕ್ಷೆಯಲ್ಲಿದ್ದ ಜೆಡಿಎಸ್ ಎಚ್ಚರಿಕೆಯಿಂದ ಹೆಜ್ಜೆ ಇಡಲು ಚಿಂತನೆ ನಡೆಸಿದೆ.

ಬಿಜೆಪಿ ಸಭೆ: ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಮೈಸೂರು ಉಸ್ತುವಾರಿ ನಿರ್ಮಲ್ ಕುಮಾರ್ ಸುರಾನಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೇಯರ್ ಚುನಾವಣೆ ಸಂಬಂಧ ಚರ್ಚೆ ನಡೆಸಲಾಯಿತು. ಸಭೆಯಲ್ಲಿದ್ದ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಪಕ್ಷದ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೇಯರ್ ಸುನಂದಾ ಪಾಲನೇತ್ರ, ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಪೊರೇಟರ್‌ಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಅಂತಿಮವಾಗಿ ಮುಂಬರುವ ವಿಧಾನಸಭಾ ಚುನಾವಣೆ ಹಾಗೂ ನಗರದ ಅಭಿವೃದ್ಧಿ ದೃಷ್ಟಿಯಿಂದ ಯಾವ ಪಕ್ಷದೊಂದಿಗೂ ಮೈತ್ರಿ ಮಾಡಿಕೊಳ್ಳದೆ ಸ್ವತಂತ್ರವಾಗಿ ಚುನಾವಣೆ ಎದುರಿಸಲು ತೀರ್ಮಾನ ಕೈಗೊಳ್ಳಲಾಗಿದೆ.

ಪಾಲಿಕೆಯಲ್ಲಿ ಕಾರ್ಪೊರೇಟರ್‌ಗಳು, ಸಂಸದರು, ಶಾಸಕರು ಸೇರಿ ಬಿಜೆಪಿ 27 ಸಂಖ್ಯಾಬಲ ಹೊಂದಿದೆ. ಸ್ವತಂತ್ರ ಸ್ಪರ್ಧೆಗೆ ತೀರ್ಮಾನಿಸಲಾಗಿದೆಯಾದರೂ ಮೇಯರ್ ಹಾಗೂ ಉಪಮೇಯರ್ ಅಭ್ಯರ್ಥಿಯನ್ನು ಸೆ.5ರ ಸಭೆಯಲ್ಲಿ ಅಂತಿಮಗೊಳಿಸಲಾಗುವುದು ಎಂದು ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.

'ಕೈ' ನಡೆಯೂ ಸ್ಪಷ್ಟ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಹಾಗೂ ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ನಗರ ಪಾಲಿಕೆಯ ಕಾಂಗ್ರೆಸ್ ನಾಯಕ ಅಯೂಬ್ ಖಾನ್ ಕಚೇರಿಯಲ್ಲಿ ಸಭೆ ನಡೆಸಿ, ಸಮಾಲೋಚನೆ ನಡೆಸಲಾಯಿತು. ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್ ಸೇರಿದಂತೆ ಮಾಜಿ ಮೇಯರ್‌ಗಳು, ಕಾರ್ಪೊರೇಟರ್‌ಗಳು, ಪಕ್ಷದ ಪದಾಧಿಕಾರಿಗಳು ಸಭೆಯಲ್ಲಿ ಅಭಿಪ್ರಾಯ ತಿಳಿಸಿದರು. ಕಳೆದ ಬಾರಿ ಜೆಡಿಎಸ್‌ನಿಂದಾದ ಕಹಿ ಅನುಭವ ಮರುಕಳಿಸದಂತೆ ಸ್ವತಂತ್ರವಾಗಿ ಸ್ಪರ್ಧಿಸುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಮಾಜಿ ಮೇಯರ್ ಅಯೂಬ್ ಖಾನ್ ಪ್ರತಿಕ್ರಿಯಿಸಿ, ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ಮೇಯರ್ ಹಾಗೂ ಉಪ ಮೇಯರ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ, ಅವಕಾಶ ಸಿಕ್ಕರೆ ಮುಂದುವರೆಯುವುದು ಇಲ್ಲವೇ ಪ್ರತಿಪಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಲು ತೀರ್ಮಾನಿಸಲಾಗಿದೆ. ಮೇಯರ್ ಹಾಗೂ ಉಪ ಮೇಯರ್‌ಗೆ ಏಳೆಂಟು ಆಕಾಂಕ್ಷಿಗಳಿದ್ದು, ಸೆ.5ರಂದು ಮತ್ತೊಂದು ಸುತ್ತಿನ ಸಭೆ ನಡೆಸಿ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಜೆಡಿಎಸ್ ಎಚ್ಚರಿಕೆ ನಡೆ: ಅವಧಿ ಮಧ್ಯೆ ನಡೆದ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವಿನ ಮೈತ್ರಿ ಮುರಿದು ಬಿದ್ದಿತ್ತು. ಆ ಚುನಾವಣೆಯಲ್ಲಿ ಜೆಡಿಎಸ್ ತಟಸ್ಥ ನಿಲುವು ಅನುಸರಿಸಿದ್ದು ಬಿಜೆಪಿಗೆ ವರವಾಗಿತ್ತು. ಬಿಜೆಪಿಯ ಸುನಂದಾ ಪಾಲನೇತ್ರ ಮೇಯರ್ ಆಗಿ ಆಯ್ಕೆಯಾದರು. ಈ ನಿಟ್ಟಿನಲ್ಲಿ ಉಭಯ ಪಕ್ಷಗಳ ನಡುವೆ ಮಾತುಕತೆಯಾಗಿತ್ತು ಎನ್ನಲಾಗಿತ್ತಾದರೂ ಅದು ಬಹಿರಂಗವಾಗಿರಲಿಲ್ಲ. ಆದರೂ ಈ ಬಾರಿ ಜೆಡಿಎಸ್ ಅಧಿಕಾರಕ್ಕೇರಲು ಬಿಜೆಪಿ ಬೆಂಬಲ ನೀಡಲಿದೆ ಎಂದು ಚರ್ಚೆ ನಡೆದಿತ್ತು. ಆದರೆ ಬಿಜೆಪಿ ಸ್ವತಂತ್ರ ಸ್ಪರ್ಧೆಗೆ ನಿರ್ಧರಿಸಿರುವುದರಿಂದ ಬಿಜೆಪಿ-ಜೆಡಿಎಸ್ ಮೌಖಿಕ ಒಪ್ಪಂದವೂ ಮುರಿದು ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ. ಇದರೊಂದಿಗೆ ಅಂತಿಮ ಕ್ಷಣದಲ್ಲಿ ಮತ್ತೆ ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿಯಾಗುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಸಾರ್ವತ್ರಿಕ ಚುನಾವಣಾ ವರ್ಷವಾಗಿರುವುದರಿಂದ ಜೆಡಿಎಸ್ ಎಚ್ಚರಿಕೆಯಿಂದ ಹೆಜ್ಜೆ ಇಡಲಿದೆ. ಚುನಾವಣಾ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ಶಾಸಕ ಸಾ.ರಾ.ಮಹೇಶ್ ಮೇಯರ್ ಚುನಾವಣೆ ಸಂಬಂಧಿತ ಬೆಳವಣಿಗೆ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತಂದು ಚರ್ಚೆ ನಡೆಸಿದ ಬಳಿಕ ಕಾರ್ಯತಂತ್ರ ರೂಪಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸೆಳೆಯುವ ತಂತ್ರ: ಈ ಬಾರಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಸ್ವತಂತ್ರ ಸ್ಪರ್ಧೆಗೆ ನಿರ್ಧರಿಸಿವೆ. ಕಾದು ನೋಡುವ ತಂತ್ರ ಅನುಸರಿಸುತ್ತಿರುವ ಜೆಡಿಎಸ್ ಕಡೇವರೆಗೂ ಮೇಯರ್ ಸ್ಥಾನಕ್ಕೆ ಕಸರತ್ತು ನಡೆಸುವುದರಲ್ಲಿ ಸಂದೇಹವಿಲ್ಲ. ಒಂದು ವೇಳೆ ಬಿಜೆಪಿ ಮೈತ್ರಿಗೆ ಮುಂದಾಗದೆ ಸ್ವತಂತ್ರ ಸ್ಪರ್ಧೆಯ ನಿರ್ಧಾರಕ್ಕೆ ಬದ್ಧವಾದರೆ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಮೈತ್ರಿ ಆಗಬಹುದು. ಆಗ ಹಿಂದಿನ ಒಪ್ಪಂದದಂತೆ ಕಾಂಗ್ರೆಸ್‌ಗೆ ಮೇಯರ್ ಸ್ಥಾನ ಬಿಟ್ಟುಕೊಡಬಹುದು ಇಲ್ಲವೇ ಕಳೆದ ಬಾರಿಯಂತೆ ತಟಸ್ಥವಾಗಿ ಉಳಿಯಬಹುದು. ಅಂತಹ ಸನ್ನಿವೇಶ ಸೃಷ್ಟಿಯಾದಲ್ಲಿ 27 ಸಂಖ್ಯಾಬಲವುಳ್ಳ ಬಿಜೆಪಿ ಹಾಗೂ 26ಕ್ಕೆ ಸಂಖ್ಯಾಬಲ ಹೆಚ್ಚಿಸಿಕೊಂಡಿರುವ ಕಾಂಗ್ರೆಸ್ ನಡುವೆ ಭಾರೀ ಪೈಪೋಟಿ ಏರ್ಪಡಲಿದೆ. ಗೆಲುವಿಗೆ ಬೇಕಾದಷ್ಟು ಸದಸ್ಯರನ್ನು ಸೆಳೆದುಕೊಳ್ಳುವ ನಿಟ್ಟಿನಲ್ಲಿ ಎರಡೂ ಪಕ್ಷಗಳು ತಂತ್ರಗಾರಿಕೆ ರೂಪಿಸಲಿವೆ ಎಂದು ತಿಳಿದುಬಂದಿದೆ.

ಹೊಸ ಆರು ಮತದಾರರು...

ಮೇಯರ್ ಆಗಿದ್ದ ಜೆಡಿಎಸ್‌ನ ರುಕ್ಮಿಣಿ ಮಾದೇಗೌಡರ ಸದಸ್ಯತ್ವ ರದ್ದಾದ ಬಳಿಕ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ ರಜನಿ ಅಣ್ಣಯ್ಯ, ಬಿಜೆಪಿ ನಾಮನಿರ್ದೇಶಿತ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ ಹಾಗೂ ಜೆಡಿಎಸ್‌ನ ಸಿ.ಎನ್.ಮಂಜೇಗೌಡ, ಮಂಡ್ಯದಿಂದ ಆಯ್ಕೆಯಾದ ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ, ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ ಸೇರಿ ಒಟ್ಟು ಆರು ಮಂದಿ ಹೊಸಬರು ಈ ಬಾರಿ ಮೇಯರ್ ಹಾಗೂ ಉಪಮೇಯರ್ ಚುನಾವಣೆಯಲ್ಲಿ ಮತ ಚಲಾಯಿಸಲಿದ್ದಾರೆ.

ಜೆಡಿಎಸ್‌ನಲ್ಲಿ ಅಚಲ ವಿಶ್ವಾಸ

ಮೈಸೂರು ಮಹಾನಗರ ಪಾಲಿಕೆಯಲ್ಲಿ ಪ್ರಪ್ರಥಮ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಲು ಅವಕಾಶ ಮಾಡಿಕೊಟ್ಟಿದ್ದು ಜೆಡಿಎಸ್. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಬಿಜೆಪಿ ಮುಖಂಡರೊಂದಿಗೆ ಶಾಸಕ, ಮಾಜಿ ಸಚಿವ ಸಾ.ರಾ.ಮಹೇಶ್ ಕಚೇರಿಗೆ ಮೂರು ಬಾರಿ ಭೇಟಿ ನೀಡಿ, ಒಮ್ಮೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದರು. ಅಲ್ಲದೆ ಅಂದಿನ ರಾಜಕೀಯ ಬೆಳವಣಿಗೆಯಿಂದಾಗಿ ಮೇಯರ್ ಚುನಾವಣೆಯಲ್ಲಿ ಜೆಡಿಎಸ್ ತಟಸ್ಥ ನಿಲುವು ತಾಳಿದ್ದರ ಪರಿಣಾಮ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಲು ಸಾಧ್ಯವಾಯಿತು. ಜೆಡಿಎಸ್ ಸಹಾಯ ಕೇಳಿದ ಸಂದರ್ಭದಲ್ಲಿ ಸಚಿವ ಎಸ್.ಟಿ.ಸೋಮಶೇಖರ್, ಒಮ್ಮೆ ನಮಗೆ ಅವಕಾಶ ಮಾಡಿಕೊಟ್ಟರೆ ಮುಂದಿನ 2 ಅವಧಿ(ಒಂದೂವರೆ ವರ್ಷ) ಜೆಡಿಎಸ್‌ಗೆ ಬೆಂಬಲ ನೀಡುವ ಭರವಸೆ ನೀಡಿದ್ದರು. ಅಂದಿನ ಮಾತಿನಂತೆ ಈ ಚುನಾವಣೆಯಲ್ಲಿ ಬೆಂಬಲ ನೀಡಬೇಕೆಂದು ಬಿಜೆಪಿ ಮುಖಂಡರಲ್ಲಿ ಜೆಡಿಎಸ್ ಬೇಡಿಕೆ ಇಟ್ಟಿದೆ. ಒಂದು ವೇಳೆ ಮಾತಿನಂತೆ ನಡೆದುಕೊಳ್ಳದಿದ್ದರೆ ಈ ಹಿಂದೆ ತಮಗೆ ತಿರುಮಂತ್ರ ಹಾಕಲು ಮುಂದಾಗಿದ್ದ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿದಂತೆ ಬಿಜೆಪಿಗೂ ಪಾಠ ಕಲಿಸಲು ಜೆಡಿಎಸ್ ಸಿದ್ಧವಾಗಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರಣರಾದಂತೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ಪ್ರಪ್ರಥಮ ಬಾರಿಗೆ ಬಿಜೆಪಿ ಮೇಯರ್ ಗದ್ದುಗೆ ಏರಲು ಶಾಸಕ ಸಾ.ರಾ.ಮಹೇಶ್ ಅವಕಾಶ ಮಾಡಿಕೊಟ್ಟಿದ್ದರು. ಸದ್ಯದ ಬೆಳವಣಿಗೆಯನ್ನು ಗಮನಿಸಿರುವ ಅವರು ಈ ಬಾರಿ ಮೇಯರ್ ಸ್ಥಾನ ಹಿಡಿಯಲು ಎಲ್ಲಾ ಕಾರ್ಯತಂತ್ರಕ್ಕೆ ಮುಂದಾಗಿದ್ದಾರೆ. ಜೆಡಿಎಸ್‌ನ ಮೇಯರ್ ಆಕಾಂಕ್ಷಿಗಳಲ್ಲಿ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಎಂ.ಡಿ.ನಾಗರಾಜ್ ಮುಂಚೂಣಿಯಲ್ಲಿದ್ದು, ಚುನಾವಣೆ ಹಿಂದಿನ ದಿನ(ಸೆ.5) ಅಭ್ಯರ್ಥಿಯನ್ನು ಪ್ರಕಟಿಸುವ ಸಾಧ್ಯತೆ ಇದೆ.

ಮಕ್ಕಳಿಗೆ ಮೊಬೈಲ್ ಮೋಹ ಬಿಡಿಸಿ ಪುಸ್ತಕ ಪ್ರೇಮ ಬೆಳೆಸಿ

ಮೈಸೂರು, ಸೆ.3(ಎಸ್‌ಪಿಎನ್)– ಮಕ್ಕಳಿಗೆ ಮೊಬೈಲ್ ಮೋಹ ಬಿಡಿಸಿ, ಪುಸ್ತಕ ಪ್ರೇಮ ಬೆಳೆಸಿ. ಏಕೆಂದರೆ ನಾನು ಬೀಚೀ ಅವರ ಪುಸ್ತಕವನ್ನು ಓದಿ 11 ದೇಶವನ್ನು ಸುತ್ತಿ 4,500 ಸಾವಿರ ಕಾರ್ಯಕ್ರಮ ನೀಡಲು ಸಾಧ್ಯವಾಗಿದೆ ಎಂದು ಹಾಸ್ಯಕಲಾವಿದ ಗಂಗಾವತಿ ಪ್ರಾಣೇಶ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪದಲ್ಲಿ ಮೈಸೂರು ಗಣೇಶ ಉತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಗಣೇಶ ಉತ್ಸವದ ಐದನೇ ದಿನವಾದ ಇಂದು ಹಾಸ್ಯ ಸಂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಾನು ಕೂಡ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತ. ಹಾಗಾಗಿ ಸಂಘ ನನಗೆ ಸಂಸ್ಕಾರ ಕಲಿಸಿಕೊಟ್ಟಿದೆ. ನನ್ನ ಹಾಸ್ಯ ಕಾರ್ಯಕ್ರಮದಲ್ಲಿ ಎಂದಿಗೂ ಅಶ್ಲೀಲ ಪದಗಳನ್ನು ಬಳಸದೇ ಕಾರ್ಯಕ್ರಮ ನಡೆಸಿಕೊಡುತ್ತೇನೆ. ಮೈಸೂರಿನ ಜನತೆ ತಮ್ಮತಮ್ಮ ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸವನ್ನು ಚಿಕ್ಕವಯಸ್ಸಿನಿಂದಲೇ ಬೆಳೆಸಬೇಕು ಎಂದು ಸಲಹೆ ನೀಡಿದರು.



ಕಾರ್ಯಕ್ರಮವೊಂದರಲ್ಲಿ ಹೆಡಗೆವಾರು ಅವರು ಹೆಣ್ಣನ್ನು ರಮಣಿ ಎಂದು ನಿರೂಪಕರು ಹೋಲಿಕೆ ಮಾಡಿದ್ದರು. ಇದನ್ನು ಗಮನಿಸಿದ ಹೆಡಗೆವಾರು ಅವರು ರಮಣಿ ಹೆಸರಿನ ಬದಲು 'ದೇವಿ' ಎಂಬ ಪದ ಸೇರಿಸುವಂತೆ ಸೂಚಿಸಿದ್ದ ಪ್ರಸಂಗವನ್ನು ಗಂಗಾವತಿ ಪ್ರಾಣೇಶ್ ಸ್ಮರಿಸಿದರು.

ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಾಹಿತಿಗಳಿದ್ದಾರೆ. ಅದರಲ್ಲೂ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪನವರು ವಾಸವಿರುವ ಈ ಊರಿನಲ್ಲಿ ಓದಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಮಕ್ಕಳಿಗೆ ವಾಟ್ಸಾಪ್ ಇತರೆ ಸಾಮಾಜಿಕ ಜಾಲತಾಣಗಳ ಬಳಕೆಯ ಮೋಹ ಬೆಳೆಸಬೇಡಿ ಎಂದರಲ್ಲದೆ, ನಿಮ್ಮ ಮೊಬೈಲ್ ವಾಟ್ಸಾಪ್‌ಗೆ ಬರುವ ಸಂದೇಶಗಳನ್ನು ನಂತರ ಡಿಲೀಟ್ ಮಾಡಿ ಎಂದು ತಿಳಿಸಿದರು.

ಹೆಣ್ಣು ಮಕ್ಕಳಿಗೆ ದೈವಭಕ್ತಿ ಜಾಸ್ತಿ. 'ಬೆಳಗ್ಗೆ ಯುವತಿಯರು ದೇವರ ಮುಂದೆ ನಮಗೆ ಸಾಫ್ಟ್‌ವೇರ್ ವರ ಕೊಡು ಎಂದು ಕೇಳಿಕೊಳ್ಳುತ್ತಾರೆ'. 'ಮಧ್ಯಾಹ್ನ ಆಂಟಿಯರು ಬಂದು ದೇವರ ಹತ್ತಿರ ಸಾಫ್ಟ್‌ವೇರ್ ಅಳಿಯ ಕೊಡು ಎಂದು ಕೇಳುತ್ತಾರೆ'. 'ಬ್ರಿಟಿಷರು ಭಾರತಕ್ಕೆ ಬರುವಾಗ ಒಬ್ಬನೇ ಒಬ್ಬ ಸೈನಿಕರನ್ನು ಕರೆತರಲಿಲ್ಲ. ಏಕೆ ಗೊತ್ತೇ ಅವರಿಗೆ ಗೊತ್ತಿತ್ತು ಇಲ್ಲಿರುವ ದೇಶದ್ರೋಹಿಗಳಿಂದ ಸೈನ್ಯ ಕಟ್ಟಬಹುದು' ಅಂತ. ಇಂತಹ ಸಂದೇಶಗಳನ್ನು ವಾಟ್ಸಾಪ್ ಗ್ರೂಪ್‌ನಲ್ಲಿ ಓದಿ ಎಂಜಾಯ್ ಮಾಡುವಂತೆ ಸಲಹೆ ನೀಡಿದರು.

'ಗಾಂಧೀಜಿ ಹೇಳಿದರು ಸತ್ಯವನ್ನೇ ಹೇಳ್ರಿ ಅಂತ, ಇನ್ನೊಂದು ಕುಡಿಬೇಡಿ' ಅಂತ. ಆದರೆ, ನಮ್ಮ ದೇಶದಲ್ಲಿ ಕುಡಿದರೇನೇ ಸತ್ಯ ಹೇಳೋದು' ಎಂಬ ಹಾಸ್ಯಕ್ಕೆ ಸಭಿಕರು ಬಿದ್ದುಬಿದ್ದು ನಕ್ಕರು. ಹೀಗೆ 24 ನಿಮಿಷಗಳ ಕಾಲ ಹಾಸ್ಯದ ಹೊನಲು ಹರಿಸಿದರು. ಇವರೊಂದಿಗೆ ಹಾಸ್ಯ ಕಲಾವಿದರಾದ ಬಸವರಾಜು ಮಾಮನಿ, ನರಸಿಂಹ ಜೋಷಿ ಕಾರ್ಯಕ್ರಮ ನಡೆಸಿಕೊಟ್ಟರು. ನಂತರ ಲಯತರಂಗ ತಂಡ ಮತ್ತು ವಾರಿಜಾಶ್ರೀ ವೇಣು ಗೋಪಾಲ್ ಅವರಿಂದ ಸಂಗೀತ ಗಾಯನ ನಡೆಸಿಕೊಟ್ಟರು. ಸೆ.4ರಂದು 3 ಗಂಟೆಗೆ ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನೆ ಏರ್ಪಡಿಸಲಾಗಿದೆ.

ಸೋಲಿನೊಂದಿಗೆ ಟೆನಿಸ್‌ಗೆ ವಿದಾಯ ಹೇಳಿದ ಸೆರೆನಾ ವಿಲಿಯಮ್ಸ್

ವಾಷಿಂಗ್ಟನ್, ಸೆ.3– ಯುಎಸ್ ಓಪನ್‌ನ ಮೂರನೇ ಸುತ್ತಿನಲ್ಲಿ ಸೋಲುವ ಮೂಲಕ ಅಮೆರಿಕದ ಟೆನಿಸ್ ಲೆಜೆಂಡ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಟೆನಿಸ್‌ಗೆ ವಿದಾಯ ಹೇಳಿದ್ದಾರೆ.



ಯುಎಸ್ ಓಪನ್ ಟೂರ್ನಿ ಆರಂಭಕ್ಕೂ ಮುನ್ನ ಇದು ನನ್ನ ಕೊನೆಯ ಟೆನಿಸ್ ಟೂರ್ನಿಯಾಗಿದ್ದು, ಈ ಟೂರ್ನಿಯ ಬಳಿಕ ನಿವೃತ್ತಿ ಘೋಷಿಸುವುದಾಗಿ ಈ ಹಿಂದೆಯೇ ಸೆರೆನಾ ಘೋಷಿಸಿದ್ದರು.

ಯುಎಸ್ ಓಪನ್ 3ನೇ ಸುತ್ತಿನಲ್ಲಿ ಆಸ್ಟ್ರೇಲಿಯಾದ ಅಜ್ಲಾ ಟೊಮಿಲ್ಜಾನೋವಿಕ್ ವಿರುದ್ಧ ಸೋಲುವ ಮೂಲಕ ಟೂರ್ನಿಯಿಂದ ಹೊರಬಿದ್ದರು. ವಿಶ್ವ ಟೆನಿಸ್ ಪ್ರಿಯರ ಮನಗೆದ್ದಿದ್ದ ಲೆಜೆಂಡ್ ಆಟಗಾರ್ತಿ ಭಾವುಕರಾಗಿ ಟೆನಿಸ್ ಅಂಗಳಕ್ಕೆ ಗುಡ್‌ಬೈ ಹೇಳಿದ್ದಾರೆ.

ಸೆ.8ರಿಂದ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ

ವಿಜ್ಞಾನ ಕ್ಷೇತ್ರದ ಪ್ರಚಲಿತ ಬೆಳವಣಿಗೆ ಕುರಿತು ಗೋಷ್ಠಿ, ಸಂವಾದ, ವಸ್ತು ಪ್ರದರ್ಶನವೂ ಸೇರಿದಂತೆ ವಿಜ್ಞಾನ ಪ್ರಗತಿ ಸಾರುವ ನಾನಾ ಕಾರ್ಯಕ್ರಮ

ಮೈಸೂರು,ಸೆ.3(ಪಿಎಂ)– ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನೆರವಿನ ಸಂಸ್ಥೆಯಾದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ ಸೆ.8ರಿಂದ 10ರವರೆಗೆ ಮೂರು ದಿನ ಮೈಸೂರಿನಲ್ಲಿ ನಡೆಯಲಿದ್ದು, ಪರಿಷತ್ತಿನ ರಾಜ್ಯ ಮಟ್ಟದ ಸಮ್ಮೇಳನ ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ಆಯೋಜನೆಗೊಂಡಿದೆ.

ಪ್ರತಿ ವರ್ಷ ರಾಜ್ಯದ ವಿವಿಧ ಸ್ಥಳಗಳಲ್ಲಿ ಆಯೋಜನೆಗೊಳ್ಳುವ ಈ ಸಮ್ಮೇಳನವು ವಿಜ್ಞಾನ ಕ್ಷೇತ್ರದ ಪ್ರಚಲಿತ ಬೆಳವಣಿಗೆ ಮೇಲೆ ಬೆಳಕು ಚೆಲ್ಲುತ್ತಾ ಬಂದಿದೆ. ಈ ಬಾರಿ ಮೈಸೂರಿನಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಅಂತಿಮವಾಗಿ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆ ಹೊಸದಾಗಿ ಸೇರ್ಪಡೆಯಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಸದಸ್ಯ ಹಾಗೂ ಸಮ್ಮೇಳನದ ರಾಜ್ಯ ಸಂಯೋಜಕ ಎ.ಎನ್.ಮಹೇಶ್, ಸಮ್ಮೇಳನದ ಆತಿಥ್ಯವನ್ನು ಪರಿಷತ್ತಿನ ಮೈಸೂರು ಜಿಲ್ಲಾ ಸಮಿತಿ ವಹಿಸಿಕೊಂಡಿದ್ದು, ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸಮ್ಮೇಳನ ನಡೆಯಲಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮೈಸೂರು ವಿವಿ ಹಾಗೂ ಮುಕ್ತ ವಿವಿ ಸಂಯುಕ್ತಾಶ್ರಯದಲ್ಲಿ ಈ ಸಮ್ಮೇಳನ ಜರುಗಲಿದೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಮ್ಮ ಕಚೇರಿಯಲ್ಲಿ ಶನಿವಾರ ಸೆ.8ರಿಂದ ಮೈಸೂರಿನಲ್ಲಿ ನಡೆಯಲಿರುವ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದ ಪೋಸ್ಟರ್ ಬಿಡುಗಡೆ ಮಾಡಿದರು.

ಪರಿಷತ್ತಿನ ಸದಸ್ಯರು, ವಿಜ್ಞಾನಾಸಕ್ತರು, ವಿಜ್ಞಾನಿಗಳು, ಶಿಕ್ಷಣ ತಜ್ಞರು ಹಾಗೂ ಸಂವಹನ ತಜ್ಞರು ವಿಜ್ಞಾನ ಕ್ಷೇತ್ರದಲ್ಲಿನ ಪ್ರಚಲಿತ ವಿದ್ಯಮಾನಗಳ ಕುರಿತು ಚರ್ಚಿಸಿ, ವೈಜ್ಞಾನಿಕ ಸಂಗತಿಗಳನ್ನು ಸರಳೀಕೃತ ರೂಪದಲ್ಲಿ ಸಾಮಾನ್ಯ ಜನತೆಗೆ ಅರ್ಥೈಸುವಲ್ಲಿ ಸಮ್ಮೇಳನ ಮಹತ್ವದ ಪಾತ್ರ ವಹಿಸಲಿದೆ. ವಿವಿಧ ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಮಂದಿ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. 8 ಗೋಷ್ಠಿಗಳು, 17 ಉಪನ್ಯಾಸಗಳು ಜರುಗಲಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆಗೈದ ಪರಿಣಿತರು ಉಪನ್ಯಾಸಗಳನ್ನು ನೀಡಲಿದ್ದಾರೆ. ವಿಜ್ಞಾನ ಪದ್ಮಶ್ರೀ ಪುರಸ್ಕೃತ ಹಿರಿಯ ವಿಜ್ಞಾನಿಯೂ ಆದ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಸಮ್ಮೇಳನಾ ಅಧ್ಯಕ್ಷತೆ ವಹಿಸಲಿದ್ದಾರೆ. ಈವರೆಗೆ ನಡೆದ ಸಮ್ಮೇಳನಗಳಲ್ಲಿ ಸಮ್ಮೇಳನಾ ಅಧ್ಯಕ್ಷತೆ ಪರಿಕಲ್ಪನೆ ಇರಲಿಲ್ಲ. ಇದೇ ಮೊದಲ ಬಾರಿಗೆ ಇದನ್ನು ಸೇರ್ಪಡೆ ಮಾಡಲಾಗಿದೆ ಎಂದರು.

ಸೆ.8ರಂದು ಬೆಳಗ್ಗೆ 10ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಮ್ಮೇಳನ ಉದ್ಘಾಟಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಮೊದಲ ದಿನ ಎರಡು, ಎರಡನೇ ದಿನ ನಾಲ್ಕು ಕೊನೆಯ ದಿನ ಎರಡು ಗೋಷ್ಠಿಗಳು ನಡೆಯಲಿವೆ. ಅಲ್ಲದೆ, ವೈಜ್ಞಾನಿಕ ಚಟುವಟಿಕೆಗಳು, ಪುಸ್ತಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ತಿಳಿಸಿದರು.

'ವಿಜ್ಞಾನ ಶಿಕ್ಷಣ– ವಿಶೇಷವಾಗಿ ಭೌತ ವಿಜ್ಞಾನ ಒಳಗೊಂಡಂತೆ ಕೆಲವು ಅನುಭವಗಳು', 'ಆನಂದಕರ ಅಣುಗಣ', 'ಶಾಂತಿಗಾಗಿ ವಿಜ್ಞಾನ', 'ವಿಜ್ಞಾನ ಮತ್ತು ಮೂಢನಂಬಿಕೆಗಳು', 'ಸಾಗರದಲ್ಲಿ ಪ್ಲಾಸ್ಟಿಕ್ ಮಾಲಿನ್ಯ', 'ವೈವಿಧ್ಯ-ಜೀವ ಜಗತ್ತಿನ ಜೀವಾಳ' ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ ಎಂದು ತಿಳಿಸಿದರು.

ಸೆ.10ರಂದು ಮಧ್ಯಾಹ್ನ 2ಕ್ಕೆ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಲಿದ್ದು, ಉನ್ನತ ಶಿಕ್ಷಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವಥನಾರಾಯಣ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಇದೇ ವೇಳೆ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಾಲ್ವರಿಗೆ 'ಡಾ.ಹೆಚ್.ನರಸಿಂಹಯ್ಯ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಂದ ತಲಾ ಒಬ್ಬರನ್ನು ಪ್ರಶಸ್ತಿಗೆ ಆಯ್ಕೆ ಮಾಡಲು ನಿರ್ಧರಿಸಿದ್ದು, ಅದರಂತೆ ಮೈಸೂರು ವಿಭಾಗದಿಂದ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಹರಿಪ್ರಸಾದ್ ಆಯ್ಕೆಯಾಗಿದ್ದಾರೆ. ಉಳಿದ ಮೂರು ವಿಭಾಗಗಳಿಂದ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಮಾಜಿ ಮುಖ್ಯಮಂತ್ರಿಯೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು.

> ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು ಆನ್‌ಲೈನ್ ಲಿಂಕ್ (https://forms.gle/v45Lm5ad26uJGsA7A) ಮೂಲಕ 250 ರೂ. ನೋಂದಣಿ ಶುಲ್ಕವನ್ನು ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ ಬ್ಯಾಂಕ್ ಖಾತೆ (Canara bank, account no. 11006541 6285, IFSC-CNRB 0000538) ನೆಫ್ಟ್, ಆರ್‌ಟಿಜಿಎಸ್, ಫೋನ್ ಪೇ, ಗೂಗಲ್ ಪೇ ಮೂಲಕ ಕಳುಹಿಸಿ ನೋಂದಣಿ ಮಾಡಿಕೊಳ್ಳಬಹುದು. ಸೆ.5ರೊಳಗೆ ನೋಂದಣಿ ಮಾಡಿಕೊಂಡವರಿಗೆ ವಸತಿ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಹೆಚ್ಚಿನ ವಿವರಗಳಿಗೆ ಮೊ. 98444 05284, 81055 03863 ಅನ್ನು ಸಂಪರ್ಕಿಸಬಹುದು.
>
> -ಈ.ಬಸವರಾಜು, ಪರಿಷತ್ತಿನ ಖಜಾಂಚಿ

ಸರಗೂರಲ್ಲಿ ವಿವೇಕಾ ಸ್ಕೂಲ್ ಆಫ್ ಎಕ್ಸ್‌ಲೆನ್ಸ್ ಸೈನಿಕ ಶಾಲೆ ಉದ್ಘಾಟನೆ

ವಿವೇಕಾನಂದರ ಆಶಯದಂತೆ ಶಿಕ್ಷಣದಲ್ಲಿ ಪರಿವರ್ತನೆ ಅಗತ್ಯ

ಶಿಕ್ಷಣ ಸಚಿವ ಬಿ.ಸಿ.ನಾಗೇಶ್

ಸರಗೂರು, ಸೆ.3– ಸ್ವಾಮಿ ವಿವೇಕಾನಂದರ ಆಶಯದಂತೆ ಶಿಕ್ಷಣದಲ್ಲಿ ಪರಿವರ್ತನೆಯಾಗಬೇಕು. ಶಿಕ್ಷಣದ ಮೂಲಕ ಜನರಲ್ಲಿ ಜಾಗೃತಿ ಮೂಡಬೇಕು. ಯಾವ ಜ್ಞಾನದ ಮೂಲಕ ಭಾರತ ಪ್ರಪಂಚವನ್ನೇ ಗೆದ್ದಿತ್ತೋ ಆ ರೀತಿಯ ಜ್ಞಾನ ಮುಂದಿನ ಪೀಳಿಗೆಯ ಮಕ್ಕಳಿಗೆ ಬರಬೇಕು ಎಂಬ ಅವರ ಯೋಚನೆಗಳು ಕಾರ್ಯರೂಪಕ್ಕೆ ಬರಲು ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಬೇಕಾಯಿತು ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗ ಸಂಸ್ಥೆಯಾದ ವಿವೇಕಾ ಸ್ಕೂಲ್ ಆಫ್ ಎಕ್ಸಲೆನ್ಸ್ ಕಾಲೇಜಿನ ಆವರಣದಲ್ಲಿ ವಿವೇಕಾ ಸ್ಕೂಲ್ ಆಫ್ ಎಕ್ಸೆಲೆನ್ಸ್ ಸೈನಿಕ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಜಾಗೃತಿ ಸಾಧ್ಯ. ಆದ್ದರಿಂದ ಈ ದೇಶದ ಶಿಕ್ಷಣ ಪದ್ಧತಿ ಬದಲಾಯಿಸಬೇಕು ಎಂದು ತೀರ್ಮಾನಿಸಿ 2020ರಲ್ಲಿ ಬದಲಾಯಿಸಲಾಯಿತು ಎಂದರು.

ಯಾರು ತಮ್ಮ ವೈಯಕ್ತಿಕ ಆಸೆಗಾಗಿ ರಾಜಕೀಯಕ್ಕೆ ಬಂದರೋ ಅವರು ದೇಶಭಕ್ತರಾಗಿದ್ದರು. ಯಾರು ಈ ದೇಶ ಒಗ್ಗಟ್ಟಾಗಿರಬೇಕು. ದೇಶ ವಿಶ್ವದ ಗುರು ವಾಗಬೇಕು ಎಂದು ಆಸೆ ಪಟ್ಟರೋ ಅವರು ದೇಶದ್ರೋಹಿ ಗಳಾಗಿದ್ದಾರೆ. ಇದಕ್ಕೆ ನಮ್ಮ ದೇಶದಲ್ಲಿದ್ದ ಶಿಕ್ಷಣ ಪದ್ಧತಿ ಕಾರಣ. ಆದ್ದರಿಂದ ನಮ್ಮ ಶಿಕ್ಷಣ ನೀತಿ ಬದಲಾಗ ಬೇಕೆಂದು ತಜ್ಞರ ಅಭಿಪ್ರಾಯದಂತೆ ಹೊಸ ಶಿಕ್ಷಣ ನೀತಿ ಜಾರಿಗೆ ತರಲಾಯಿತು ಎಂದರು.

ಹೊಸ ಶಿಕ್ಷಣ ನೀತಿಯಲ್ಲಿ ಮಗುವಿಗೆ ತನಗಿಷ್ಟ



ಬಂದಂತೆ ಜ್ಞಾನಾರ್ಜನೆಗೆ ಅವಕಾಶ ನೀಡುವ ಜೊತೆಗೆ ಮಕ್ಕಳ ಪ್ರತಿಭೆ ಹೊರತರಲು ಪ್ರಯತ್ನಿಸುವುದು, ಮಕ್ಕಳಲ್ಲಿ ದೇಶಭಕ್ತಿ ಬೆಳೆಸುವುದು ಹೊಸ ಶಿಕ್ಷಣ ನೀತಿಯ ಉದ್ದೇಶ ಎಂದರು.

ಸ್ವಾಮಿ ವಿವೇಕಾನಂದರು ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಬಗ್ಗೆ ಯುವಕರಿಗೆ ಅರಿವು ಮೂಡಿಸಲು ಸೈನಿಕ ಶಾಲೆ ಸ್ಥಾಪಿಸುವ ಬಗ್ಗೆ ಆಲೋಚಿಸಿದ್ದರು. ಆದರೆ ಅದು ಸಾಧ್ಯವಾಗಲು ದೇಶಕ್ಕೆ ಸ್ವಾತಂತ್ರ್ಯ ಬಂದ 75 ವರ್ಷಗಳೇ ಬೇಕಾಯಿತು. ಇಂದು ವಿವೇಕಾನಂದರ ಕನಸು ನನಸಾಗಿದೆ ಎಂದರು.

ಸಾವರ್ಕರ್ ದೇಶಕ್ಕಾಗಿ ಕಠಿಣ ಜೈಲುವಾಸ ಅನುಭವಿಸಿದವರು. ಅವರು ಕೈ–ಕಾಲುಗಳನ್ನು ಕಬ್ಬಿಣದಿಂದ ಬಿಗಿದು ಪ್ರಾಣಿಗಳಂತೆ ಎಣ್ಣೆ ತೆಗೆಸಲಾಗುತ್ತಿತ್ತು. ಅಂತಹ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕಾಂಗ್ರೆಸ್‌ನವರಿಗೆ ತಿಳಿಯದಿರುವುದು ಬೇಸರದ ಸಂಗತಿ ಎಂದರು.

ಕೊಡಗು ಸೈನಿಕ್ ಶಾಲೆಯ ಪ್ರಾಂಶುಪಾಲ ಕರ್ನಲ್ ಕಣ್ಣನ್ ಮಾತನಾಡಿ, ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಿಂದ ಅನುಮೋದನೆ ಸಿಕ್ಕಿರುವ ಕೆಲವೇ ಶಾಲೆಗಳಲ್ಲಿ ವಿಎಸ್‌ಓಇ ಕೂಡ ಒಂದು. ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ತಾಯಂದಿರ ಪಾತ್ರ ಮಹತ್ವದ್ದು ಎಂಬುದನ್ನು ಸ್ವಾಮಿ ವಿವೇಕಾನಂದರ ಉದಾಹರಣೆಯೊಂದಿಗೆ ವಿವರಿಸಿದರು. ಕುವೆಂಪುರವರ ಶಾಲೆ ಕುರಿತಾದ "ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ ಯಾತ್ರಿಕನೇ" ಎಂಬ ಸಂದೇಶವನ್ನು ಕನ್ನಡದಲ್ಲಿ ಹೇಳುವ ಮೂಲಕ ಸ್ಮರಿಸಿದ್ದು ವಿಶೇಷವಾಗಿತ್ತು.


ಎಸ್‌ವಿವೈಎಂ ಉಪಾಧ್ಯಕ್ಷ ಡಾ.ಬಿ.ಸುಧೀರ್ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆಯು ವಿವಿಧ ಕಾರ್ಯಕ್ರಮಗಳ ಮೂಲಕ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತಲುಪುತ್ತಿದೆ ಎಂದರು.

ಹೈದರಾಬಾದಿನ ರಾಮಕೃಷ್ಣ ಮಠದ ಸ್ವಾಮಿ ಬೋಧಮಯನಂದಾಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಉಪಾಧ್ಯಕ್ಷ ಡಾ.ಬಿ.ಸುಧೀರ್, ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ ಆಡಳಿತ ಸಮಿತಿ ಅಧ್ಯಕ್ಷ ಏರ್ ಕಮೋಡೋರ್ ಆರ್.ಎನ್.ಜಯಸಿಂಹ, ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಸಿಬ್ಬಂದಿಗಳಾದ ಡಾ.ಡೆನ್ನೀಸ್ ಚೌಹಾಣ್, ಎಸ್.ಪ್ರವೀಣ್ ಕುಮಾರ್, ಬಂಗಾರಶೆಟ್ಟಿ ಹಾಗೂ ಸಿಬ್ಬಂದಿ ವರ್ಗ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ಸಣ್ಣತಾಯಮ್ಮ, ಚೈತ್ರ, ದಿವ್ಯ, ಶಿವಕುಮಾರ್, ನೂರಾಳಸ್ವಾಮಿ, ಉಮಾ, ಹೆಚ್.ಎಸ್.ರಮೇಶ್, ವರ್ತಕರ ಸಂಘದ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್ ಇತರರಿದ್ದರು. ಮಕ್ಕಳು ಯೋಗ ಸೇರಿದಂತೆ ವಿವಿಧ ಸಾಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

> ದೇಶದ ಪ್ರಗತಿಯಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರ ಮಹತ್ವದ್ದು. ಹೀಗಾಗಿ ಪ್ರತಿಯೊಬ್ಬರೂ ದೇಶವನ್ನು ಪ್ರೀತಿಸಿ ಎಂದ ಅವರು, ವಿಜ್ಞಾನ ಓದುವುದು ಮುಖ್ಯವಲ್ಲ, ವೈಜ್ಞಾನಿಕವಾಗಿ ಆಲೋಚಿಸುವುದು ಮುಖ್ಯ. ನಮ್ಮ ದೇಶದ ಪ್ರತಿಯೊಬ್ಬ ಯುವಕನೂ 'ನಾಗರಿಕ ಸೈನಿಕನಾಗಬೇಕು' ಇಂತಹ ಶಿಕ್ಷಣ ಕೊಡುವಲ್ಲಿ ಸೈನಿಕ ಶಾಲೆಯ ಪಾತ್ರ ಮಹತ್ವವಾದುದು. ಸೈನಿಕ ಶಾಲೆಯ ಕೆಡೆಟ್‌ಗಳು ಉತ್ಸಾಹದಿಂದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಸಮರ್ಪಣಾ ಮನೋಭಾವ, ಶಿಸ್ತು ಮತ್ತು ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು.
> -ಸ್ವಾಮಿ ಬೋಧಮಯನಂದಾಜಿ, ರಾಮಕೃಷ್ಣ ಮಠ, ಹೈದರಾಬಾದ್

ಮೂಲ ಸೌಕರ್ಯಕ್ಕೆ ಆಗ್ರಹಿಸಿ ಸಚಿವರಿಗೆ ಮನವಿ

ಹಂಪಾಪುರ, ಸೆ.3– ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗೆ ಮೂಲ ಸೌಕರ್ಯ ಕಲ್ಪಿಸು ವಂತೆ ಶಾಲಾ ಎಸ್‌ಡಿಎಂಸಿ ಸದಸ್ಯ ಹನುಮಂತನಾಯಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಮನವಿ ಸಲ್ಲಿಸಿದರು.



ಸರಗೂರಿನಲ್ಲಿ ನಡೆದ ಸ್ವಾಮಿ ವಿವೇಕಾನಂದ ಸೈನಿಕ ಶಾಲೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವರನ್ನು ಭೇಟಿ ಮಾಡಿದ ಹನುಮಂತನಾಯಕ, ಹೊಮ್ಮರಗಳ್ಳಿ ಶಾಲೆ ಅತೀ ದೊಡ್ಡ ಹಾಗೂ ಹಳೆ ಶಾಲೆಯಾಗಿದೆ. ಪ್ರಸ್ತುತ 280 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಆಂಗ್ಲ ಮಾಧ್ಯಮ ಶಾಲೆಯಾಗಿ 2019–20ರಲ್ಲಿ ರೂಪಾಂತರಗೊಂಡಿದೆ. ಆದರೆ ಮಕ್ಕಳ ಸಂಖ್ಯೆಗನುಗುಣವಾಗಿ ಕೊಠಡಿ ಹಾಗೂ ಮೂಲ ಸೌಕರ್ಯಗಳ ಕೊರತೆ ಇದೆ. ಶಾಲೆಗೆ 3 ಹೊಸ ಕೊಠಡಿಗಳು ಮಂಜೂರಾಗಿ ಕಾಮಗಾರಿ ಪೂರ್ಣಗೊಂಡಿದ್ದರೂ ಕಂಟ್ರಾಕ್ಟರ್ ಕೊಠಡಿಗಳನ್ನು ಶಾಲಾ ಸುಪರ್ದಿಗೆ ವಹಿಸಿಲ್ಲ. ಇದರಿಂದ ಮಕ್ಕಳು ಕಾರಿಡಾರ್‌ನಲ್ಲಿ ಕುಳಿತು ಪಾಠ ಪ್ರವಚನ ಕೇಳಬೇಕಾಗಿದೆ. ಇನ್ನುಳಿದ 7 ಕೊಠಡಿಗಳು ಮಳೆಯಿಂದ ತೀವ್ರ ದುರಸ್ತಿಗೊಳಗಾಗಿದ್ದು, ತರಗತಿ ನಡೆಸಲು ಯೋಗ್ಯವಾಗಿಲ್ಲ. ಆದ್ದರಿಂದ ಆ ಕೊಠಡಿಗಳನ್ನು ನೆಲಸಮಗೊಳಿಸಿ ಹೊಸ ಕೊಠಡಿ ನಿರ್ಮಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕೆಂದು ಮನವಿ ಸಲ್ಲಿಸಿದರು. ಈ ವೇಳೆ ಹನುಮಂತ, ಎಸ್‌ಟಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ರಾಮುಲು, ರಾಜೇಶ್, ಸೋಮಶೇಖರ್ ಇನ್ನಿತರಿದ್ದರು.

ಮಾನಸಿಕ ಸ್ಥಿರತೆಗೆ ದೈಹಿಕ ಕಸರತ್ತು ಅವಶ್ಯಕ: ತಹಸೀಲ್ದಾರ್

ತಿ.ನರಸೀಪುರ, ಸೆ.3– ಹೆಚ್ಚಿನ ಕೆಲಸದ ಒತ್ತಡದಿಂದ ಸರ್ಕಾರಿ ನೌಕರರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಹಾಗಾಗಿ ಸರ್ಕಾರಿ ನೌಕರರು ಮಾನಸಿಕ ಸ್ಥಿರತೆ ಕಾಪಾಡಿಕೊಳ್ಳಲು ದೈಹಿಕ ಕಸರತ್ತು ಅವಶ್ಯಕ ಎಂದು ತಹಸೀಲ್ದಾರ್ ಸಿ.ಜಿ.ಗೀತಾ ಸಲಹೆ ನೀಡಿದರು.

ಪಟ್ಟಣದ ವಿದ್ಯೋದಯ ಕಾಲೇಜಿನ ಮೈದಾನದಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಶಿಕ್ಷಕರ ಕ್ರೀಡಾ ಕೂಟ ಉದ್ಘಾಟಿಸಿ ಅವರು ಮಾತನಾಡಿದರು.


ಕೆಲಸದ ಒತ್ತಡದಿಂದ ಸರ್ಕಾರಿ ನೌಕರರು ಮಾನಸಿಕ ಕ್ಷೋಭೆಗೆ ಒಳಗಾಗುತ್ತಾರೆ. ಅಲ್ಲದೆ ದೈಹಿಕ ಕಾಳಜಿಯೂ ಇಲ್ಲದೇ ಜೀವನ ಯಾಂತ್ರಿಕ ಬದುಕಾಗುತ್ತದೆ. ಹಾಗಾಗಿ ನೌಕರರು ಸಾರ್ವತ್ರಿಕ ಜೀವನದ ಜೊತೆಗೆ ವೈಯಕ್ತಿಕ ಜೀವನದ ಕಡೆಗೂ ಗಮನಹರಿಸುವಂತೆ ಸಲಹೆ ನೀಡಿದರು.



ಬಿಇಓ ಮರಿಸ್ವಾಮಿ ಮಾತನಾಡಿ, ಜಗತ್ತಿಗೆ ಮಾನಸಿಕ ಪ್ರಬುದ್ಧತೆಯ ಬಳುವಳಿ ನೀಡುವ ಶಿಕ್ಷಕ ವೃಂದಕ್ಕೆ ಹೆಚ್ಚಿನ ಜವಾಬ್ದಾರಿಯಿದೆ. ಮಕ್ಕಳಿಗೆ ಬೋಧಿಸುವ ವೇಳೆ ಏಕಾಗ್ರತೆ ಕಾಪಾಡಿಕೊಳ್ಳಬೇಕು. ಉತ್ತಮ ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ದೈಹಿಕ ಕ್ಷಮತೆಯೂ ಮುಖ್ಯ. ಹಾಗಾಗಿ ಶಿಕ್ಷಕರು ಇಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಒತ್ತಡ ಮರೆತು ಎಲ್ಲ ಸಹಪಾಠಿಗಳ ಜೊತೆ ಬೆರೆತು ಉತ್ತಮ ಅನುಭವ ಹೊಂದಬಹುದು ಎಂದರು.

ಕ್ರೀಡಾಕೂಟದಲ್ಲಿ ತಾಲೂಕಿನ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕಿಯರು ಭಾಗವಹಿಸಿದ್ದರು. ಗುಂಡು ಎಸೆತ, ಕ್ರಿಕೆಟ್, ವಾಲಿಬಾಲ್ ಮತ್ತು ಇನ್ನಿತರ ಕ್ರೀಡೆಗಳನ್ನು ನಡೆಸಲಾಯಿತು. ಈ ವೇಳೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್‌ಮೂರ್ತಿ, ಉಪಾಧ್ಯಕ್ಷ ಗಜೇಂದ್ರ, ಕಾರ್ಯದರ್ಶಿ ಸುಬ್ರಹ್ಮಣ್ಯ, ಖಜಾಂಚಿ ವೆಂಕಟಶೆಟ್ಟಿ, ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಕುಪ್ಯ ಪುಟ್ಟಸ್ವಾಮಿ, ತಲಕಾಡು ಟಿ.ಎನ್.ನಾಗೇಂದ್ರ, ವಿಶ್ವನಾಥರೆಡ್ಡಿ, ಎಂ.ಆರ್.ಮಂಜುಳಾ, ಆರ್.ಹೇಮಾ, ಪೂರ್ಣಿಮಾ, ಭಾಗ್ಯಮ್ಮ, ನಾಗೇಶ್, ಪ್ರಕಾಶ್, ಕೆಂಗಣ್ಣಸ್ವಾಮಿ ಹಾಜರಿದ್ದರು.

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ



ಸಾಲಿಗ್ರಾಮ, ಸೆ.3– ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ ಎಂದು ಬಿಇಓ ಟಿ.ಎಸ್.ಗಾಯಿತ್ರಿ ತಿಳಿಸಿದರು.

ಪಟ್ಟಣದ ಹೊರವಲಯದ ಶ್ರೀಯೋಗಾನರಸಿಂಹಸ್ವಾಮಿ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕೊರೊನಾದಿಂದಾಗಿ ಕಳೆದ 2 ವರ್ಷಗಳಿಂದ ಪ್ರತಿಭಾ ಕಾರಂಜಿ ನಡೆಸಿರಲಿಲ್ಲ. ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿ ಆಯೋಜಿಸಲಾಗಿದೆ. ಮಕ್ಕಳ ತಮ್ಮ ಪ್ರತಿಭೆ ಹೊರಹಾಕಿ ಸಾಧನೆಯತ್ತ ಗಮನ ಹರಿಸಬೇಕು ಎಂದರು.

1ರಿಂದ 7ನೇ ತರಗತಿ ವಿದ್ಯಾರ್ಥಿಗಳು ಪ್ರತ್ಯೇಕ ವಿಭಾಗಗಳಲ್ಲಿ ಭಕ್ತಿಗೀತೆ, ಭಾವಗೀತೆ, ಅಭಿನಯ, ಭಾಷಣ, ಛದ್ಮವೇಷ, ಚಿತ್ರಕಲೆ, ಕಂಠಪಾಠ ಸ್ಪರ್ಧೆ ಹಾಗೂ ಮಣ್ಣಿನಿಂದ ಕಲಾಕೃತಿ ಮಾಡುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಿಇಓ ಗಾಯತ್ರಿ ಬಹುಮಾನ ವಿತರಿಸಿದರು. ಶಿಕ್ಷಣ ಸಂಯೋಜಕ ಎಸ್.ಬಿ.ಜಗದೀಶ್, ಬಿಆರ್‌ಪಿ ಸುಬ್ಬರಾಮನ್, ಸಿಆರ್‌ಪಿ ಶಿವಕುಮಾರ್, ತಾಲೂಕು ಪರಿಷತ್ ಅಧ್ಯಕ್ಷ ಎಸ್.ಕೆ.ಮಧುಚಂದ್ರ, ಆಡಳಿತ ಮಂಡಳಿ ಉಪಾಧ್ಯಕ್ಷ ಪ್ರೇಮ್‌ಕುಮಾರ್ ಜೈನ್, ಕಾರ್ಯದರ್ಶಿ ಎಸ್.ಆರ್.ಭಾಸ್ಕರ್, ಶ್ರೀಕೃಪಾ, ನಿರ್ದೇಶಕರಾದ ಜ್ಯೋತಿ, ಗುಣಚಂದ್ರ, ಮುಖ್ಯಶಿಕ್ಷಕರಾದ ಸುರೇಶ್, ಶೇಖರ್, ಶಿಕ್ಷಕರಾದ ಶಿವಶಂಕರ್, ಶಾಂತರಾಜ್, ಅಶೋಕ್, ರೇಣುಕಾರಾಧ್ಯ, ವಿನಾಯಕ್ ನಾಯಕ್, ಸುಗುಣ, ರೇಖ, ರಾಜೇಶ್ವರಿ, ಯೋಗಾನಂದ್, ಮಧು, ರಾಮಯ್ಯ ಉಪಸ್ಥಿತರಿದ್ದರು.

ಉನ್ನತ ಸ್ಥಾನಕ್ಕೇರಲು ಪರಿಶ್ರಮ, ಆತ್ಮವಿಶ್ವಾಸ ಮುಖ್ಯ

ಹುಣಸೂರು, ಸೆ.3– ಉನ್ನತ ಸ್ಥಾನಕ್ಕೇರಲು ಪರಿಶ್ರಮ ಹಾಗೂ ಆತ್ಮವಿಶ್ವಾಸದೊಂದಿಗೆ ಸಾಧಿಸುವ ಛಲವಿರಬೇಕು ಎಂದು ಉದ್ಯಮಿ ಹೆಚ್.ಪಿ.ಅಮರ್‌ನಾಥ್ ತಿಳಿಸಿದರು.

ನಗರದ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯಲ್ಲಿ ಶಾಸಕ ಹೆಚ್.ಪಿ. ಮಂಜುನಾಥ್ ನೇತೃತ್ವದಲ್ಲಿ ತೆರೆದಿರುವ ಉಚಿತ ಸ್ಪೋಕನ್ ಇಂಗ್ಲಿಷ್ ತರಬೇತಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲಿಷ್ ಭಾಷಾ ಪ್ರಾಮುಖ್ಯತೆ ಗಮನದಲ್ಲಿಟ್ಟುಕೊಂಡು ಶಾಸಕ ಮಂಜುನಾಥ್ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಉಚಿತ ಸ್ಪೋಕನ್ ಇಂಗ್ಲಿಷ್ ತರಬೇತಿ ಕೇಂದ್ರ ತೆರೆದಿದ್ದಾರೆ. ಇಲ್ಲಿ ಇಂಗ್ಲಿಷ್ ಭಾಷಾ ಕಲಿಕೆಯೊಂದಿಗೆ ಮುಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ಸೇನೆ ಹಾಗೂ ಪೊಲೀಸ್ ಇಲಾಖೆಗೆ ಸೇರ ಬಯಸುವ ಯುವಕ–ಯುವತಿಯರಿಗೆ ದೇಹದಾರ್ಢ್ಯ ತರಬೇತಿಯನ್ನು ನಗರಸಭೆ ಆವರಣದಲ್ಲಿ ನಿವೃತ್ತ ಸೇನಾ ಸೈನಿಕರಿಂದ ನೀಡಲಾಗುವುದು ಎಂದರು.

ತರಬೇತಿ ಸಂಯೋಜಕರಾದ ಲಾ–ಸಲೇಟ್ ಕಾಲೇಜಿನ ಪ್ರಾಂಶುಪಾಲ ರವಿ ದೀಪಕ್ ಮಾತನಾಡಿ, ಶೈಕ್ಷಣಿಕ ಸಾಧನೆ ಮಹತ್ತರ ಘಟ್ಟವಾಗಿದ್ದು, ಅದನ್ನು ತಲುಪುವುದು ಸುಲಭದ ಮಾತಲ್ಲ. ಅದಕ್ಕೆ ಕಠಿಣ



ಶ್ರಮ, ಅಧ್ಯಯನ ಮತ್ತು ಏಕಾಗ್ರತೆ ಸಾಧನವಾಗಿದ್ದು, ಅದನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಂಡರೆ ಮಾತ್ರ ಸಾಧನೆ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ ಅಧ್ಯಕ್ಷ ರೋ. ಆನಂದ್ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳು ಇಂದು ಎಲ್ಲಾ ರಂಗದಲ್ಲೂ ಮುಂದೆ ಇದ್ದಾರೆ. ಹೆಚ್ಚಿನ ಸಾಧನೆಗೆ ಇಂತಹ ಶಿಬಿರಗಳು ಸಹಕಾರಿ ಎಂದರು.

ಕಾರ್ಯಕ್ರಮದಲ್ಲಿ ಸಾಯಿಬಾಬಾ ಟ್ರಸ್ಟ್ ನಿರ್ದೇಶಕ ಡಾ.ಹೆಚ್.ಪಿ.ಶ್ರೀನಾಥ್, ಉಪನ್ಯಾಸಕ ಹರ್ಷವರ್ಧನ್ ರಮೇಶ್, ಯುವ ಮುಖಂಡರಾದ ಸ್ವರೂಪ್, ರವಿ, ಗಣೇಶ್, ಮಧು, ರಮೀಜ್, ಮಹದೇವ್, ಸೇರಿದಂತೆ ಇತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ

ಮಲ್ಕುಂಡಿ, ಸೆ.3– ಸಾಲಬಾಧೆ ತಾಳಲಾರದೆ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ಶನಿವಾರ ನಡೆದಿದೆ.



ಗ್ರಾಮದ ರೈತ ಮಹದೇವಸ್ವಾಮಿ (30) ಆತ್ಮಹತ್ಯೆ ಮಾಡಿಕೊಂಡವರು. ಈತ ತನ್ನ 2 ಎಕರೆ ಜಮೀನಿನಲ್ಲಿ ಹತ್ತಿ, ಅರಿಶಿನ ಬೆಳೆದಿದ್ದರು. ಇದಕ್ಕಾಗಿ ಸುಮಾರು 5 ಲಕ್ಷ ರೂ. ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಆದರೆ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಹತ್ತಿ ಬೆಳೆ ಕೈಗೆ ಸಿಗದೆ ನಷ್ಟ ಅನುಭವಿಸಿದ್ದರು. ಮಾಡಿದ ಸಾಲ ತೀರಿಸಲಾಗದೇ ಮನನೊಂದಿದ್ದ ಮಹದೇವಸ್ವಾಮಿ ಶನಿವಾರ ಬೆಳಗ್ಗೆ ತಮ್ಮ ಜಮೀನಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಸ್ಯೆ ಬಗೆಹರಿಸದಿದ್ದರೆ ಅನಿರ್ದಿಷ್ಟಾವಧಿ ಪ್ರತಿಭಟನೆ

ತಿ.ನರಸೀಪುರ, ಸೆ.3– ತಾಲೂಕಿನ ವಿವಿಧ ಗ್ರಾಮಗಳಲ್ಲಿರುವ ದಲಿತರ ಸಮಸ್ಯೆಗಳನ್ನು 2 ವಾರದೊಳಗೆ ಬಗೆಹರಿಸದಿದ್ದರೆ ಸೆ.17ರಿಂದ ಪಟ್ಟಣದ ತಾಲೂಕು ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವುದಾಗಿ ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ತಿಳಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಗ್ರಾಮಗಳಲ್ಲಿ ದಲಿತ ಸಮುದಾಯದರಿಗೆ ಸ್ಮಶಾನ ಇಲ್ಲ. ಕೆಲವೆಡೆ ಒತ್ತುವರಿಯಿಂದ ಮೂಲ ಸೌಕರ್ಯ ಕೊರತೆ ಇದೆ. ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆಗೆ ಕಾರ್ಯಕ್ರಮ ದಲಿತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಫಲವಾಗಿದೆ. ಇದು ರಾಜಕೀಯ ಕಾರ್ಯಕ್ರಮದಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹನುಮನಾಳು, ತಲಕಾಡು ಹೋಬಳಿ ಪರಿಣಾಮಪುರ, ಚನ್ನಬಸವನಹುಂಡಿ ಗ್ರಾಮಗಳ ಪರಿಶಿಷ್ಟ ಜಾತಿಯವರಿಗೆ ಸ್ಮಶಾನಕ್ಕೆ ಭೂಮಿ ನೀಡಬೇಕು. ಮರಡೀಪುರದಲ್ಲಿ ಪರಿಶಿಷ್ಟ ಪಂಗಡದವರಿಗೆ ಸ್ಮಶಾನವಿಲ್ಲ. ಹನುಮನಾಳು ದಲಿತರಿಗೆ ಜಮೀನಿಗೆ ತೆರಳುವ ಸರ್ಕಾರಿ ಖರಾಬು ರಸ್ತೆ ಸರ್ವೇ ನಂಬರ್ 124 ರಿಂದ 149 ರತನಕ ಒತ್ತುವರಿ ತೆರವು ಮಾಡಿಲ್ಲ. ಕೇತುಪುರ ಗ್ರಾಮದ ದಲಿತರಿಗೆ ನಿವೇಶನಕ್ಕೆ ಮೀಸಲಿಟ್ಟಿರುವ 2.21ಗುಂಟೆ ನಿವೇಶನ ಹಂಚಿಕೆಯಾಗಿಲ್ಲ. ಜನರ ಸಮಸ್ಯೆ ಪರಿಹರಿಸುವಲ್ಲಿ ಸ್ಥಳೀಯ ತಾಲೂಕು ಆಡಳಿತ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು.

ನಮ್ಮ ಬೇಡಿಕೆಗಳನ್ನು ಶೀಘ್ರ ಬಗೆಹರಿಸಲು ತಹಶೀಲ್ದಾರ್ ಹಾಗೂ ಸ್ಥಳೀಯ ಆಡಳಿತ ಕ್ರಮ ಕೈಗೊಳ್ಳಬೇಕು. ಇದಕ್ಕೆ ಎರಡು ವಾರ ಗಡುವು ನೀಡುತ್ತೇವೆ. ಕ್ರಮ ಕೈಗೊಳ್ಳದಿದ್ದರೆ ಸೆ.17 ರಿಂದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ದಸಂಸ ತಾಲೂಕು ಸಂಘಟನಾ ಸಂಚಾಲಕ ಚಂದಳ್ಳಿ ಮಲ್ಲೇಶ್, ಕೋಳಿಮಲ್ಲನಹುಂಡಿ ಪುಟ್ಟರಾಜು, ರವೀಂದ್ರ ಕೇತುಪುರ, ಭೈರಾಪುರ ಚಿಕ್ಕಲಿಂಗಯ್ಯ, ಮರಡೀಪುರ ಮಲ್ಲಿಕಾರ್ಜುನ, ಕೇತುಪುರ ಶಿವಸಿದ್ದು ಇತರರಿದ್ದರು.

ವಿರೋಧ, ಪ್ರತಿಭಟನೆ ನಡುವೆಯೇ ಮಳಿಗೆ ಹರಾಜು ಪ್ರಕ್ರಿಯೆ

ನಂಜನಗೂಡು, ಸೆ.3– ಭದ್ರತಾ ಠೇವಣಿ ಆಧಾರದ ಮೇಲೆ ಅವೈಜ್ಞಾನಿಕವಾಗಿ ಮಳಿಗೆ ಹರಾಜು ಮಾಡದಂತೆ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರೂ ನಗರಸಭೆ ಅಧಿಕಾರಿಗಳು ಹರಾಜು ಪ್ರಕ್ರಿಯೆ ಕೈಗೊಂಡರು.

ಬಜಾರ್ ರಸ್ತೆ ಮಾರುಕಟ್ಟೆಯ 8 ಮಳಿಗೆಗಳ ಪೈಕಿ 15 ಲಕ್ಷ ರೂ. ಗರಿಷ್ಠ ಮೊತ್ತ ಸೇರಿದಂತೆ 12 ಲಕ್ಷ ರೂ., 11 ಲಕ್ಷ, 10 ಲಕ್ಷ ರೂ., 6 ಲಕ್ಷ ರೂ. ಭದ್ರತಾ ಠೇವಣಿ ಮೊತ್ತಕ್ಕೆ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಮಳಿಗೆಗಳು ಹರಾಜಾದವು. ಎಸ್ಸಿ, ಎಸ್ಟಿಗೆ ಮೀಸಲಾಗಿದ್ದ 2 ಮಳಿಗೆಗಳು ತಲಾ 4.5 ಲಕ್ಷ ರೂ.ಗೆ ಹರಾಜುಗೊಂಡವು. ಅಂಗವಿಕಲರಿಗೆ ಮೀಸಲಾಗಿದ್ದ ಮಳಿಗೆ ಲಾಟರಿ ಮೂಲಕ



ಆಯ್ಕೆ ಮಾಡಲಾಯಿತು. ನೆಹರು ವೃತ್ತದ ಬಳಿಯ 6 ಮಳಿಗೆಗಳಲ್ಲಿ 29 ಸಾವಿರ ರೂ. ಗರಿಷ್ಠ ಮೊತ್ತಕ್ಕೆ ಬಾಡಿಗೆಗೆ ಹರಾಜಾಯಿತು. ಉಳಿದಂತೆ, 28 ಸಾವಿರ ರೂ., 20 ಸಾವಿರ ರೂ., 21 ಸಾವಿರ ರೂ. ಹಾಗೂ ಎಸ್ಸಿಗೆ ಮೀಸಲಾಗಿದ್ದ ಮಳಿಗೆ 8 ಸಾವಿರ ರೂ. ಮಾಸಿಕ ಬಾಡಿಗೆಗೆ ಬಿಕರಿಯಾದವು.

ದಸಂಸ ವಿರೋಧ: ನಗರಸಭೆ ವ್ಯಾಪ್ತಿಯ ಮಳಿಗೆಗಳನ್ನು ಬಾಡಿಗೆ ಕರಾರಿಗೆ ಹರಾಜು ಮಾಡದೇ ಭದ್ರತಾ ಠೇವಣಿ ಮೊತ್ತಕ್ಕೆ ಹರಾಜು ಮಾಡುವ ಮೂಲಕ ಪ್ರಭಾವಿಗಳಿಗೆ ಮಣೆ ಹಾಕಲು ಅಧಿಕಾರಿಗಳು ಮುಂದಾಗಿದ್ದಾರೆ ಎಂದು ಆಪಾದಿಸಿ ಜನಸಂಗ್ರಾಮ ಪರಿಷತ್ ರಾಜ್ಯಾಧ್ಯಕ್ಷ ನಗರ್ಲೆ ಎಂ.ವಿಜಯ ಕುಮಾರ್, ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ, ಮಂಜು ಶಂಕರಪುರ ಸೇರಿದಂತೆ ಹಲವು ನಗರಸಭೆ ಅಧ್ಯಕ್ಷ ಹಾಗೂ ಆಯುಕ್ತರನ್ನು ತರಾಟೆಗೆ ತೆಗೆದುಕೊಂಡರು. ಹರಾಜು ಪ್ರಕ್ರಿಯೆ ನಡೆಸದಂತೆ ಕೆಲಕಾಲ ಘೋಷಣೆ ಕೂಗಿದರು. ನಂತರ ಪೊಲೀಸರು ಅವರನ್ನು ಹೊರ ಕರೆತಂದು ಹರಾಜು ನಡೆಯಲು ಅನುವು ಮಾಡಿಕೊಟ್ಟರು.

ಮಲ್ಲಹಳ್ಳಿ ನಾರಾಯಣ ಮಾತನಾಡಿ, ನಗರಸಭೆ ಅಧಿಕಾರಿಗಳು ಮತ್ತು ಅಧ್ಯಕ್ಷರು ಹೊರ ರಾಜ್ಯದ ಬಂಡವಾಳಶಾಹಿಗಳೊಂದಿಗೆ ಶಾಮೀಲಾಗಿ ಕಾಟಾಚಾರಕ್ಕೆ ಹರಾಜು ಪ್ರಕ್ರಿಯೆ ನಡೆಸಿದ್ದಾರೆ. ಬಹಿರಂಗ ಹರಾಜು ಎಂದು ಹೇಳಿ, ನಿಯಮಬಾಹಿರವಾಗಿ ಕಚೇರಿ ಸಭಾಂಗಣ ಒಳಗೆ ಹರಾಜು ಪ್ರಕ್ರಿಯೆ ನಡೆಸಿದ್ದಾರೆ. ಅಂಗವಿಕಲರು, ಮತ್ತು ಎಸ್ಸಿ, ಎಸ್ಟಿಯವರಿಗೆ ಮೀಸಲಿರಿಸಿರುವ ಮಳಿಗೆಗಳು ದುಬಾರಿಯಾಗಿವೆ. ಜೊತೆಗೆ ಪ್ರಯೋಜನಕ್ಕೆ ಬಾರದ ಕೊಳಚೆಯ ಭಾಗದಲ್ಲಿ ಮಳಿಗೆಗಳನ್ನು ಎಸ್ಸಿ, ಎಸ್ಟಿ, ಅಂಗವಿಕಲ ವರ್ಗಕ್ಕೆ ಮೀಸಲಿರಿಸಿದ್ದಾರೆಂದು ಆರೋಪಿಸಿದರು.

ಹರಾಜು ಪ್ರಕ್ರಿಯೆಯಲ್ಲಿ ನಗರಸಭಾಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕರಪ್ಪ ಸದಸ್ಯರಾದ ಕಪಿಲೇಶ್, ಮಹದೇವ ಪ್ರಸಾದ್, ನಗರಸಭಾಯುಕ್ತ ಎಂ.ರಾಜಣ್ಣ, ಎಇಇ ಶ್ರೀನಿವಾಸ್, ಸಿಬ್ಬಂದಿ ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೋಬ್ರಾ (ತ): ಬೆ.10.15ಕ್ಕೆ, ಮ.1.45ಕ್ಕೆ, ಬೀಸ್ಟ್ (ಇಂ): ಸಂ.5.35ಕ್ಕೆ, ರಾ.7.50ಕ್ಕೆ, ಗಾಳಿಪಟ –2 (ಕ): ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ಇಂ): ಬೆ.11ಕ್ಕೆ, ತಿರುಚಿಟ್ರಂಬಲಂ (ತ): ಮ.1.15ಕ್ಕೆ, ನಚ್ಚತಿರಂ ನಗರಗಿರಧು (ತ): ಸಂ.4ಕ್ಕೆ, ಕಾರ್ತಿಕೇಯ 2(ತೆ): ರಾ.7.20ಕ್ಕೆ, ಲವ್ 360 (ಕ): ರಾ.10ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.9.55ಕ್ಕೆ, ಗಾಳಿಪಟ 2(ಕ): ಮ.1ಕ್ಕೆ, ಮ.3.55ಕ್ಕೆ, ಕೋಬ್ರಾ (ತ): ಸಂ.6.40ಕ್ಕೆ, ಪಲ್ತು ಜನ್ವರ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಗಾಳಿಪಟ 2 (ಕ): ಬೆ.11.35ಕ್ಕೆ, ರಾ.7.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಮ್ (ಇಂ): ಮ.1.30ಕ್ಕೆ, ಸಂ.4.20ಕ್ಕೆ, ರಂಗ ರಂಗ ವೈಭವಂಗ (ತೆ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕೋಬ್ರಾ (ಇಂ): ಬೆ.10ಕ್ಕೆ, ಮ.1.40ಕ್ಕೆ, ಸಂ.5.20ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಬೆ.11.20ಕ್ಕೆ, ಬೀಸ್ಟ್ (ಇಂ): ಮ.2.10ಕ್ಕೆ, ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಸಂ.4.30ಕ್ಕೆ, ಕೋಬ್ರಾ (ಇಂ): ರಾ.10ಕ್ಕೆ
ಸ್ಕ್ರೀನ್ 3	ಗಾಳಿಪಟ 2(ಕ): ಬೆ.10.45ಕ್ಕೆ, ಮ.1.45ಕ್ಕೆ, ಫ್ಯಾಂಟಸಿ (ಕ): ಸಂ.4.50ಕ್ಕೆ, ಪಲ್ತು ಜನ್ವರ್ (ಮ): ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಬೀಸ್ಟ್ (ಇಂ): ಬೆ.10.50ಕ್ಕೆ, ಲವ್ 360 (ಕ): ಮ.1.10ಕ್ಕೆ, ಗಾಳಿಪಟ 2(ಕ): ಸಂ.4ಕ್ಕೆ, ರಾ.7.05ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ
ಸ್ಕ್ರೀನ್ 2	ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ
ಸ್ಕ್ರೀನ್ 3	ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
ಸ್ಕ್ರೀನ್ 4	ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಮ.2.55ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಫ್ಯಾಂಟಸಿ(ಕ): ಬೆ.11ಕ್ಕೆ, ಸರ್ವಸ್ಯ ನಾಟ್ಯಂ (ಕ): ಬೆ.10.10ಕ್ಕೆ, ತಾಜ್‌ಮಹಲ್ 2 (ಕ): ಮ.1.20ಕ್ಕೆ, ಕೋಬ್ರಾ (ತ): ಬೆ.11ಕ್ಕೆ, ಮ.2.40ಕ್ಕೆ, ಸಂ.6.20ಕ್ಕೆ, ರಾ.10ಕ್ಕೆ, ಕೋಬ್ರಾ (ತೆ): ಬೆ.11.15ಕ್ಕೆ, ಸಂ.6.05ಕ್ಕೆ, ಬೀಸ್ಟ್ (ಇಂ): ಬೆ.10.10ಕ್ಕೆ, ಮ.2.15ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಬೆ.10.45ಕ್ಕೆ, ಸಂ.4.30ಕ್ಕೆ, ಸೊಲೊಮಂಟೆ ತೇನೀಚಕಲ್ (ಮ): ರಾ.7.15ಕ್ಕೆ, ಸೀತಾರಾಮಂ (ಹಿಂ): ಮ.3.50ಕ್ಕೆ, ರಂಗ ರಂಗ ವೈಭವಂಗ (ತೆ): ಮ.3.15ಕ್ಕೆ, ರಾ.9.15ಕ್ಕೆ, ಪಲ್ತು ಜನ್ವರ್ (ಮ): ರಾ.9.45ಕ್ಕೆ, ಕಾರ್ತಿಕೇಯ–2 (ತೆ): ಬೆ.9.05ಕ್ಕೆ, ಮ.12.10ಕ್ಕೆ, ಲೈಗರ್ (ಹಿಂ): ಮ.3.20ಕ್ಕೆ, ತಿರುಚಿಟ್ರಂಬಲಂ (ತ): ಮ.12.25ಕ್ಕೆ, ಸಂ.6.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೋಬ್ರಾ (ತ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೋಬ್ರಾ (ತ)	4 ಪ್ರದರ್ಶನಗಳು
ಸಂಗಂ	
ರಂಗ ರಂಗ ವೈಭವಂಗ (ತೆ)	4 ಪ್ರದರ್ಶನಗಳು
ಲಿಡೋ	
ಧಮಾಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೋಬ್ರಾ (ತ)	4 ಪ್ರದರ್ಶನಗಳು

ಕ್ರೀಡೆಯಿಂದ ಉತ್ತಮ ಆರೋಗ್ಯ



ಮಲ್ಕುಂಡಿ, ಸೆ.3– ಕ್ರೀಡೆಯಿಂದ ಉತ್ತಮ ಆರೋಗ್ಯ ದೊರೆಯುತ್ತದೆ ಎಂದು ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ದೇವನೂರು ಮಹದೇವಪ್ಪ ತಿಳಿಸಿದರು.

ಸಮೀಪದ ಹುರ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಆವರಣದಲ್ಲಿ ಆಯೋಜಿಸಿದ್ದ ವಲಯ ಮಟ್ಟದ ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಕ್ರೀಡೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಭಾಗವಹಿಸಿ ಪ್ರತಿಭೆ ಹೊರಹಾಕಬೇಕು. ವಿದ್ಯಾರ್ಥಿಗಳು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳಬೇಕು. ಆಟದಲ್ಲಿ ಸೋಲು–ಗೆಲುವು ನಾಣ್ಯದ ಎರಡು ಮುಖಗಳಿದ್ದಂತೆ. ಸೋತಾಗ ಕುಗ್ಗದೆ ಗೆದ್ದಾಗ ಹಿಗ್ಗದೆ ಸಮಾನ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದರು. ಈ ವೇಳೆ ಗಾಯಿತ್ರಿ ವಿದ್ಯಾ ಸಂಸ್ಥೆ ಸಂಸ್ಥಾಪಕ ನಟರಾಜ್, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ರಂಗನಾಥ್, ಇಸಿಓ ರಮೇಶ್, ಸಿಆರ್‌ಪಿ ರವೀಶ್, ಗ್ರಾಪಂ ಮಾಜಿ ಅಧ್ಯಕ್ಷ ಚನ್ನನಾಯಕ, ಗ್ರಾಪಂ ಮಾಜಿ ಸದಸ್ಯ ಕೂಸಪ್ಪ, ರುದ್ರ, ಪ್ರಾಂಶುಪಾಲ ಮಂಜುನಾಥ್, ಸೇರಿದಂತೆ ಶಿಕ್ಷಕರು ಹಾಜರಿದ್ದರು.



ಹೆಚ್.ಡಿ.ಕೋಟೆ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಫೌಂಡೇಶನ್ ಅಧ್ಯಕ್ಷ ಮಹೇಶ್ ಸಮವಸ್ತ್ರ ವಿತರಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ, ಪುರಸಭಾ ಸದಸ್ಯ ಪ್ರೇಮ್, ಶಿವಣ್ಣ, ಮಲ್ಲಪ್ಪ, ನಾರಾಯಣ್ ಲಾಲ್, ದತ್ತಿ ಸದಸ್ಯರಾದ ಕೆ.ಎಸ್.ವೀರಭದ್ರಸ್ವಾಮಿ, ಮುಖ್ಯ ಶಿಕ್ಷಕ ನಾಗಸುಂದರ್, ಸಿಆರ್‌ಪಿ ಪ್ರತಿಭಾರಾಣಿ, ಶಿಕ್ಷಕಿ ನೂರ್ ಇಮ್ರಾನಾ, ಎಸ್‌ಡಿಎಂಸಿ ಸದಸ್ಯ ಶಿವನಂಜ ಉಪಸ್ಥಿತರಿದ್ದರು.

ಶಿವಕುಮಾರ್ ನಿಧನ



ಬೈಲಕುಪ್ಪೆ, ಸೆ.3– ಗ್ರಾಮದ ನಿವಾಸಿ ಶಿವಕುಮಾರ್(30) ಶನಿವಾರ ನಿಧನರಾದರು. ಮೃತರು ಕುಟುಂಬದ ಸದಸ್ಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖ್ಯಾತ ವೈದ್ಯ ಡಾ.ಗುರುರಾಜ್ ಹೆಬ್ಬಾರ್ ನಿಧನ



ಹಾಸನ,ಸೆ.3–ಖ್ಯಾತ ವೈದ್ಯರು, ಸಮಾಜ ಸೇವಕರೂ ಆಗಿದ್ದ ಹಿರಿಯ ವೈದ್ಯ ಡಾ. ಗುರುರಾಜ ಹೆಬ್ಬಾರ್ (72) ಶನಿವಾರ ನಿಧನರಾಗಿದ್ದಾರೆ. ಅನಾರೋಗ್ಯ ದಿಂದ ಬಳಲುತ್ತಿದ್ದ ಅವರು, ಕಳೆದ ಹಲವು ದಿನ ಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಅವರ ಅಭಿಮಾನಿ ಬಳಗ ಕಳೆದ ಆ.19 ರಂದು ನಗರದ ಶ್ರೀ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ ಆತ್ಮೀಯ ವಾಗಿ ಸನ್ಮಾನಿಸಿ, ಅಭಿನಂದಿಸಿದ್ದರು. ಅದಾದ ಕೆಲವೇ ದಿನಗಳಲ್ಲಿ ಹೆಬ್ಬಾರರು ಎಲ್ಲರನ್ನೂ ಅಗಲಿದ್ದಾರೆ.

ಮೃತರ ನಿಧನಕ್ಕೆ ವೈದ್ಯರ ಸಂಘ ಸೇರಿ ಗಣ್ಯಾತಿಗಣ್ಯರು ಕಂಬನಿ ಮಿಡಿದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಸೋಮೇಶ್ವರದಲ್ಲಿ ಜನಿಸಿದ ಇವರು, ನಂತರ ಹಾಸನಕ್ಕೆ ಬಂದು ಕಟ್ಟಾಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮುಗಿಸಿದ್ದರು. ಹಾಸನದ ಸರ್ಕಾರಿ ಕಾಲೇಜಿನಲ್ಲಿ ಪಿಯುಸಿ, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿ, ಆಲೂರು ತಾಲೂಕು ಪಾಳ್ಯ ದಲ್ಲಿ ಖಾಸಗಿ ಕ್ಲಿನಿಕ್ ತೆರೆದರು. ಬಳಿಕ ಬೈಚನಹಳ್ಳಿಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತರು, ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಹಾಸನ ದಲ್ಲಿ ಖಾಸಗಿ ಕ್ಲಿನಿಕ್ ತೆರೆದು, ತರುವಾಯ ಎಂ.ಜಿ.ರಸ್ತೆ ಯಲ್ಲಿ ಶ್ರೀ ರಾಮಕೃಷ್ಣ ನರ್ಸಿಂಗ್ ಹೋಂ ಸ್ಥಾಪಿಸಿದರು.

ಹೆಬ್ಬಾರ್ ಅವರು ಕೇವಲ ವೈದ್ಯರಷ್ಟೇ ಅಲ್ಲ, ಸಮಾಜ ಸೇವಕ ರಾಗಿದ್ದರು. ಬಡವರಿಗಾಗಿಯೇ ಹಾಸನದಲ್ಲಿ ಮೊದಲಿಗೆ ಸಹ ಕಾರಿ ತತ್ವದಡಿ ಜನಕಲ್ಯಾಣ ರಿಸರ್ಚ್ ಅಂಡ್ ಚಾರಿಟಬಲ್ ಟ್ರಸ್ಟ್ ನಿಂದ ಸಿ.ಟಿ. ಸ್ಕ್ಯಾನಿಂಗ್ ಸೆಂಟರ್ ತೆರೆದರು. ಸಂಜೀವಿನಿ ಸಹಕಾರಿ ಆಸ್ಪತ್ರೆ, ಕಾಮ ಧೇನು ಸಹಕಾರಿ ವಿದ್ಯಾಶ್ರಮ (ವೃದ್ಧಾ ಶ್ರಮ), ರೈತ ಬಂಧು ಸಹಕಾರಿ ಸಂಸ್ಥೆ, ಪರಿಪೂರ್ಣ ಚಾರಿಟಬಲ್ ಟ್ರಸ್ಟ್‌ನಿಂದ ಪತ್ರಿಕೋದ್ಯಮ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿದ್ದರು. ಅಷ್ಟೇ ಅಲ್ಲದೆ ನಂದಗೋಕುಲ ಶಿಶು ಕೇಂದ್ರ, ಗೋ ಸಂರಕ್ಷಣೆ, ಪ್ರಾಣಿಹಿಂಸಾ ನಿವಾರಣಾ ಸಂಘ, ಹಾಸನಾಂಬ ಧರ್ಮಛತ್ರ ಹೀಗೆ ನಾನಾ ಸಂಸ್ಥೆಗಳ ಹುಟ್ಟಿಗೆ ಕಾರಣರಾದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆಗಿದ್ದರು. ಡಾ.ಗುರುರಾಜ್ ಹೆಬ್ಬಾರ್ ಅವರ ನಿಧನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ನನ್ನ ಆತ್ಮೀಯ ಒಡನಾಡಿಯೂ ಆಗಿದ್ದ ಹೆಬ್ಬಾರರ ನಿಧನ ನನಗೆ ವೈಯಕ್ತಿಕವಾಗಿ ಅತೀವ ನೋವು ತಂದಿದೆ ಎಂದು ಕಂಬನಿ ಮಿಡಿದಿದ್ದಾರೆ.

ಹೊಯ್ಸಳ, ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಸೆ.3–ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆ ಯಡಿ ಯಾವುದೇ ಕ್ಷೇತ್ರದಲ್ಲಿ ನಾವಿನ್ಯತೆ (Innovation) ತಾರ್ಕಿಕ (scholastic) ಸಾಧನೆಗಳು ಕ್ರೀಡೆ (ಕಲೆ ಸಾಂಸ್ಕೃತಿಕ ಸಂಗೀತ) ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವಂತಹ ಮಕ್ಕಳಿಗೆ ಜಿಲ್ಲಾಮಟ್ಟದಲ್ಲಿ ಪ್ರಶಸ್ತಿ ನೀಡುವ ಕುರಿತು ಅರ್ಜಿಯನ್ನು ಆಹ್ವಾನಿಸಲಾಗಿದು, ಸೆ.23ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು 6–18 ವರ್ಷದೊಳಗಿರಬೇಕು. ಸಾಧನೆ ಮಾಡಿರುವ ದೃಢೀಕರಣ ಪತ್ರ ಇತ್ತೀಚಿನ ಪಾಸ್ಪೋರ್ಟ್ ಅಳತೆಯ 2 ಭಾವಚಿತ್ರವನ್ನು ಅರ್ಜಿಯೊಂದಿಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು. ಅರ್ಜಿ ನಮೂನೆಗಳಿಗಾಗಿ ಉಪ ನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೃಷ್ಣದೇವರಾಯ ವೃತ್ತ, ಸರ್ಕಲ್ ವಿಜಯನಗರ 2ನೇ ಹಂತ, ಮೈಸೂರು–17 ಈ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂಖ್ಯೆ: 2498031 ಅಥವಾ 2495432 ಅನ್ನು ಸಂಪರ್ಕಿಸಬಹುದು.



ಮೈಸೂರಿನ ಆರ್.ಎಸ್.ನಾಯ್ಡುನಗರದ ಕೆಸರೆ ಫಾರಂನಲ್ಲಿ ನಗರಪಾಲಿಕೆ ವತಿಯಿಂದ ಪೌರಕಾರ್ಮಿಕರಿಗೆ ಒಟ್ಟು 158 ಮನೆಗಳ ನಿರ್ಮಾಣಕ್ಕೆ ಶಾಸಕ ತನ್ವೀರ್ ಸೇಠ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಉಪ ಮೇಯರ್ ಅನ್ವರ್ ಬೇಗ್, ಪಾಲಿಕೆ ಸದಸ್ಯ ಸಮಿಉಲ್ಲಾ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ, ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಎನ್.ಮಾರ, ಮುಖಂಡರಾದ ಟಿ.ಶ್ರೀನಿವಾಸ, ಎನ್.ಮೋಹನ್ ಕುಮಾರ್, ಸಿ.ಆರ್. ರಾಚಯ್ಯ, ಕುಮಾರಸ್ವಾಮಿ, ಪಿ.ಮಂಜುನಾಥ, ಜೆ.ಮಂಜುನಾಥ, ಅರುಣ್‌ಕುಮಾರ್, ಎಂ.ರಾಜೀವ್, ವೆಂಕಟೇಶ್, ಹನುಮಂತ, ಮುರುಗೇಶ್, ಪರಶುರಾಮ ಉಪಸ್ಥಿತರಿದ್ದರು.

ಮಂಡ್ಯ ಎಂಎಲ್‌ಸಿ ದಿನೇಶ್ ಗೂಳಿಗೌಡರಿಗೆ ಮೈಸೂರಲ್ಲಿ ಮತದಾನದ ಹಕ್ಕು

ಜೆಡಿಎಸ್‌ನಿಂದ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ತಕರಾರು ಅರ್ಜಿ

ಮೈಸೂರು,ಸೆ.3(ಪಿಎಂ)–ಮಂಡ್ಯ ಜಿಲ್ಲೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿ ಗೌಡ ಅವರಿಗೆ ಮೈಸೂರು ನಗರ ಪಾಲಿಕೆಯಲ್ಲಿ ಮತ ದಾನದ ಹಕ್ಕು ನೀಡಿರುವುದನ್ನು ಪ್ರಶ್ನಿಸಿ ಜೆಡಿಎಸ್ ರಾಜ್ಯ ವಕ್ತಾರ ಹಾಗೂ ವಕೀಲ ಎನ್.ಆರ್. ರವಿಚಂದ್ರೇಗೌಡ ಶನಿವಾರ ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಗೆ ತಕರಾರು ಅರ್ಜಿ ಸಲ್ಲಿಸಿದರು.



ಜೆಡಿಎಸ್ ಮುಖಂಡರೊಂದಿಗೆ ಅಪರ ಪ್ರಾದೇಶಿಕ ಆಯುಕ್ತರಾದ ರೂಪ ಅವರಿಗೆ ತಕರಾರು ಅರ್ಜಿ ಸಲ್ಲಿಸಲಾಗಿದೆ. ದಿನೇಶ್ ಗೂಳಿಗೌಡ ಕಳೆದ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ತಾವು ಬೆಂಗಳೂರು ಯಶವಂತಪುರದ ನಿವಾಸಿ ಹಾಗೂ ಮತದಾನದ ವಿವರಗಳು ಇದೇ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿರುವುದಾಗಿ ಮಾಹಿತಿ ನೀಡಿದ್ದಾರೆ.

ಅಲ್ಲದೆ, ತಮ್ಮ ಸ್ವಂತ ವಿಳಾಸವು ಮದ್ದೂರು ತಾಲೂಕು ಎಂಬ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ. ಜೊತೆಗೆ ಇವರ ವಿಧಾನಪರಿಷತ್ ಕ್ಷೇತ್ರವು ಮಂಡ್ಯ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ಬರಲಿದೆ. ಹೀಗಿರುವಾಗ ಇವರಿಗೆ ಮೈಸೂರು ಪಾಲಿಕೆಯಲ್ಲಿ ಮತದಾನದ ಹಕ್ಕು ನೀಡಲು ಹೇಗೆ ಸಾಧ್ಯ? ಎಂದು ತಕರಾರು ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ. ಶ್ರೀರಂಗಪಟ್ಟಣ ತಾಲೂಕು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಆಧಾರದಲ್ಲಿ ಹಾಗೂ ಮೈಸೂರಿನ ಜೆಪಿ ನಗರದಲ್ಲಿ ತಮ್ಮ ಹೆಸರಿನಲ್ಲಿ ಮನೆ ಇರುವ ಕಾರಣ ಮೈಸೂರು ಮಹಾನಗರ ಪಾಲಿಕೆಯಲ್ಲಿ ಮತದಾನದ ಹಕ್ಕು ಪಡೆದಿರುವುದಾಗಿ ಇವರು ವಾದಿಸಿದ್ದಾರೆ. ಆದರೆ ಶ್ರೀರಂಗಪಟ್ಟಣವು ಮಂಡ್ಯ ಜಿಲ್ಲಾ ಚುನಾವಣಾ ವ್ಯಾಪ್ತಿಗೆ ಸೇರಿರುವ ಕಾರಣ ಇವರ ಈ ವಾದ ಸರಿಯಲ್ಲ.

ಇವರು ಪ್ರತಿನಿಧಿಸುವ ವಿಧಾನಪರಿಷತ್ ಕ್ಷೇತ್ರವು ಮಂಡ್ಯ ಜಿಲ್ಲೆಯ ಸ್ಥಳೀಯ ಸಂಸ್ಥೆಗೆ ಸೇರಿದೆ. ಅಲ್ಲದೆ, ಇವರ ಮತದಾನದ ಹಕ್ಕು ಬೆಂಗಳೂರಿನ ಯಶವಂತಪುರ ಕ್ಷೇತ್ರದಲ್ಲಿದೆ. ಜೊತೆಗೆ ಇವರು ಮದ್ದೂರು ತಾಲೂಕು ನಿವಾಸಿಯಾಗಿರುವ ಕಾರಣ ಶ್ರೀರಂಗಪಟ್ಟಣಕ್ಕೂ ಸಂಬಂಧಪಟ್ಟವರಲ್ಲ. ಹಾಗಾಗಿ ಇವರಿಗೆ ಮೈಸೂರು ಮಹಾನಗರ ಪಾಲಿಕೆ ಮತದಾನದ ಹಕ್ಕು ನಿರಾಕರಿಸಬೇಕು ಎಂದು ಪ್ರತಿಪಾದಿಸಿದ್ದಾರೆ. ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ಜೆಡಿಎಸ್ ಮುಖಂಡರಾದ ಫಾಲ್ಕನ್ ಬೋರೆಗೌಡ, ಮುದ್ದುರಾಜ್, ಸತ್ಯನಾರಾಯಣ, ಚಂದ್ರು ಗೌಡ ಮತ್ತಿತರರು ಹಾಜರಿದ್ದರು.

ಆರ್ಥಿಕ ಅಭಿವೃದ್ಧಿ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಸೆ.3– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಜಿಲ್ಲೆಯಲ್ಲಿ ವಾಸಿಸುವ ಪರಿಶಿಷ್ಟ ಪಂಗಡಗಳು ಮತ್ತು ಅಲೆಮಾರಿ–ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಹಾಗೂ ಆದಿವಾಸಿ ಜನಾಂಗದವರಿಗೆ ಆರ್ಥಿಕ ಅಭಿವೃದ್ಧಿ ಯೋಜನೆ ಸೌಲಭ್ಯ ಕಲ್ಪಿಸಲು ಅರ್ಹ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಿದ್ದು, ಸೆ.15ರೊಳಗಾಗಿ https://sevasindhu.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ:0821–2430022 ಸಂಪರ್ಕಿಸಿ.

ವಸತಿರಹಿತರ ಆಶ್ರಯ ಕೇಂದ್ರದಲ್ಲಿ ಅಪರಿಚಿತ ಸಾವು

ಮೈಸೂರು,ಸೆ.3–ಮಂಡಿಮೊಹಲ್ಲಾದ ನ್ಯೂ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಸತಿ ರಹಿತರ ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಅಪರಿಚಿತ ವ್ಯಕ್ತಿಯೋರ್ವ ಸಾವನ್ನಪ್ಪಿದ್ದು, ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 5 ವರ್ಷಗಳ ಹಿಂದೆ 55 ವರ್ಷದ ವ್ಯಕ್ತಿ ಮೈಸೂರಲ್ಲಿ ಗಾರೆ ಕೆಲಸ ಮಾಡಿಕೊಂಡು ರಾತ್ರಿ ವೇಳೆ ರೈಲ್ವೆ ನಿಲ್ದಾಣ, ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಮಲಗುತ್ತಿದ್ದು, 2017ರಲ್ಲಿ ಈ ವಸತಿ ರಹಿತರ ಆಶ್ರಯ ಕೇಂದ್ರಕ್ಕೆ ಕೆಲವರು ಕರೆತಂದು ದಾಖಲು ಮಾಡಿದ್ದು, ತನ್ನ ಹೆಸರು ಮಣಿ ಎಂ.ಎಸ್., ಹರೆಯೂರು ಗ್ರಾಮ, ಮಸಗೋಡು ಪೋಸ್ಟ್, ಸೋಮವಾರಪೇಟೆ ತಾಲೂಕು ಎಂದು ಸಂಸ್ಥೆಗೆ ತಿಳಿಸಿದ್ದ. ಅನಾರೋಗ್ಯದಿಂದ ಬಳಲುತ್ತಿದ್ದ ಈತ ಸೆ.2 ರಂದು ಸಾವನ್ನಪ್ಪಿದ್ದು, ವಾರಸುದಾರರು ದೂ: 0821–2418339, 2418313, 2418513, 9845862184 ಮೂಲಕ ಸಂಪರ್ಕಿಸಲು ಮಂಡಿ ಠಾಣೆ ಪೊಲೀಸರು ಕೋರಿದ್ದಾರೆ.

ಹೆಚ್.ಶಿವರಾಮು ನಿಧನ



ಯಳಂದೂರು,ಸೆ.3–ತಾಲೂಕಿನ ವೈ.ಕೆ.ಮೋಳೆ ಗ್ರಾಮದ ನಿವಾಸಿ ಅಂಬಳೆ ಗ್ರಾಪಂ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಹೆಚ್.ಶಿವರಾಮು (54) ಹೃದಯಾಘಾತದಿಂದ ಶನಿವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಅವರ ಜಮೀನಿನಲ್ಲಿ ನೆರವೇರಲಿದೆ.

FARM SITES
On Nanjangud Road, 15 minutes from Airport, Beside National Highway, Teak trees with all amenities, Ready for Construction. Rs. 350/sft onwards
Call: 76767 71396

HOUSE FOR SALE
30X40 MUDA APPROVED
East Facing 2 BHK in Sapthamathruka Layout. Starts from 45 L
Call : 99808 21777

DTCP APPROVED SITES FOR SALE
Ready to register 30x40 Plots @ Rs. 925/- Sqft., Near Mysore Airport
15 mins from Ring Road Junction 1km to industrial Area & Upcoming N.I.E University, Film City. Call/WhatsApp:
8151056881

ತಕ್ಷಣ ಬೇಕಾಗಿದ್ದಾರೆ
Experienced Pharma AIDE (ಔಷಧಿಗಳ ಬಗ್ಗೆ ಅನುಭವವುಳ್ಳ ಸಹಾಯಕರು) For Medical Shop. Contact:
9880587586

FOR SALE
40x60 site for sale at Huyilalu village, Yelawala hobli, Mysore Taluk, and the Layout Known as Nithyaananda Sagar Layout, Mysore. For contact:
9632865056 / 9481940921

Hi! TAXI
ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
Shakthi Nagar MYSURU
9611177599

BOOKINGS OPEN FOR
Construction of Brand New Architecture Designed Houses
MUDA APPROVED
20'x40' - 29.5 Lakhs
30'x40' - 42.5 Lakhs
Near St. Joseph's Central School, Hunsur Road, Mysore.
9740767576, 8884001233

ನಿವೇಶನ ಮಾರಾಟಕ್ಕಿದೆ
27x36 ಅಡಿಗಳು, ದಕ್ಷಿಣ ದಿಕ್ಕು, ನಗರ ಸಭೆ ಖಾತೆ, PES ಬಡಾವಣೆ, ಮಂಡ್ಯ
Mob.: 8884001233

FURNITURE FOR SALE
Raymond Readymade Showroom
- Store in Operational
- Very Good Condition
- Fixtures, Airconditioner, Lighting etc.,
Contact: 7338161999
D.D. Urs Road, Mysuru.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PUBLIC NOTICE

I, CHANDRA .A. S @ CHANDRU A. S S/o. LATE SIDDEGOWDA A.B aged about 58 years, residing at 704, Hinkal Bogadi main road, Basavaraju circle, Hinkal , Mysuru City- 570017 do hereby confirm that I being recognised and also identified by name CHANDRU A.S & CHANDRA A.S & HEREBY NOTIFY THAT my name in few property related records is mentioned as Chandra A.S and in few records it is mentioned as Chandru A.S, I Hereby notify that both these names pertains to me only and to this effect I have also sworn to an affidavit before the Notary Public Manjunatha as on 30-08-2022.

Dt: 03-09-2022 Sd/- CHANDRA A.S @ CHANDRU A.S

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಎಂ.ಕೆ.ಸುಬ್ಬಣ್ಣ

ಇವರು ದಿ.26.08.2022 ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ದಿನಾಂಕ: 05.09.2022ನೇ ಸೋಮವಾರ ಬೆಳಿಗ್ಗೆ 7.30 ಗಂಟೆಗೆ ಷಬ್ರ॥ ಶ್ರೀ ಮಹೇಶ್ವರಸ್ವಾಮಿಗಳವರು ಶ್ರೀ ಕಾರ್ಯಸ್ವಾಮಿ ಮಠ, ಸಂಗಮ ಕ್ಷೇತ್ರ ಇವರ ದಿವ್ಯಪಾದ ಪೂಜೆ ಹಾಗೂ ಮಧ್ಯಾಹ್ನ 12.00 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹ, ಮಾದನಹಳ್ಳಿ ಗ್ರಾಮ, ಹುಲ್ಲಹಳ್ಳಿ (ಹೋ). ನಂಜನಗೂಡು (ತಾ.) ಇಲ್ಲಿ ಏರ್ಪಡಿಸಲಾಗಿದೆ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಸಂಗಮ್ಮ ಮತ್ತು ಪುತ್ರ ಎಂ.ಎಸ್ ಶಿವಪ್ರಕಾಶ್ (ಅಂಕಿನಾಥ್) ಹಾಗೂ ಮೊಮ್ಮಕ್ಕಳು, ಲೇಟ್ ಕಾಂತಪ್ಪನವರ ಕುಟುಂಬವರ್ಗದವರು ಹಾಗೂ ಮಾದನಹಳ್ಳಿ ಸಮಸ್ತ ಗ್ರಾಮಸ್ಥರು

ಪೂಜ್ಯರ ಪುಣ್ಯಸ್ಮರಣೆ



ಶ್ರೀಮತಿ ಗೌರಮ್ಮ ಮತ್ತು ಶ್ರೀ ಸಜ್ಜೇಗೌಡ

ನಿಧನ 15.02.1978 ನಿಧನ: 03.09.1993

ಅಪ್ಪಾಜಿ ನೀವು ನಮ್ಮನಗಲಿ ಇಂದಿಗೆ 29 ವರ್ಷಗಳು ಸಂದಿವೆ ಅಮ್ಮ ನೀವು ನಮ್ಮನಗಲಿ ಇಂದಿಗೆ 44 ವರ್ಷಗಳು ಸಂದಿವೆ ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ ನಿಮ್ಮ ಆತ್ಮ ಭಗವಂತನ ಪಾದಾರವಿಂದಗಳಲ್ಲಿ ಶಾಶ್ವತವಾಗಿರಲಿ ಹಾಗೂ ನಿಮ್ಮ ಶುಭಾಶೀರ್ವಾದ ನಮ್ಮಗಳೆಲ್ಲರ ಮೇಲಿರಲಿ ಎಂದು ಪ್ರಾರ್ಥಿಸುವ.

ಹೆಚ್.ಎಸ್.ರವಿಕುಮಾರ್–ಹೆಚ್.ಪಿ.ಲೀಲಾವತಿ, ನ್ಯೂ ಮೈಲಾರಲಿಂಗೇಶ್ವರ ಪ್ಯಾಕೇಜಿಂಗ್ ವುಡ್‌ಇಂಡಸ್ಟ್ರೀಸ್, ಮೊಮ್ಮಕ್ಕಳು, ಹೆಚ್.ಆರ್.ನಿಸರ್ಗ, ಹೆಚ್.ಆರ್.ನಿಖಿತ, ಹೆಚ್.ಆರ್.ಲಲನ, ಹಳೆ ಕೆ.ಆರ್.ನಗರ ರಸ್ತೆ, ಹುಣಸೂರು

HERITAGE HOMES
MYSURU - HUNSUR HIGHWAY
MEGA RESIDENTIAL TOWNSHIP
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
30x40 30x50 40x60 50x80
MUDA LIMITS
ಅತಿಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೇವಲ 550/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ ಕೆಲವೇ ಸೈಟ್‌ಗಳು ಮಾತ್ರ
ಅದ್ವಿಕಾ ವೆಂಚರ್ಸ್
9071386615, 9620016941

HOME LOAN
- House Purchase Loan
- Site Purchase Loan
- House Construction Loan
- Home Mortgage Loan
- Balance Transfer & Topup Loan
☑ Quick Process
☑ Attractive rate of interest
ARSHAD ✆ 8088294674
Executive, Home Loan Mortgages, Mysore

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.,) ಮೈಸೂರು

ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು –570004 ಫೋನ್: 0821- 2447492

33ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ

ಸಂಘದ ಸರ್ವಸದಸ್ಯರ 33ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: **04.09.2022 ನೇ ಭಾನುವಾರ ಬೆಳಿಗ್ಗೆ 10–00 ಗಂಟೆಗೆ, ಮೈಸೂರಿನ ಜೆ.ಕೆ. ಗ್ರೌಂಡಿನ ಮೆಡಿಕಲ್ ಅಲೂಮ್ನಿ ಅಸೋಸಿಯೇಷನ್** ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಮಹೇಶ್** ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಪ್ರಮಾಣ ಪತ್ರದ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಅರ್ಹ ಸದಸ್ಯರುಗಳು ಇದನ್ನೇ ಆಹ್ವಾನಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ವಿಶೇಷ ಸೂಚನೆ :

1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಸಂಘದ ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರಲು ಕೋರಿದೆ.
2. ಸದಸ್ಯರು ಕಡ್ಡಾಯವಾಗಿ ಮಾಸ್ಕನ್ನು ಧರಿಸಿ ಸಭೆಗೆ ಬರುವುದು

ಸಹಿ/– ಮುಖ್ಯಕಾರ್ಯನಿರ್ವಾಹಣಾಧಿಕಾರಿ

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್‌ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ –570018
ಸಹಾಯವಾಣಿ ಸಂಖ್ಯೆ: 0821–2001737
itstaff_ulb_hootagalli@yahoo.com

ಸಂ:ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್–08/2022–23 ದಿ: 02.09.2022

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2ರ ನಿಬಂಧನೆಗಳಿಗೊಳ್ಳಪಟ್ಟು ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನ 15ನೇ ಹಣಕಾಸು ಮತ್ತು ಎಸ್.ಎಫ್.ಸಿ ಯೋಜನೆಯ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್ ಮೆಂಟ್ ಮೂಲಕ ಒಟ್ಟು 12 ಕಾಮಗಾರಿಗಳಲ್ಲಿ 03 ಕಾಮಗಾರಿಗಳು ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ, 01 ಕಾಮಗಾರಿ ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ, ಉಳಿದ 08 ಕಾಮಗಾರಿಗಳು ಇತರೆ ಗುತ್ತಿಗೆದಾರರಿಗೆ ಮೀಸಲಾಗಿಡಲಾಗಿದೆ. ಕಾಮಗಾರಿಗಳ ಕನಿಷ್ಠ ಮೊತ್ತ ರೂ.7.50 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.50.00 ಲಕ್ಷಗಳು. ಲೋಕೋಪಯೋಗಿ ಇಲಾಖೆಯ ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಟರ್‌ಗಳನ್ನು http://eproc.karnataka.gov.in ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. **ಟೆಂಡರ್ ಸಲ್ಲಿಸುವ ಕೊನೆಯ ದಿ: 19.09.2022 ಸಂಜೆ 5:30 ಗಂಟೆಗೆ ಹಾಗೂ ಟೆಂಡರ್ ತೆರೆಯುವ ದಿ: 21.09.2022 ಬೆಳಗ್ಗೆ 11:00 ಗಂಟೆಗೆ.** ಇ.ಎಂ.ಡಿ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಸಂಪರ್ಕಿಸಬಹುದಾಗಿದೆ ಹಾಗೂ ಕಛೇರಿ ವೆಬ್‌ಸೈಟ್ ಅನ್ನು ವಿಕ್ಷೀಸಬಹುದಾಗಿದೆ. ಜಿ.ಎಸ್.ಟಿಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

DIPR/DDMYS/MCA/443/2022-23

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ರಿ)

ಸ್ಥಾಪನೆ : 1994
ಪ್ರಧಾನ ಶಾಖೆ : ನಂ 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–04. ಮೊ : 0821-2330014
ಶಾಖಾ ಕಛೇರಿ : ನಂ ಸಿಎ16, ವಿಜಯನಗರ, ಎರಡನೇ ಹಂತ, ಮೈಸೂರು–17. ಮೊ : 0821-2411556
Mail ID : agastyasociety.mysore@gmail.com GST No. 29AADAA7412N1ZI

2021-22 ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೆ,
ಮೇಲ್ಕಂಡ ಸೊಸೈಟಿಯ **2021- 22**ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು, ದಿನಾಂಕ: **04/09/2022** ನೇ ಭಾನುವಾರ ಬೆಳಿಗ್ಗೆ: **10:00** ಗಂಟೆಗೆ ಸಂಘದ ಅಧ್ಯಕ್ಷರಾದ, ಶ್ರೀ ಸಿ.ವಿ.ಪಾರ್ಥಸಾರಥಿ ಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮೈಸೂರು

ಮಾನ್ಯ ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಅಂಚೆಯ ಮುಖಾಂತರ ಈಗಾಗಲೇ ಕಳುಹಿಸಿದ್ದು, ಅದು ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳಿಗೆ ಮೇಲ್ಕಂಡ ದಿನಾಂಕದಂದು ಸಕಾಲಕ್ಕೆ ಮಹಾಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಶ್ರೀಮತಿ ಎನ್ ವೀಣಾ
ಪ್ರಭಾರ ಕಾರ್ಯದರ್ಶಿ

ವಿಶೇಷ ಸೂಚನೆ :–

1. ಸದಸ್ಯರು ಕಡ್ಡಾಯವಾಗಿ ಷೇರು ಪಾಸ್‌ಪುಸ್ತಕ ತರತಕ್ಕದ್ದು.
2. ಸಂಘದ **2021-22** ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಿಂದಿನ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿಗಳು ವೆಬ್‌ಸೈಟ್ **www.agastyasociety.com** ರಲ್ಲಿ ವೀಕ್ಷಿಸಲು ಹಾಗೂ ಕಛೇರಿಯ ವ್ಯವಹಾರದ ವೇಳೆಯಲ್ಲಿ ಪರಿಶೀಲಿಸಲು ಲಭ್ಯವಿರುತ್ತದೆ.
3. ಇದುವರೆಗೂ ಲಾಭಾಂಶ ಪಡೆಯದೇ ಇರುವ ಸದಸ್ಯರು ಕಛೇರಿಯ ವ್ಯವಹಾರದ ವೇಳೆಯಲ್ಲಿ ತಮ್ಮ ಷೇರು ಪಾಸ್‌ಪುಸ್ತಕ ಹಾಜರುಪಡಿಸಿ ಪಡೆಯುವುದು. ಬೈಲಾ ಸಂಖ್ಯೆ **91**ರ ರೀತ್ಯ ಲಾಭಾಂಶ ಘೋಷಿಸಿದ ತಾರೀಖಿನಿಂದ **3** ವರ್ಷದ ಒಳಗಾಗಿ ಸದಸ್ಯರು ಲಾಭಾಂಶ ಪಡೆಯದೇ ಇದ್ದರೆ ಅಂತಹ ಮೊಬಲಗನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡಲಾಗುವುದು. ಈ ಸೂಚನೆಯನ್ನು ಅಂತಿಮ ಸೂಚನಾಪತ್ರ ಎಂದು ಪರಿಗಣಿಸುವುದು.
4. ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಉಪನಿಯಮಗಳ ಪ್ರಕಾರ ಸರ್ವಸದಸ್ಯರ ಸಭೆಗೆ ಸದಸ್ಯರ ಹಾಜರಾತಿ ಕಡ್ಡಾಯವಾಗಿರುತ್ತದೆ.

ಪುರಸಭಾ ಕಾರ್ಯಾಲಯ, ನಾಗಮಂಗಲ, ಮಂಡ್ಯ ಜಿಲ್ಲೆ

ಸಂಖ್ಯೆ:ಪುಕಾನಾ/ಕಿಅ/ವಾರ್ಷಿಕ ನಿರ್ವಹಣೆ/ಟೆಪ್ರ–1/2022–23 ದಿನಾಂಕ:22.08.2022

ಟೆಂಡರ್ ಪ್ರಕಟಣೆ

ನಾಗಮಂಗಲ ಪುರಸಭಾ ಕಾರ್ಯಾಲಯಕ್ಕೆ 2022–23ನೇ ಸಾಲಿಗೆ ಪುರಸಭಾ ನಿಧಿ ಹಾಗೂ ಒಳಚರಂಡಿ ಹಾಗೂ ನೀರು ಸರಬರಾಜು ನಿಧಿಯಡಿ ವಾರ್ಷಿಕ ಟೆಂಡರ್‌ಗಳನ್ನು ನಿರ್ವಹಿಸಲು, ಟೆಂಡರ್‌ನ್ನು ಕೆಜಿ–1 ನಿಯಮಾವಳಿ ರೀತ್ಯಾ ಆಹ್ವಾನಿಸಲಾಗಿದೆ. ಅಧಿಕೃತ ಸರಬರಾಜುದಾರರು/ದುರಸ್ಥಿದಾರರು ತಮ್ಮ ಕನಿಷ್ಠ ದರವನ್ನು ನಮೂದಿಸಿ ನಿಗದಿಪಡಿಸಿದ ಟೆಂಡರ್‌ಫಾರಂ, ಡಿ.ಡಿ ಹಾಗೂ ದಾಖಲಾತಿಗಳೊಂದಿಗೆ ಮೊಹರ್ ಮಾಡಿದ ಲಕೋಟೆಗಳಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. (1) ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **05.09.2022ರ ಸಂಜೆ 4.00 ಗಂಟೆವರಗೆ.** (2) ಭರ್ತಿ ಮಾಡಿದ ಕೊಟೇಷನ್ ಫಾರಂಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ **:06.09.2022 ಸಂಜೆ 4.30 ಗಂಟೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಬೇಕಾದ ಸ್ಥಳ : **ಪುರಸಭೆ, ನಾಗಮಂಗಲ.** (4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : **06.09.2022ರ ಸಂಜೆ 5.00 ಗಂಟೆ** ಹಾಗೂ ಟೆಂಡರ್ ತೆರೆಯದಿದ್ದಲ್ಲಿ ಮುಂದಿನ ದಿನಾಂಕವನ್ನು ತಿಳಿಸಲಾಗುವುದು. (5) ಟೆಂಡರ್ ಕಾಲಾವಧಿ : **365 ದಿನಗಳು.**

ಕ್ರ ಸಂ	ವಿವರ	ಟೆಂಡರ್ ಮೊತ್ತ (ಅಂದಾಜು ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ಮೊತ್ತ ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)
1	ನಾಗಮಂಗಲ ಪುರಸಭೆಯ ನೈರ್ಮಲ್ಯ ಹಾಗೂ ನೀರು ಸರಬರಾಜು ವಿಭಾಗಕ್ಕೆ ಬೇಕಾದ ಅವಶ್ಯವಿರುವ ಐಎಸ್ಐ ಮಾದರಿ ಕ್ರಿಮಿನಾಶಕ ಹಾಗೂ ರಾಸಾಯನಿಕ ವಸ್ತುಗಳನ್ನು ಸರಬರಾಜು ಮಾಡುವುದು.	3.00	7500/–	1000/– + 18% ಜಿಎಸ್‌ಟಿ
2	ನಾಗಮಂಗಲ ಪುರಸಭೆಯ ನೀರು ಸರಬರಾಜು ವಿಭಾಗಕ್ಕೆ ಬೇಕಾದ ಅವಶ್ಯವಿರುವ ಐಎಸ್ಐ ಮಾದರಿ ಪಾಲಿ ಅಲ್ಯೂಮಿನಿಯಂ ಕ್ಲೋರೈಡ್ (P.A.C) ಪೌಡರ್‌ನ್ನು ಸರಬರಾಜು ಮಾಡುವುದು	5.00	12500/–	1000/– + 18% ಜಿಎಸ್‌ಟಿ
3	ನಾಗಮಂಗಲ ಪುರಸಭೆಯ ನೀರು ಸರಬರಾಜು ವಿಭಾಗಕ್ಕೆ ಬೇಕಾದ ಅವಶ್ಯವಿರುವ ಐಎಸ್ಐ ಮಾದರಿ ಕ್ಲೋರಿನೇಷನ್ ಗ್ಯಾಸ್ ಸಿಲಿಂಡರ್‌ನ್ನು ಸರಬರಾಜು ಮಾಡುವುದು	3.00	7500/–	1000/– + 18% ಜಿಎಸ್‌ಟಿ
4	ನಾಗಮಂಗಲ ಪಟ್ಟಣ ಪಂಚಾಯಿತಿಗೆ ನೀರು ಸರಬರಾಜು ವಿಭಾಗಕ್ಕೆ ಅಗತ್ಯವಿರುವ ಐಎಸ್ಐ ಮಾದರಿ ಪಿವಿಸಿ, ಜಿಐ, ಪೈಪ್ಸ್ ಹಾಗೂ ಬಿಡಿಭಾಗಗಳನ್ನು ಸರಬರಾಜು ಮಾಡುವುದು.	10.00	25000/–	1000/– + 18% ಜಿಎಸ್‌ಟಿ
5	ನಾಗಮಂಗಲ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಪಂಪು ಕೊಳವೆಬಾವಿಗಳ ದುರಸ್ಥಿಗೆ ಅವಶ್ಯವಿರುವ ಐಎಸ್ಐ ಮಾದರಿ ಬಿಡಿಭಾಗಗಳನ್ನು ಸರಬರಾಜು ಮಾಡುವುದು.	4.00	10000/–	1000/– + 18% ಜಿಎಸ್‌ಟಿ
6	ನಾಗಮಂಗಲ ಪಟ್ಟಣಕ್ಕೆ ಕುಡಿಯುವ ನೀರೊದಗಿಸುತ್ತಿರುವ **5, 7½, 10, 12½, 15,** ಹೆಚ್.ಪಿ.ವಿದ್ಯುತ್ ಚಾಲಿತ ಸರ್ಬ್ ಮರ್ಸಿಬಲ್ ಮೋಟಾರ್ ಹಾಗೂ ಪಂಪು ಹಾಗೂ ಹಿರಿಕೆರೆ ಪಂಪೌಸ್ ನಲ್ಲಿರುವ 12½,ಸೆಂಟ್ರಿಪ್ಯೂಗಲ್ ಇಂಡಕ್ಸನ್ ಮೋಟಾರ್ ಹಾಗೂ ಪಂಪು, 20 ಹೆಚ್.ಪಿ ಮೋನೋ ಬ್ಲಾಕ್ ಮೋಟಾರ್ ಪಂಪು ಸೂಳೆಕೆರೆ ಪಂಪೌಸ್ ನಲ್ಲಿರುವ 40, ಹೆಚ್ ಪಿ ಟರ್ಬೋ ಹಾಗೂ 20, 3, ಹಾಗೂ 1 ಹೆಚ್ ಪಿ ಮೋನೋಬ್ಲಾಕ್ ಇಂಡಕ್ಸನ್ ಮೋಟಾರ್ ಹಾಗೂ ಪಂಪುಗಳಿಗೆ ಬಿಡಿಭಾಗಗಳನ್ನು ಒದಗಿಸಿ ದುರಸ್ಥಿಪಡಿಸುವುದು.	12.00	30000/–	1000/– + 18% ಜಿಎಸ್‌ಟಿ

*** ಮೇಲಿನ ಕ್ರಮ ಸಂಖ್ಯೆ (1), ಕ್ರಮ ಸಂಖ್ಯೆ (2), ಕ್ರಮ ಸಂಖ್ಯೆ (3), ಕ್ರಮ ಸಂಖ್ಯೆ (4) ಗಳಿಗೆ ಗುತ್ತಿಗೆದಾರರ ದರ್ಜೆ : ಅಧಿಕೃತ ಸರಬರಾಜುದಾರರು. ಹಾಗೂ ಕ್ರಮ ಸಂಖ್ಯೆ (5), ಕ್ರಮ ಸಂಖ್ಯೆ (6) ಗಳಿಗೆ ಗುತ್ತಿಗೆದಾರರ ದರ್ಜೆ : ಅಧಿಕೃತ ಮಾರಾಟಗಾರರು. * ಮೇಲಿನ ಎಲ್ಲಾ ಕ್ರಮ ಸಂಖ್ಯೆ (1) ರಿಂದ ಕ್ರಮ ಸಂಖ್ಯೆ (6) ರವರೆಗೆ ಕಾಲಾವಧಿ : 2022–23ನೇ ಆರ್ಥಿಕ ವರ್ಷಕ್ಕೆ. ಷರತ್ತುಗಳು:– (01) ಹೆಚ್ಚಿನ ವಿವರಗಳನ್ನು ಹಾಗೂ ಷರತ್ತುಗಳನ್ನು ಪುರಸಭೆ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.**

ಸಹಿ/– (ಎನ್.ಜಿ.ಆಶಾ) ಅಧ್ಯಕ್ಷರು, ಪುರಸಭೆ, ನಾಗಮಂಗಲ
ಸಹಿ/– (ಜಾಫರ್ ಷರೀಫ್) ಉಪಾಧ್ಯಕ್ಷರು, ಪುರಸಭೆ, ನಾಗಮಂಗಲ
ಸಹಿ/– (ಎಂ.ಸಿ.ಚನ್ನಪ್ಪ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ನಾಗಮಂಗಲ
ಸಹಿ/– (ಅಮೃತ ಜಿ) ಮುಖ್ಯಾಧಿಕಾರಿ, ಪುರಸಭೆ, ನಾಗಮಂಗಲ

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/316/2022–23